ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 21 ಶನಿವಾರ 2026

ಸಂಪುಟ: 46 | ಸಂಚಿಕೆ: 329 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*




ಟಿ.ಎ.ಪಿ.ಸಿ.ಎಂ.ಎಸ್ ಸೊಸೈಟಿ ನಿರ್ದೇಶಕರು ಹಾಗೂ ಜೆಡಿಎಸ್ ಯುವಮುಖಂಡರಾದ
ಶ್ರೀ ಕೆ.ಚಂದ್ರಶೇಖರ್ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
Happy Birthday
VISMAYA
8050302424

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಮಾರ್ಚ್ 21 ಶನಿವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 329 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶಿವಮೊಗ್ಗ ಹುಲಿ–ಸಿಂಹ ಧಾಮದಲ್ಲಿ ಘೋರ ದುರಂತ

ಚಿಕಿತ್ಸೆ ನೀಡುವ ವೇಳೆ ನೀರಾನೆ ದಾಳಿ; ಪಶು ವೈದ್ಯೆ ಸಾವು

ಶಿವಮೊಗ್ಗ, ಮಾ.20– ತಾವರೆಕೊಪ್ಪ ಹುಲಿ, ಸಿಂಹ ಧಾಮದಲ್ಲಿ ಗುರುವಾರ ತಡರಾತ್ರಿ ಚಿಕಿತ್ಸೆ ನೀಡಲು ತೆರಳಿದ್ದ ವೇಳೆ ನೀರಾನೆ ದಾಳಿಯಿಂದ ತೀವ್ರ ಗಾಯಗೊಂಡಿದ್ದ ವನ್ಯಜೀವಿ ವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಬೆಳಿಗ್ಗೆ ನಿಧನರಾಗಿದ್ದಾರೆ.

ಸಮೀಕ್ಷಾ ರೆಡ್ಡಿ (26) ಮೂಲತಃ ಬೆಂಗಳೂರಿನ ಬನ್ನೇರುಘಟ್ಟ ನಿವಾಸಿ. ಹೆಬ್ಬಾಳದ ಪಶುವೈದ್ಯಕೀಯ ಕಾಲೇಜಿನಲ್ಲಿ (ಜಿಕೆವಿಕೆ) ಪದವಿ ಮುಗಿಸಿದ್ದ ಅವರು ಒಂದೂವರೆ ತಿಂಗಳ ಹಿಂದಷ್ಟೇ ಮೃಗಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ತರಬೇತಿ ಪಡೆಯುತ್ತಿದ್ದರು. ಗುರುವಾರ ರಾತ್ರಿ ಸುಮಾರು 10.30 ರ ಸುಮಾರಿಗೆ ಅವರು ಮೃಗಾಲಯದ ಆಸ್ಪತ್ರೆಗೆ ಹೋಗಿ ಹಕ್ಕಿಯೊಂದಕ್ಕೆ ಚಿಕಿತ್ಸೆ ನೀಡಿದರು. ನಂತರ ಅವರು ಗರ್ಭಿಣಿ ಹಿಪಪಾಟಮಸ್‌ನ ಆವರಣಕ್ಕೆ ಪ್ರವೇಶಿಸಿ ಥರ್ಮಲ್ ಕ್ಯಾಮೆರಾ ಬಳಸಿ ಅದರ ದೇಹದ ಉಷ್ಣತೆಯನ್ನು ಪರಿಶೀಲಿಸಿದರು. ಈ ಸಮಯದಲ್ಲಿ, ನೀರಾನೆ ಅವರ ಮೇಲೆ ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿತು.

ರಾತ್ರಿ 11.45ರ ಸುಮಾರಿಗೆ ನಡೆದ ಈ ಘಟನೆಯಲ್ಲಿ ಡಾ. ಸಮೀಕ್ಷಾ ರೆಡ್ಡಿ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ



ಚಿಕಿತ್ಸೆ ನೀಡಲಾಗುತ್ತಿತ್ತು. ವೈದ್ಯರು ತುರ್ತಾಗಿ ಶಸ್ತ್ರಚಿಕಿತ್ಸೆಯನ್ನೂ ನಡೆಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದ ಪಶುವೈದ್ಯೆ ಇಂದು ಬೆಳಿಗ್ಗೆ 6:30ರ ಸುಮಾರಿಗೆ ಕೊನೆಯುಸಿರು ಎಳೆದಿದ್ದಾರೆ.

ಗರ್ಭಿಣಿ ಆಗಿದ್ದ ನೀರಾನೆ ಇನ್ನು ನಾಲ್ಕು ದಿನಗಳಲ್ಲಿ ಅದರ ಹೆರಿಗೆಗೆ ದಿನ ನಿಗದಿಯಾಗಿತ್ತು. ಅದು ರಾತ್ರಿ ಆಹಾರ ಸೇವಿಸಿರದ ಕಾರಣ ಪರಿಶೀಲನೆಗೆ ಡಾ.ಸಮೀಕ್ಷಾ ಅದನ್ನು ಪರೀಕ್ಷಿಸಲು ತೆರಳಿದ್ದಾರೆ. ಈ ವೇಳೆ ಆ ನೀರಾನೆ ದಾಳಿ ಮಾಡಿದೆ. ತೀವ್ರ ರಕ್ತ ಸ್ರಾವದಿಂದ ಪ್ರಜ್ಞಾಹೀನರಾಗಿದ್ದ ಅವರನ್ನು ಮೃಗಾಲಯ ಸಿಬ್ಬಂದಿ ಇಲ್ಲಿನ ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಿದ್ದರು.


ಸಮೀಕ್ಷಾ ರೆಡ್ಡಿ

ಸಚಿವರ ಸಂತಾಪ: ನೀರಾನೆ ದಾಳಿಯಿಂದ ಪಶು ವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಸಾವಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಸಂತಾಪ ಸೂಚಿಸಿದ್ದಾರೆ. ಇದೊಂದು ದುರದೃಷ್ಟಕರ ಘಟನೆ ಎಂದು ಶೋಕ ವ್ಯಕ್ತಪಡಿಸಿರುವ ಅವರು, ಈ ದುಃಖದ ಸಂದರ್ಭದಲ್ಲಿ ಮೃತ ವೈದ್ಯರ ಕುಟುಂಬದೊಂದಿಗೆ ಸರ್ಕಾರ ನಿಲ್ಲುತ್ತದೆ. ಪ್ರತಿಯೊಂದು ಜೀವವೂ ಅಮೂಲ್ಯ. ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದೇವರು ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ಪರಿಹಾರಕ್ಕೆ ಸೂಚನೆ: ಮೃತ ಯುವ ವೈದ್ಯೆಯ ಕುಟುಂಬದವರಿಗೆ ನಿಯಮಾನುಸಾರ ಕೂಡಲೇ ಪರಿಹಾರ ನೀಡುವಂತೆ ಸೂಚಿಸಿರುವ ಅವರು, ರಾಜ್ಯದ ಎಲ್ಲ ಮೃಗಾಲಯಗಳಲ್ಲಿರುವ ಪಶುವೈದ್ಯರು ಯಾವುದೇ ವನ್ಯಜೀವಿಗೆ ಚಿಕಿತ್ಸೆ ನೀಡುವಾಗ ಪ್ರಮಾಣಿತ ಮಾನದಂಡ (ಎಸ್.ಓ.ಪಿ.) ಪಾಲಿಸಬೇಕು ಎಂದೂ ಸೂಚನೆ ನೀಡಿದ್ದಾರೆ. ಸಮೀಕ್ಷಾ ರೆಡ್ಡಿ ಚಿಕಿತ್ಸೆ ನೀಡಲು ತೆರಳಿದ್ದ ವೇಳೆ ಅಲ್ಲಿ ಸುರಕ್ಷತಾ ನಿಯಮಗಳ ಪಾಲನೆಯಾಗಿದ್ದವೇ ಎಂಬುದರ ಬಗ್ಗೆ ತನಿಖೆ ನಡೆಸಿ ಏಳು ದಿನಗಳ ಒಳಗೆ ವರದಿ ನೀಡುವಂತೆ ಸಚಿವ ಈಶ್ವರ ಬಿ ಖಂಡ್ರೆ ಅವರು ಶಿವಮೊಗ್ಗದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಡಿಜಿಪಿ ರಾಮಚಂದ್ರರಾವ್ ಅಶ್ಲೀಲ ವಿಡಿಯೋಗಳು ಒರಿಜಿನಲ್!

ಎಡಿಜಿಪಿ ಆರ್. ಹಿತೇಂದ್ರ ನೇತೃತ್ವದ ತನಿಖಾ ಸಮಿತಿ ಸ್ಪಷ್ಟನೆ

ಬೆಂಗಳೂರು, ಮಾ.20(ಕೆಎಂಶಿ)– ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ರಾಮಚಂದ್ರ ರಾವ್ ವಿರುದ್ಧದ ಅಶ್ಲೀಲ ವಿಡಿಯೊ ನೈಜ ಎಂಬುದು ತನಿಖೆಯಿಂದ ದೃಢಪಟ್ಟಿದೆ.


ರಾಮಚಂದ್ರ ರಾವ್

ಅಶ್ಲೀಲ ವೀಡಿಯೊ ಬಹಿರಂಗ ನಂತರ ಎಡಿಜಿಪಿ ಆರ್.ಹಿತೇಂದ್ರ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿತ್ತು. ಹಿತೇಂದ್ರ ನೇತೃತ್ವದ ಸಮಿತಿ ಕಳೆದ ಎರಡು ತಿಂಗಳಿಂದ ನಡೆಸಿದ ತನಿಖೆಯಲ್ಲಿ ಅಶ್ಲೀಲ ವಿಡಿಯೊ ನೈಜವಾಗಿದ್ದು, ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ ಎಂದಿದೆ.

ರಾಮಚಂದ್ರ ರಾವ್ ಬೆಳಗಾವಿಯಲ್ಲಿ ಐಜಿಪಿ ಆಗಿ ಕಾರ್ಯನಿರ್ವಹಿಸುತ್ತಿದ್ದ ವೇಳೆ ಕಚೇರಿಯಲ್ಲೇ ಈ ಅಶ್ಲೀಲ ವೀಡಿಯೊ ಚಿತ್ರೀಕರಿಸಲಾಗಿದೆ. ವೀಡಿಯೊದಲ್ಲಿರುವ ಕೊಠಡಿ ಬೆಳಗಾವಿ ಐಜಿಪಿ ಕಚೇರಿ ಎಂಬುದು ದೃಢಪಟ್ಟಿದೆ. 2017ರಲ್ಲಿ ಕಾರ್ಯನಿರ್ವಹಿಸುವಾಗ ಇಬ್ಬರು ಮಹಿಳೆಯರು ಪದೇ ಪದೇ ಅವರ ಕಚೇರಿಗೆ ಭೇಟಿ ನೀಡಿದ್ದರು.

ಐಜಿಪಿ ಭೇಟಿಗೆ ಇವರುಗಳಿಗೆ ಯಾವುದೇ ನಿರ್ಬಂಧ ಇರಲಿಲ್ಲ. ಮಹಿಳೆಯರು ಕಚೇರಿಗೆ ಬರುತ್ತಿದ್ದುದನ್ನು ಸಿಬ್ಬಂದಿ ಖಚಿತಪಡಿಸಿದ್ದಾರೆ. ಅಶ್ಲೀಲ ವೀಡಿಯೊ ಬಹಿರಂಗ ನಂತರ ರಾಮಚಂದ್ರ ರಾವ್, ಇದನ್ನು ಅಲ್ಲಗಳೆದಿದ್ದಲ್ಲದೆ, ಇದು ಕೃತಕ ▶ 10ನೇ ಪುಟಕ್ಕೆ

ಇಲ್ಲ ಸಂಪುಟ ಪುನರ್ರಚನೆ ಅಧಿಕಾರ ಹಂಚಿಕೆ ಕಾಲ ನಿರ್ಣಯ



ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಬುದ್ಧ ಪ್ರತಿಕ್ರಿಯೆ!

ಬೆಂಗಳೂರು, ಮಾ.20(ಕೆಎಂಶಿ)– ಸಂಪುಟ ಪುನರ್ರಚನೆ ಇಲ್ಲವೇ ಹಂಚಿಕೆ ಸಂಬಂಧ ಕಾಲವೇ ನಿರ್ಣಯಿಸುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಜೊತೆ ಪ್ರತ್ಯೇಕ ಸಭೆ ಕುರಿತಾಗಲೀ, ಯಾರ ಬಳಿ ಏನು ಚರ್ಚಿಸಿದ್ದೇನೆ ಎಂಬ ಬಗ್ಗೆಯಾಗಲೀ ಮಾತನಾಡುವುದಿಲ್ಲ. ಕಾಲ ನಿರ್ಣಯ ಮಾಡುತ್ತದೆ. ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ ಎಂದಿರುವುದು ಸರಿ ಇದೆ. ಹೌದು, ಹುದ್ದೆ ಖಾಲಿಯಿಲ್ಲ. ಆದರೆ, ಪಕ್ಷ ಹಾಗೂ ಶಾಸಕರು ತೀರ್ಮಾನ ಮಾಡಲಿದ್ದಾರೆ ಎಂಬುದನ್ನೂ ಹೇಳಿದ್ದಾರೆ ಎಂದು ನೆನಪಿಸಿದರು.

ಉಪಚುನಾವಣೆ: ರಾಜ್ಯದಲ್ಲಿ ಎರಡು ಕ್ಷೇತ್ರಗಳ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಪ್ರಕಟಣೆ ಮಾಡಿದೆ. ಕಾಂಗ್ರೆಸ್ ಅಭ್ಯರ್ಥಿಗಳ ಕುರಿತು ಕಳೆದ ಎರಡು ತಿಂಗಳಲ್ಲಿ ಬೂತ್‌ಮಟ್ಟದಿಂದ ಎಲ್ಲಾ ಹಂತಗಳ ವರದಿ ತರಿಸಿಕೊಂಡಿದ್ದೇನೆ. ಪಕ್ಷದ ನಾಯಕರ ತಂಡ ಕ್ಷೇತ್ರಗಳಿಗೆ ಭೇಟಿ ನೀಡಿ ಅಭಿಪ್ರಾಯ ಕೊಟ್ಟಿದೆ. ನಾನೂ ಕೆಲವರ ಬಳಿ ಮಾತನಾಡಿದ್ದು, ಎರಡು–ಮೂರು ದಿನಗಳಲ್ಲಿ ಎಐಸಿಸಿ ಕಾರ್ಯದರ್ಶಿ ಕರ್ನಾಟಕ್ಕೆ ಬರಲಿದ್ದು, ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು.

ವೇಣುಗೋಪಾಲ ಸಿಎಂ ಕುರ್ಚಿ ಖಾಲಿ ಇಲ್ಲ ಎಂಬುದು ಸರಿ

ಎಲ್ಲವನ್ನೂ ಬಹಿರಂಗಪಡಿಸಲಾಗದು. ಪಕ್ಷ ಗೆಲ್ಲಬೇಕು. ಪಕ್ಷದ ಹಿತದೃಷ್ಟಿಯಿಂದ ನಾನು ಹಾಗೂ ಮುಖ್ಯಮಂತ್ರಿ ಅಭಿಪ್ರಾಯ ಮಂಡಿಸುತ್ತೇವೆ,. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ಆ ಪ್ರಕಾರ ಬಿ ಫಾರಂ ವಿತರಣೆ ಮಾಡಲಾಗುವುದು ಎಂದರು.

ಉಪಚುನಾವಣೆಯಲ್ಲಿ ಕುಟುಂಬ ಮುಖ್ಯವಲ್ಲ. ಪಕ್ಷ ಗೆಲ್ಲಬೇಕು. ಪಕ್ಷವೇ ಮುಖ್ಯ. ಪಕ್ಷ ಏನು ಹೇಳುತ್ತದೋ ಆ ರೀತಿ ನಡೆಯಬೇಕು. ಎರಡೂ ಕ್ಷೇತ್ರಗಳು ಪ್ರಮುಖ ಮುಖಂಡರು ಪ್ರತಿನಿಧಿಸುತ್ತಿದ್ದ ಕ್ಷೇತ್ರಗಳು, ಶಾಮನೂರು ಶಿವಶಂಕರಪ್ಪ ಅವರಿಗೆ ಅಲ್ಪಸಂಖ್ಯಾತರು ಹಿಂದಿನಿಂದಲೂ ಬೆಂಬಲ ನೀಡಿಕೊಂಡು ಬಂದಿದ್ದಾರೆ. ಈ ಸಮುದಾಯಕ್ಕೆ ಟಿಕೆಟ್ ನೀಡಬೇಕೆಂಬ ಪ್ರಸ್ತಾಪವೂ ಇದೆ. ಎಲ್ಲರ ಜೊತೆ ಚರ್ಚಿಸಿ ಸಮಸ್ಯೆ ಪರಿಹರಿಸಬೇಕಿದೆ. ಕಳೆದ ಚುನಾವಣೆಯಲ್ಲಿ ಟಿಕೆಟ್ ದೊರೆಯದಿದ್ದ ನಾಯಕರಿಗೆ ಸ್ಥಾನಮಾನ ನೀಡಲಾಗಿದೆ. ನನ್ನ ವೈಯಕ್ತಿಕ ಅಭಿಪ್ರಾಯ, ಸಮೀಕ್ಷಾ ವರದಿಗಿಂತ ಪಕ್ಷ, ಕಾರ್ಯಕರ್ತರು ಏನು ಹೇಳುತ್ತಾರೆ ಎಂಬುದು ಮುಖ್ಯ. ಸಚಿವ ಸಂಪುಟ ಪುನರ್ ರಚನೆ ಹಾಗೂ ಹೊಸಬರನ್ನು ಪರಿಗಣಿಸಬೇಕೆಂಬ ಬೇಡಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಮಂತ್ರಿ ಆಗಬೇಕೆಂದು ಆಸೆ ಪಡುವುದರಲ್ಲಿ ತಪ್ಪೇನಿದೆ. ಮುಖ್ಯಮಂತ್ರಿ ಸಂಪುಟ ಪುನರ್ ರಚನೆ ಮಾಡುತ್ತೇವೆ ಎಂಬುದಾಗಿ ಹೇಳಿದ್ದಾರಲ್ಲ. ಅವರು ಹೇಳಿದ ಮೇಲೆ ಖಾಲಿಯಿದೆ ಎಂದು ತಿಳಿದು ಪ್ರಯತ್ನ ಪಡುತ್ತಿದ್ದಾರೆ.

ಕಟ್ಟಡಗಳ ಎತ್ತರ ಸಂಬಂಧ: ನಾಗರಿಕ ವಿಮಾನಯಾನ ಸಚಿವರ ಭೇಟಿ ಮಾಡಿ ಪ್ರೀಮಿಯಂ ಎಫ್ಎಆರ್, ಕಟ್ಟಡಗಳ ಎತ್ತರದ ಕಾನೂನು ಹಾಗೂ ಬೇರೆ, ಬೇರೆ ರಾಜ್ಯಗಳಲ್ಲಿ ಏನಿದೆ ಎಂಬ ವಿಚಾರ ಗಮನಕ್ಕೆ ತರಲಾಗಿದೆ. ರಕ್ಷಣಾ ಸಚಿವರನ್ನು ಶೀಘ್ರದಲ್ಲೇ ▶ 10ನೇ ಪುಟಕ್ಕೆ



ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಹಸ್ತಕ್ಷೇಪ: ಸಿಎಂ ಸಿದ್ದರಾಮಯ್ಯಗೆ ಹೈಕೋರ್ಟ್ ತರಾಟೆ

ಮುಖ್ಯಮಂತ್ರಿ ಮಾಡಲು ಮಹತ್ವದ ಕೆಲಸಗಳಿವೆ; ಇಂತಹ ವಿಷಯಕ್ಕೆ ಸಮಯ ಹಾಳು ಮಾಡಬಾರದು...!!

ಬೆಂಗಳೂರು, ಮಾ.20– ರಾಜ್ಯ ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಸ್ತಕ್ಷೇಪ ಮಾಡುತ್ತಿರುವುದನ್ನು, ಹೈಕೋರ್ಟ್ ಗಂಭೀರವಾಗಿ ಪ್ರಶ್ನಿಸಿದೆ.

ಬೆಸ್ಕಾಂ ಎಇ ಎಸ್.ಚೇತನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ಕೆ. ಸಿಂಗ್ ಮತ್ತು ಟಿ.ಎಂ.ನದಾಫ್ ಒಳಗೊಂಡ ಹೈಕೋರ್ಟ್ ಪೀಠ, ವರ್ಗಾವಣೆ ಪ್ರಕ್ರಿಯೆಯಲ್ಲಿ ಮುಖ್ಯಮಂತ್ರಿಗಳ ನೇರ ಹಸ್ತಕ್ಷೇಪದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ.

ಸರ್ಕಾರಿ ನೌಕರರ ವರ್ಗಾವಣೆ ವಿಚಾರವನ್ನು ಸಂಬಂಧಿಸಿದ ಇಲಾಖೆಗಳೇ ನಿರ್ವಹಿಸಬೇಕು. ಮುಖ್ಯಮಂತ್ರಿಗಳ ಕಚೇರಿ ಇಂತಹ ಮನವಿಗಳನ್ನು ಸ್ವೀಕರಿಸುವುದು ಸರಿಯಲ್ಲ ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿದೆ.


ಸಿದ್ದರಾಮಯ್ಯ

ಮಾಡಲು ಮುಖ್ಯಮಂತ್ರಿಗಳಿಗೆ ಇನ್ನಷ್ಟು ಮಹತ್ವದ ಕೆಲಸಗಳಿದ್ದು, ಇಂತಹ ವಿಷಯ ಗಳಿಗೆ ಸಮಯ ವ್ಯಯಿಸಬಾರದು ಎಂದು ಸೂಚಿಸಿದೆ. ಈ ಸಂಬಂಧ ಹೈಕೋರ್ಟ್ ತನ್ನ ಆದೇಶದ ಪ್ರತಿಯನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಲು ಸೂಚನೆ ನೀಡಿದೆ.

ಪ್ರಕರಣ ಸಂಬಂಧ ಸಿಎಂ ನೀಡುವ ವರ್ಗಾವಣೆ ಶಿಫಾರಸುಗಳ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯಿಂದಲೂ ನಿಲುವು ಕೇಳಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಕಾರ್ಯದರ್ಶಿ, ಸಿಎಂ ಕಚೇರಿಯಿಂದ ನೀಡುವ ಟಿಪ್ಪಣಿಗಳು ಕೇವಲ ಶಿಫಾರಸುಗಳಾಗಿದ್ದು, ಅಂತಿಮ ಆದೇಶವನ್ನು ಸಂಬಂಧಪಟ್ಟ ಇಲಾಖೆ ನೀಡುತ್ತದೆ ಎಂದು ಸ್ಪಷ್ಟಪಡಿಸಿದ್ದರು.

ಮತ್ತೊಂದೆಡೆ, ಇಂಧನ ಇಲಾಖೆಯ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿಯೂ ಸಿಎಂ ಕಚೇರಿ ಪಾತ್ರ ವಹಿಸಿದ್ದ ಕುರಿತು ರಾಜಕೀಯ ವಲಯದಲ್ಲಿ ಚರ್ಚೆಗಳು ನಡೆದಿವೆ.

ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಇಲಾಖೆಗಳ ಕಾರ್ಯಚಟುವಟಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಆರೋಪಗಳೂ ಕೇಳಿಬಂದಿವೆ. ಈ ಎಲ್ಲಾ ಬೆಳವಣಿಗೆಗಳ ನಡುವೆ ಹೈಕೋರ್ಟ್ ನೀಡಿದ ಈ ತೀಕ್ಷ್ಣ ಸೂಚನೆ ರಾಜ್ಯ ರಾಜಕೀಯದಲ್ಲಿ ಮತ್ತಷ್ಟು ಚರ್ಚೆಗೆ ಕಾರಣವಾಗಿದೆ.

ಇಂಧನ ಮೂಲ ಸೌಕರ್ಯದ ಮೇಲೆ ದಾಳಿ ಮಾಡಿ ದೊಡ್ಡ ತಪ್ಪು ಮಾಡಿದ್ದೀರಿ! ಮತ್ತೆ ದಾಳಿಯಾದರೆ ನಿಮ್ಮನ್ನ ಬಿಡಲ್ಲ!!

ಇರಾನ್ ಕಠಿಣ ಎಚ್ಚರಿಕೆ



ಟೆಹರಾನ್, ಮಾ.20– ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ಇಂಧನ ಮೂಲಸೌಕರ್ಯದ ಮೇಲೆ ನಡೆದ ದಾಳಿಗೆ ಇರಾನ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಮತ್ತೊಮ್ಮೆ ಇಂತಹ ದಾಳಿ ನಡೆದರೆ ಯಾವುದೇ ಒತ್ತಡಕ್ಕೂ ಮಣಿಯದೆ 'ಅನಿಯಂತ್ರಿತ ಪ್ರತಿದಾಳಿ' ನಡೆಸುವುದಾಗಿ ಇರಾನ್ ಸ್ಪಷ್ಟ ಎಚ್ಚರಿಕೆ ನೀಡಿದೆ.

ಇಂಧನ ಮೂಲಸೌಕರ್ಯದ ಮೇಲೆ ದಾಳಿ ಮಾಡಿ ದೊಡ್ಡ ತಪ್ಪು ಮಾಡಿದ್ದೀರಿ, ಮತ್ತೆ ದಾಳಿ ನಡೆಸಿದರೆ ಗಲ್ಫ್ ಪ್ರದೇಶದ ತೈಲ ಹಾಗೂ ಅನಿಲ ವಲಯವನ್ನು ಸಂಪೂರ್ಣವಾಗಿ ನಾಶಪಡಿಸುವುದಾಗಿ ಇಸ್ರೇಲ್‌ಗೆ ಇರಾನ್ ಕಠಿಣ ಎಚ್ಚರಿಕೆ ನೀಡಿದೆ.

ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಈ ಎಚ್ಚರಿಕೆ ನೀಡಿದ್ದು, ಇಸ್ಲಾಮಿಕ್ ಗಣರಾಜ್ಯದ ಇಂಧನ ಮೂಲಸೌಕರ್ಯದ ಮೇಲೆ ದಾಳಿ ಮಾಡುವ ಮೂಲಕ ನೀವು ದೊಡ್ಡ ತಪ್ಪು ಮಾಡಿದ್ದೀರಿ. ಅದರ ಪ್ರತಿಕ್ರಿಯೆಯನ್ನು ಈಗಾಗಲೇ ಕಾರ್ಯಗತಗೊಳಿಸಲಾಗುತ್ತಿದೆ ಎಂದು ಹೇಳಿದೆ.

ಇದೇ ದಾಳಿ ಮತ್ತೆ ಪುನರಾವರ್ತನೆಯಾದರೆ, ನಿಮ್ಮ ಇಂಧನ ಮೂಲ ಸೌಕರ್ಯ ಹಾಗೂ ನಿಮ್ಮ ಮಿತ್ರ ರಾಷ್ಟ್ರಗಳ ಮೇಲಿನ ದಾಳಿಗಳು ಸಂಪೂರ್ಣ ನಾಶವಾಗುವವರೆಗೆ ನಿಲ್ಲುವುದಿಲ್ಲ. ಇದೀಗ ನಡೆದಿರುವ ದಾಳಿಗಿಂತ ನಮ್ಮ ಪ್ರತಿಕ್ರಿಯೆ ಇನ್ನಷ್ಟು ತೀವ್ರವಾಗಿರುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಕೂಡ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಇಸ್ರೇಲ್‌ಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ. ನಮ್ಮ ಎನರ್ಜಿ ಮೂಲಸೌಕರ್ಯಗಳ ಮೇಲೆ ಮತ್ತೆ ದಾಳಿ ನಡೆದರೆ ಯಾವುದೇ ತಡೆ ಇಲ್ಲದೆ ತೀವ್ರ ರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತೇವೆಂದು ಹೇಳಿದ್ದಾರೆ.

ಈಗಾಗಲೇ ನಡೆದ ಪ್ರತಿದಾಳಿಗಳಲ್ಲಿ ನಮ್ಮ ಶಕ್ತಿಯ ಸ್ವಲ್ಪ ಭಾಗವನ್ನು ಮಾತ್ರ ಬಳಸಿದ್ದೇವೆ. ಅಂತರರಾಷ್ಟ್ರೀಯ ಒತ್ತಡದಿಂದ ಇದುವರೆಗೆ ನಿಯಂತ್ರಣ ತೋರಿಸಿದ್ದೇವೆ, ಆದರೆ, ▶ 10ನೇ ಪುಟಕ್ಕೆ

ಕುವೈತ್ ಪ್ರಮುಖ ತೈಲ ಶುದ್ಧೀಕರಣ ಘಟಕದ ಮೇಲೆ ಇರಾನ್ ಡ್ರೋನ್ ದಾಳಿ; ಭಾರೀ ಬೆಂಕಿ

ಕುವೈತ್: ಮಧ್ಯಪ್ರಾಚ್ಯದಲ್ಲಿ ಯುದ್ಧ ಉದ್ವಿಗ್ನತೆ ಹೆಚ್ಚುತ್ತಿರುವ ನಡುವೆಯೇ, ಕುವೈತ್‌ನ ಪ್ರಮುಖ ತೈಲ ಶುದ್ಧೀಕರಣ ಘಟಕವಾದ ಮಿನಾ ಅಲ್–ಅಹ್ಮದಿ ಘಟಕದ ಮೇಲೆ ಇರಾನ್ ಮತ್ತೆ ಡ್ರೋನ್ ದಾಳಿ ನಡೆಸಿದ್ದು, ಭಾರೀ ಬೆಂಕಿ ಕಾಣಿಸಿಕೊಂಡಿದೆ ಎಂದು ತಿಳಿದುಬಂದಿದೆ.

ಕುವೈತ್ ಸರ್ಕಾರದ ಮಾಹಿತಿ ಪ್ರಕಾರ, ಇದೇ ಘಟಕದ ಮೇಲೆ ಗುರುವಾರವೂ ದಾಳಿ ನಡೆದಿದೆ ಅದರಿಂದಲೂ ಬೆಂಕಿ ಕಾಣಿಸಿಕೊಂಡಿತ್ತು. ಶುಕ್ರವಾರ ಮತ್ತೊಮ್ಮೆ ದಾಳಿ ನಡೆದಿದ್ದು, ಇದರಿಂದ ಪರಿಸ್ಥಿತಿ ಮತ್ತಷ್ಟು ಗಂಭೀರಗೊಂಡಿದೆ.

ಅಗ್ನಿಶಾಮಕ ದಳಗಳು ಬೆಂಕಿಯನ್ನು ನಿಗ್ರಹಿಸಲು ಹರಸಾಹಸಪಡುತ್ತಿದ್ದು, ತಕ್ಷಣದ ಮಾಹಿತಿ ಪ್ರಕಾರ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ದಾಳಿ ಮುಸ್ಲಿಂ ಸಮುದಾಯದ ಪ್ರಮುಖ ಹಬ್ಬವಾದ Eid al-Fitr ಆಚರಣೆ ನಡೆಯುತ್ತಿದ್ದ ಸಮಯದಲ್ಲೇ ನಡೆದಿರುವುದು ಗಮನಾರ್ಹವಾಗಿದೆ. ಇದರಿಂದ ಗಲ್ಫ್ ಪ್ರದೇಶದ ಭದ್ರತಾ ಪರಿಸ್ಥಿತಿ ಬಗ್ಗೆ ಮತ್ತಷ್ಟು ಆತಂಕ ವ್ಯಕ್ತವಾಗಿದೆ. ಇಸ್ರೇಲ್ ಇತ್ತೀಚೆಗೆ ಇರಾನ್‌ನ ದಕ್ಷಿಣ ಪಾರ್ಸ್ ನೈಸರ್ಗಿಕ ಅನಿಲ ಕ್ಷೇತ್ರದ ▶ 10ನೇ ಪುಟಕ್ಕೆ

ಕುಕ್ಕರಹಳ್ಳಿಕೆರೆ ಬಫರ್ ಝೋನ್ ಗುರುತಿಸಿ ತಂತಿಬೇಲಿ ಅಳವಡಿಕೆಗೆ ನಿರ್ಧಾರ

ಭೂಮಾಪನ, ಯುಪಿಒಆರ್‌ಗೆ ಈ ಸಂಬಂಧ ಪತ್ರ; ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಸ್ಪಷ್ಟನೆ



ಮೈಸೂರು, ಮಾ.20 (ಬಿಎಲ್‌ಯು)– ಮೈಸೂರಿನ ಕುಕ್ಕರಹಳ್ಳಿ ಕೆರೆಯ ಸುತ್ತ ಬಫರ್ ಝೋನ್ ಗುರುತಿಸಿ ಕೆರೆ ಜಾಗವನ್ನು ಸಂರಕ್ಷಣೆ ಮಾಡಲಾಗುವುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಕೆರೆಯ ಸುತ್ತ ಬಫರ್ ಜೋನ್ ಗುರುತಿಸಿ ಕೊಡುವಂತೆ ನಗರ ಭೂ ಮಾಪನ ಹಾಗೂ ಯುಪಿಒಆರ್ (ನಗರ ಆಸ್ತಿ ಮಾಲೀಕತ್ವ ದಾಖಲೆಗಳು)ಗೆ ಇಂದು ಪತ್ರ ಬರೆದಿದ್ದೇನೆ ಎಂದು ಮಾಹಿತಿ ನೀಡಿದರು.


ಎಂ.ಕೆ.ಸವಿತಾ

ಬಫರ್ ಝೋನ್ ಗುರುತಿಸುವ ಜೊತೆಗೆ ಕೆರೆ ಬಳಿ ಇರುವ ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗ ಸೇರಿದಂತೆ ಇತರೆ ಜಾಗವನ್ನು ಹದ್ದುಬಸ್ತು ಮಾಡಿಕೊಡುವಂತೆ ಕೂಡ ನಗರ ಭೂ ಮಾಪನ ಹಾಗೂ ಯುಪಿಒಆರ್‌ಗೆ ಪತ್ರ ಬರೆದಿದ್ದೇನೆ ಎಂದು ಸವಿತಾ ಹೇಳಿದರು. ಬಫರ್ ಝೋನ್ ಗುರುತಿಸಿದ ನಂತರ ಕೆರೆ ಸುತ್ತ ಫೆನ್ಸಿಂಗ್ (ತಂತಿ ಬೇಲಿ) ಅಳವಡಿಸಲಾಗುವುದು. ಜೊತೆಗೆ ಉಳಿದ ವಿಶ್ವವಿದ್ಯಾನಿಲಯದ ಆಸ್ತಿ ಸಂರಕ್ಷಣೆಗೆ ಕಾನೂನಾತ್ಮಕವಾಗಿ ಹದ್ದುಬಸ್ತು ಮಾಡಿಸಲಾಗುವುದು ಎಂದು ತಿಳಿಸಿದರು.

ಮಾನಸ ಗಂಗೋತ್ರಿಯ ಬಯಲು ರಂಗಮಂದಿರ ರಸ್ತೆಯಲ್ಲಿ ಕುಕ್ಕರಹಳ್ಳಿಕೆರೆಗೆ ಹೊಂದಿಕೊಂಡಂತೆ ಇರುವ 2.20 ಎಕರೆಯಲ್ಲಿ ಖಾಸಗಿಯವರು ಫಲಕ ಅಳವಡಿಸಿರುವ ಕುರಿತಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಅವರಿಗೆ ಮೊನ್ನೆ ಬರೆದಿರುವ ಪತ್ರ ಅವರ ಕೈ ಸೇರಿದೆ ಎಂದರು.

ಈ ಸಂಬಂಧ ಸೋಮವಾರದ ನಂತರ ದಾಖಲಾತಿ ಪರಿಶೀಲನೆ ನಡೆಸಿ, ಸ್ಪಷ್ಟನೆ ನೀಡುವುದಾಗಿ ತಿಳಿಸಿದ್ದಾರೆ. ಈ ಮೂಲಕ ▶ 10ನೇ ಪುಟಕ್ಕೆ

ಡೋಪ್ಲಿನ್ ಕಾಂಪ್ಲೆಕ್ಸ್, ದೇವರಾಜ ಅರಸ್ ರಸ್ತೆಯಲ್ಲಿ ಕೆಲ ಮಳಿಗೆಗಳೇ 'ಅಕ್ರಮ'!?

14 ಮಳಿಗೆಯವರು ವಿಚಾರಣೆಗೆ ಹಾಜರು; ದಾಖಲಾತಿ ಸಲ್ಲಿಸಿ ವಾದ ಮಂಡನೆ

● ಕಾಲಾವಕಾಶ ಕೋರಿರುವ 3 ಅಂಗಡಿಯವರು ● ಏಪ್ರಿಲ್ 2ರೊಳಗೆ ಭಾಗಿಯಾಗುವಂತೆ ತಾಕೀತು



ಮೈಸೂರು, ಮಾ.20(ಬಿಎಲ್‌ಯು)– ಮೈಸೂರಿನ ಶಿವರಾಂಪೇಟೆಯ ಡೋಪ್ಲಿನ್ ಕಾಂಪ್ಲೆಕ್ಸ್ ಹಾಗೂ ದೇವರಾಜ ಅರಸ್ ರಸ್ತೆಯ ಕೆಲವು ಮಳಿಗೆಗಳೇ ಅಕ್ರಮ. ಅವುಗಳಲ್ಲಿನ ಸ್ವಾಧೀನ ತೆರವು ಸಂಬಂಧ ಹೈಕೋರ್ಟ್ ನಿರ್ದೇಶನದಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಕೆ.ಜಾನ್ಸನ್, ಸಾರ್ವಜನಿಕ ವಿಚಾರಣೆ ಆರಂಭಿಸಿದ್ದಾರೆ.

ಪ್ರಾಧಿಕಾರದ ತಮ್ಮ ಕಚೇರಿಯಲ್ಲಿ ನಡೆಸಿದ ವಿಚಾರಣೆಯಲ್ಲಿ 14 ಅಂಗಡಿಯವರು ಭಾಗಿಯಾಗಿದ್ದರು. ಉಳಿದ ಮೂವರು ವಿಚಾರಣೆಯಲ್ಲಿ ಭಾಗಿಯಾಗಲು ಕಾಲಾವಕಾಶ ಕೋರಿದ್ದರು. ಈ ಹಿನ್ನೆಲೆಯಲ್ಲಿ ಏಪ್ರಿಲ್ 2 ರೊಳಗೆ ವಿಚಾರಣೆಯಲ್ಲಿ ಭಾಗಿಯಾಗುವಂತೆ ಜಾನ್ಸನ್ ತಾಕೀತು ಮಾಡಿದ್ದಾರೆ.

ಡೋಪ್ಲಿನ್ ಕಾಂಪ್ಲೆಕ್ಸ್ ಹಾಗೂ ದೇವರಾಜ ಅರಸ್ ರಸ್ತೆಯಲ್ಲಿರುವ 17 ಅನಧಿಕೃತ ಅಂಗಡಿಗಳನ್ನು ತೆರವು ಮಾಡುವ ಸಂಬಂಧ ಪಬ್ಲಿಕ್ ಪ್ರೀಮಿಸಸ್ ಆಕ್ಟ್‌ನಲ್ಲಿ ವಿಚಾರಣೆ ಮಾಡುವಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು. ಈ ಹಿನ್ನೆಲೆಯಲ್ಲಿ ಮಾರ್ಚ್ 18 ರಂದು ವಿಚಾರಣೆಯಲ್ಲಿ ಪಾಲ್ಗೊಳ್ಳುವಂತೆ ಎಂಡಿಎ ನೋಟಿಸ್ ಜಾರಿ ಮಾಡಿತ್ತು. ಪ್ರಾಧಿಕಾರ ನಿಗದಿಪಡಿಸಿದ ವೇಳೆ ವಿಚಾರಣೆಯಲ್ಲಿ ಭಾಗಿಯಾಗಿದ್ದ 14 ಅಂಗಡಿಯವರು ತಮ್ಮಲ್ಲಿರುವ ದಾಖಲಾತಿಯನ್ನು ಸಲ್ಲಿಸಿ, ಇದು ತಾವು ಅಧಿಕೃತ ವಾರಸುದಾರರು ಎಂದು ಕಾರ್ಯದರ್ಶಿ ಜಾನ್ಸನ್ ಅವರ ಬಳಿ ವಾದ ಮಂಡಿಸಿದ್ದಾರೆ.

ಏಪ್ರಿಲ್ 2ರಂದು ಇನ್ನು ಮೂರು ಅಂಗಡಿಯವರು ವಿಚಾರಣೆಯಲ್ಲಿ ಭಾಗಿಯಾಗಿ ತಮ್ಮ ದಾಖಲಾತಿಯನ್ನು ಸಲ್ಲಿಸಲಿದ್ದಾರೆ. ನಂತರ ಒಟ್ಟಾರೆ ▶ 10ನೇ ಪುಟಕ್ಕೆ

ಮುಡಾದಿಂದಲೇ ಮಂಜೂರಾದ ಅಧಿಕೃತ ಅಂಗಡಿಗಳಿವು!

"ನಾವು ವ್ಯಾಪಾರ ಮಾಡುತ್ತಿರುವ ಅಂಗಡಿ ಅಧಿಕೃತ. ಈ ಸಂಬಂಧ ಎಂಡಿಎ ಕಾರ್ಯದರ್ಶಿ ಜಾನ್ಸನ್ ಅವರಿಗೆ ದಾಖಲಾತಿ ಸಲ್ಲಿಸಿದ್ದೇವೆ. 1998ರಲ್ಲಿ ಸಿ.ಬಸವೇಗೌಡ ಮುಡಾ ಅಧ್ಯಕ್ಷರಾಗಿದ್ದಾಗ ನಮಗೆ ಈ ಅಂಗಡಿಗಳನ್ನು ಮಂಜೂರು ಮಾಡಿದ್ದರು. ಆದರೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಹಾಗೂ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಂಜೂರಾತಿ ಮಾಡಿರುವ ಕಾರಣ ಇದಕ್ಕೆ ಕಾನೂನು ಮಾನ್ಯತೆ ಇಲ್ಲ ಎಂದು ಇಂದಿನ ಎಂಡಿಎ ವಾದ ಮಾಡುತ್ತಿದೆ.

2000ನೇ ಇಸವಿಯಲ್ಲಿ ಜಯರಾಂ, 2005ರಲ್ಲಿ ಪಂಕಜ್‌ಕುಮಾರ್ ಪಾಂಡೆ ಹಾಗೂ 2018ರಲ್ಲಿ ಕಾಂತರಾಜು ಮುಡಾ ಆಯುಕ್ತರಾಗಿದ್ದ ವೇಳೆ ಅಂಗಡಿ ಖಾಲಿ ಮಾಡಿಸುವ ಪ್ರಯತ್ನ ಮಾಡಿದರು. ಅಂದರೆ ಕಳೆದ 28 ವರ್ಷದಿಂದ ಇಂತಹ ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ನಮ್ಮಲ್ಲಿರುವ ಪಕ್ಕಾ ದಾಖಲಾತಿ ಹಿನ್ನೆಲೆಯಲ್ಲಿ ಅವರ ಪ್ರಯತ್ನ ಫಲ ನೀಡಿಲ್ಲ. ಈಗ ಮತ್ತೆ ಮೊನ್ನೆ ವಿಚಾರಣೆ ನಡೆಸಿದ್ದು, ಎಂಡಿಎ ಕಾರ್ಯದರ್ಶಿ ಜಾನ್ಸನ್ ಅವರಿಗೆ ನಮ್ಮಲ್ಲಿರುವ ದಾಖಲಾತಿ ಸಲ್ಲಿಸಿದ್ದೇವೆ. ಇದು ನಮಗೆ ಮಂಜೂರಾಗಿರುವ ಅಧಿಕೃತ ಅಂಗಡಿಗಳೆಂದು ವಾದ ಮಂಡಿಸಿದ್ದೇವೆ. ಒಂದು ವೇಳೆ ಎಂಡಿಎ ನಮ್ಮ ಅಂಗಡಿಗಳನ್ನು ಅಧಿಕೃತಗೊಳಿಸದೆ, ತೆರವು ಮಾಡುವ ಪ್ರಯತ್ನ ಮಾಡಿದರೆ ನಾವು ನ್ಯಾಯಾಲಯದ ಮೊರೆ ಹೋಗುತ್ತೇವೆ. – **ಸಂತೋಷ್ ಕೆ.ಎಸ್., ಅಂಗಡಿ ಸಂಖ್ಯೆ 5/ಎ, ದೇವರಾಜ ಅರಸ್ ರಸ್ತೆ, ಮೈಸೂರು.**

ಮೈಸೂರು ಮಿತ್ರ

ನಕ್ಕರೆ ಅದೇ ಸ್ವರ್ಗ

ಬಿಇ ಮುಗಿಸಿಕೊಂಡು ಮಗ ಮನೆಗೆ ಬರುವಾಗ ಜೊತೆಯಲ್ಲಿ ಹುಡುಗಿಯನ್ನು ಕರೆದುಕೊಂಡು ಬಂದದ್ದನ್ನು ಕಂಡು;

ಅಪ್ಪ : ಯಾರ್ಲಾ ಇವಳು?

ಮಗ : ಅಪ್ಪ ಕ್ಯಾಂಪಸ್ ಸೆಲೆಕ್ಷನ್!!

ಮೈಸೂರು ಮಿತ್ರ

ಶನಿವಾರ, ಮಾರ್ಚ್ 21, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜೀವನದಲ್ಲಿನ ಪ್ರತಿ ನೋವು ಶಾಪವಲ್ಲ, ಪ್ರತಿ ಸುಖವೂ ಶಾಶ್ವತವಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಹಂಕಾರ ಇದ್ದ ಮನುಷ್ಯ ಏನನ್ನೂ ಸಾಧಿಸಲಾರ.

ನಿಮ್ಮ ಪತ್ರಗಳು

ಅಂತಿಮ ನಿರ್ಧಾರ ಕೈಗೊಳ್ಳಿ

ಮಾನ್ಯರೆ,

ಒಳ ಮೀಸಲಾತಿ ಜಾರಿ ಮಾಡುವಲ್ಲಿ ಕಾಂಗ್ರೆಸ್ ಸರ್ಕಾರ ಮಾ. 27ಕ್ಕೆ ವಿಶೇಷ ಸಚಿವ ಸಂಪುಟ ಸಭೆ ಕರೆದಿದ್ದು, ಆ ದಿನವೇ ಒಳ ಮೀಸಲಾತಿ ಯಾವುದೇ ತೊಡಕಿಲ್ಲದೆ ಅಂತಿಮವಾಗಿ ಜಾರಿಯಾಗಲಿ. ಈಗಾಗಲೇ ರಾಜ್ಯದಲ್ಲಿ ಒಳ ಮೀಸಲಾತಿಗೆ ಸಂಬಂಧಿಸಿದಂತೆ ಪರ–ವಿರೋಧ ಚರ್ಚೆಗಳು ನಡೆಯುವುದರ ಜೊತೆಗೆ ಹೋರಾಟವು ನಡೆಯುತ್ತಿದೆ. ಆದರೆ ಮಾದಿಗ ಸಮುದಾಯ ಸುಮಾರು 35–40 ವರ್ಷಗಳಿಂದ ನಿರಂತರವಾಗಿ ಒಳ ಮೀಸಲಾತಿಗಾಗಿ ಹೋರಾಟ ಮಾಡಿಕೊಂಡು ಬರುತ್ತಿದೆ ಈ ಹೋರಾಟಕ್ಕೆ ನ್ಯಾಯ ಸಿಗಬೇಕು ಅಲ್ವಾ?

2025ರಲ್ಲಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯಂತೆ ರಾಜ್ಯದಲ್ಲಿ ದಲಿತರಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸಮುದಾಯ ಮಾದಿಗ ಸಮುದಾಯ. ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರದಲ್ಲಿ ಹಿಂದುಳಿದಿರುವ ಸಮುದಾಯ. ಈ ಸಮುದಾಯಕ್ಕೆ ಇಲ್ಲಿಯವರೆಗೂ ಯಾವ ಸರ್ಕಾರವೂ ಕೂಡ ನ್ಯಾಯವನ್ನು ಒದಗಿಸುವ ಕೆಲಸವನ್ನು ಮಾಡಿಲ್ಲ. ಅಂತಿಮವಾಗಿ ಮಾರ್ಚ್ 27ರ ಸಚಿವ ಸಂಪುಟದಲ್ಲಿ ನ್ಯಾಯವನ್ನು ದೊರಕಿಸಿಕೊಡಿ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾನು ಅಹಿಂದ ನಾಯಕ, ನಾನು ದಲಿತರ ಪರ ಎನ್ನುವ ನೀವು ಮಾರ್ಚ್ 27ರಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಸಾಮಾಜಿಕ ನ್ಯಾಯವನ್ನು ಕಾಪಾಡಿ ಒಳ ಮೀಸಲಾತಿ ಜಾರಿ ಮಾಡಿ. ಇಲ್ಲದೆ ಹೋದರೆ 2028 ರ ವಿಧಾನಸಭಾ ಚುನಾವಣೆಯಲ್ಲಿ ಮಾದಿಗ ಸಮುದಾಯ ನಿಮ್ಮ ಕಣ್ಣಿನಲ್ಲಿ ಕಣ್ಣೀರು ತರಿಸುವ ಕೆಲಸವನ್ನು ಮಾಡುತ್ತದೆ.

–ತಿಮ್ಮರಾಜು, ಹೆಚ್ ಡಿ ಕೋಟೆ

ಶಾರದಾದೇವಿನಗರ ಸರ್ಕಲ್ ಬಸ್ ನಿಲ್ದಾಣದಲ್ಲಿ ಬಸ್ ನಿಲುಗಡೆ ಮಾಡಿ



ಮಾನ್ಯರೆ,

ಮೈಸೂರಿನ ಶಾರದಾದೇವಿ ನಗರದ ಸರ್ಕಲ್‌ನಲ್ಲಿ ಕಳೆದ ಒಂದು ವರ್ಷದ ಹಿಂದೆ ನೂತನವಾಗಿ ಕೋಟ್ಯಂತರ ರೂಪಾಯಿ ಸರ್ಕಾರದ ಹಣ ಖರ್ಚು ಮಾಡಿ ಸುಸಜ್ಜಿತವಾದ ಬಸ್ ನಿಲ್ದಾಣವನ್ನು ಕಟ್ಟಲಾಗಿದೆ. ಆದರೆ ಇದು ಕೇವಲ ನಾಮಕಾವಸ್ಥೆಗಾಗಿ ಕಟ್ಟಿರುವ ಬಸ್ ನಿಲ್ದಾಣವಾಗಿದೆ. ಏಕೆಂದರೆ ಈ ಬಸ್ ನಿಲ್ದಾಣದಲ್ಲಿ ಯಾವುದೇ ಸಾರಿಗೆ ನಿಗಮದ ಬಸ್‌ಗಳನ್ನು ನಿಲ್ಲಿಸುವುದಿಲ್ಲ. ಈ ಸರ್ಕಲ್‌ಗೆ ಬರುವ ಕೆಎಸ್‌ಆರ್‌ಟಿಸಿ ಬಸ್‌ಗಳೆಲ್ಲವೂ ಶಾರದಾದೇವಿ ಸರ್ಕಲ್‌ನ ಮುಖ್ಯ ರಸ್ತೆಯಲ್ಲೇ ನಿಲುಗಡೆ ಮಾಡುತ್ತಾರೆ. ಈ ಮುಖ್ಯ ರಸ್ತೆಯಲ್ಲೇ ಉರಿಯುವ ಬಿಸಿಲಿನಲ್ಲಿ ಹಿರಿಯ ನಾಗರಿಕರು, ವಿದ್ಯಾರ್ಥಿಗಳು, ಹೆಂಗಸರು ಮಕ್ಕಳು ಕೆಎಸ್‌ಆರ್‌ಟಿಸಿ ಬಸ್‌ಗಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೊಸದಾಗಿ ನಿರ್ಮಾಣ ಆಗಿರುವ ಬಸ್ ನಿಲ್ದಾಣದಲ್ಲಿ ಖಾಸಗಿ ವಾಹನಗಳನ್ನು ಕೆಲವರು ಪಾರ್ಕಿಂಗ್ ಮಾಡಿರುತ್ತಾರೆ. ಇಷ್ಟು ಹಣ ಖರ್ಚು ಮಾಡಿ ನೂತನ ಬಸ್ ನಿಲ್ದಾಣ ನಿರ್ಮಾಣ ಮಾಡಿರುವುದು ಕಾಂಟ್ರಾಕ್ಟ್‌ಗಳ ಜೋಬು ತುಂಬಿಸಲು ಮತ್ತು ಖಾಸಗಿ ವಾಹನಗಳನ್ನು ಪಾರ್ಕಿಂಗ್ ಮಾಡಲು ಇರಬಹುದು ಎನಿಸುತ್ತದೆ. ಕೆಎಸ್‌ಆರ್‌ಟಿಸಿ ಹಿರಿಯ ಅಧಿಕಾರಿಗಳು ಶಾರದಾದೇವಿನಗರ ಸರ್ಕಲ್‌ನಿಂದ ಹೊರಡುವ ಎಲ್ಲಾ ಕೆಎಸ್‌ಆರ್‌ಟಿಸಿ ಬಸ್‌ಗಳು ಕಡ್ಡಾಯವಾಗಿ ಹೊಸ ಬಸ್ ನಿಲ್ದಾಣಕ್ಕೆ ಬಂದು ಹೋಗುವ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕೀಳುಮಟ್ಟದ ಗೀತಾ ಸಾಹಿತ್ಯಕ್ಕೆ ಕಡಿವಾಣ ಅಗತ್ಯ

ಮಾನ್ಯರೆ,

ನಿರ್ದೇಶಕ ಪ್ರೇಮ್ ಅವರು ತಮ್ಮ ನೂತನ ಚಿತ್ರವೊಂದರಲ್ಲಿ ಬರೆದಿರುವ ಸರ್ಸೆ ನಿನ್ನ ಸೆರಗ...ಎಂಬ ಕನ್ನಡ ಹಾಡೊಂದು ಚಿತ್ರ ರಸಿಕರ ಕೆಂಗಣ್ಣಿಗೆ ಗುರಿಯಾಗಿದೆ. ಹಾಡಿನ ಸಾಹಿತ್ಯದಲ್ಲಿ ಅಶ್ಲೀಲತೆ ತುಂಬಿ ತುಳುಕುತ್ತಿದೆ ಎಂದು ದೇಶದ ಮೂಲೆ ಮೂಲೆಗಳೆಲ್ಲಿ ಜನರು ಹಾಗೂ ವಿದೇಶದಲ್ಲಿರುವ ಕನ್ನಡಿಗರೂ ಸಹ ಛೀಮಾರಿ ಹಾಕುತ್ತಿರುವುದಲ್ಲದೇ, ಪ್ರೇಮ್ ಅವರ ಕೀಳುಮಟ್ಟದ ಗೀತಾ ಸಾಹಿತ್ಯದ ಅಭಿರುಚಿಗೆ ತಮ್ಮದೇ ಕ್ಷೇತ್ರದ ನಟಿ ಮಣಿಯರು ಹಾಗೂ ಚಿತ್ರರಂಗದವರು ಕೂಡ ಮೂಗು ಮುರಿಯುತ್ತಿರುವುದು ನಿಜಕ್ಕೂ ನಾಚಿಗೇಡಿತನ ಸಂಗತಿ.

ಗೀತೆಯನ್ನು ಕೇಳಿದಾಗ ಗೀತೆಯ ಸಾಹಿತ್ಯದಲ್ಲಿ ಬಳಸಿರುವ ಡಬಲ್ ಮೀನಿಂಗ್‌ಗಳು ಕುಟುಂಬ ಸಮೇತ ಕುಳಿತು ಕೇಳುವಂತಿಲ್ಲ ಅನ್ನೋ ಹಲವರ ಅಭಿಪ್ರಾಯ ಕೂಡ ಸರಿಯಾಗಿಯೇ ಇದೆ. ಏಕೆಂದರೆ ಬೇಡುವೆನು ವರವನ್ನು ಕೊಡತಾಯಿ ಜನ್ಮವನು.. ಎಂಬ ತಾಯಿ ಬಗೆಗಿನ ಅದ್ಭುತ ಹಾಡನ್ನು ಬರೆದ ಪ್ರೇಮ್ ಅವರೆನಾ, ಈ ಸೆರಗು ಹಾಡು ಬರೆದಿರುವುದು ಅಂತ ಅಚ್ಚರಿ ತರಿಸುತ್ತದೆ!

ಈ ಹಾಡಿನ ಸಾಹಿತ್ಯ ಮಹಿಳೆಯರನ್ನು ಅವಹೇಳನಕಾರಿ ಮಾಡುವಂತಿದ್ದು, ಕೇವಲ ಪ್ರಚಾರಕ್ಕಾಗಿ ಇಂತಹ ಅಶ್ಲೀಲ ಸಾಹಿತ್ಯವನ್ನು ಬಳಸುವುದು ಸರಿಯಲ್ಲ. ಈ ರೀತಿಯ ಹಾಡುಗಳು ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಮಾರಕ. ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ ಮತ್ತು ನೈತಿಕತೆಗೆ ಧಕ್ಕೆ ತರುವಂತಿರುವ ಕೆಟ್ಟ ಅಭಿರುಚಿಯ ಇಂತಹ ಹಾಡನ್ನು ಚಿತ್ರದಿಂದ ಸಂಪೂರ್ಣವಾಗಿ ಸೆನ್ಸಾರ್ ಮಂಡಳಿ ಕೈ ಬಿಟ್ಟು ಈ ಕುರಿತು ತಕ್ಷಣ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಪರೀಕ್ಷೆ ವೇಳೆ ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಶೇಷ ಬಸ್ ಸೌಲಭ್ಯ ಕಲ್ಪಿಸಿ


ಮಾನ್ಯರೆ,

2025–26ನೇ ಶೈಕ್ಷಣಿಕ ವರ್ಷದಲ್ಲಿ ಉಚಿತ ಬಸ್ ಸೌಲಭ್ಯದಿಂದಾಗಿ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಇದರಿಂದಾಗಿ, ವಿದ್ಯಾರ್ಥಿಗಳು ತುಂಬಾ ಚಿಂತಿತರಾಗಿದ್ದಾರೆ. ವಿಶೇಷವಾಗಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಇದು ತೊಂದರೆ ಉಂಟುಮಾಡಬಹುದು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಗಳನ್ನು ಬರೆಯಲು ತಮ್ಮ ಶಾಲೆಯಿಂದ ಬೇರೆ ಶಾಲೆಗೆ ಪ್ರಯಾಣಿಸಬೇಕಾಗುತ್ತದೆ. ಆದ್ದರಿಂದ, ಈ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪರೀಕ್ಷೆಗಳು ಮುಗಿಯುವವರೆಗೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ವಿಶೇಷ ಬಸ್‌ಗಳನ್ನು ವ್ಯವಸ್ಥೆ ಮಾಡುವಂತೆ ಮನವಿ.

–ಎಚ್.ಎಸ್.ಮಹದೇವಸ್ವಾಮಿ, ಮಹಾರಾಜ ಕಾಲೇಜು, ಮೈಸೂರು.

ಎಣ್ಣೆ ಇಲ್ಲದೆ ಸಾಗದು ಈ ನಮ್ಮ ಜೀವನ...!?





ಮಿರ್ಲೆ ಚಂದ್ರಶೇಖರ

ಲೇಖಕರು,

ಮೊ: 9916129654.

ಆಧುನಿಕ ಯುಗದಲ್ಲಿ ಎಣ್ಣೆ ಇಲ್ಲದೆ ಜೀವನ ಸಾಗದು! ಮನಸಾ ಹರಿಬಿಡಬೇಡಿ. ನಾನ್ಹೇಳುತ್ತಿರುವುದು ಪೆಟ್ರೋಲ್, ಡೀಸೆಲ್ ಬಗ್ಗೆ. ಪೆಟ್ರೋಲಿಯಂ ಪ್ರಾಡಕ್ಟ್‌ಗಳಿಲ್ಲದೆ ಜೀವಿಸಲಾರದ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಎಣ್ಣೆ ಇಲ್ಲದೆ ದಿನಗಳು ಸಾಗುವುದೇ ಇಲ್ಲದಂತಾಗಿದೆ. ನಾವೇ ಕಂಡಂತೆ ಕೆಲವೇ ದಶಕಗಳ ಹಿಂದೆ ದೀಪಕ್ಕೆ ಒಂದು ಬಾಟಲ್ ಸೀಮೆಎಣ್ಣೆಗಾಗಿ ಕ್ಯೂ ನಿಂತು ತಂದು ಅದು ವ್ಯರ್ಥವಾಗದ ರೀತಿ ಸಂಜೆ ಕತ್ತಲನ್ನು ಹೋಗಲಾಡಿಸಲು ಬಳಸುತ್ತಿದ್ದೆವು. ಪೆಟ್ರೋಲ್, ಡೀಸೆಲ್‌ಗಳ ಬಳಕೆ ಮಿತಿಯಲ್ಲಿತ್ತು. ಕಾರಣ ಯಂತ್ರೋಪಕರಣಗಳು ಹಾಗೂ ವಾಹನಗಳ ಬಳಕೆಯು ತೀರಾ ಕಡಿಮೆ ಇತ್ತು ಇಂದು ಸೀಮೆಎಣ್ಣೆ ಮರೆಯಾಗಿದೆ. ಇಂಧನ ತೈಲಗಳ ಬಳಕೆ ನೀರಿಗಿಂತಲೂ ಹೆಚ್ಚು ಎನ್ನುವಂತಾಗಿದೆ. 2024ರಲ್ಲಿ ಇದ್ದ ಮಾಹಿತಿಯಂತೆ ಪ್ರಪಂಚದ ದೇಶಗಳ ನಿತ್ಯದ ಬಳಕೆಯಲ್ಲಿ ದೊಡ್ಡಣ್ಣನೆಂದು ಬೀಗುವ ಅಮೆರಿಕಾ ಮೊದಲ ಸ್ಥಾನದಲ್ಲಿದೆ. ನಾವೂ ಕಡಿಮೆ ಏನಿಲ್ಲ ಚೀನಾ ಬಿಟ್ಟರೆ ನಂತರದ ಸ್ಥಾನ ಭಾರತದ್ದು, ಅಮೆರಿಕಾ ದಷ್ಟು ಪ್ರಮಾಣದಲ್ಲಿ ತೈಲವನ್ನು ಮುಂದೆ ಶತಮಾನ ಕ್ರಮಿಸಿದರೂ ಯಾವ ದೇಶವು ಬಳಸಲಾಗದು ಎಂದು ಹೇಳಬಹುದು. ವಿಶ್ವದ ಬಳಕೆಯಲ್ಲಿ ಶೇ.20ರಷ್ಟು ಇದೊಂದೇ ಸುಡುತ್ತಿದೆ. ವಾರ್ಷಿಕ ತಲಾ ಸರಾಸರಿ 3400 ಲೀಟರ್ ಬಳಕೆ ಆಗುತ್ತಿದೆ. ಚೀನಾ ಶೇ.16ರಷ್ಟು ಬಳಸುತ್ತಿದ್ದು, ತಲಾ ಸರಾಸರಿ 669 ಲೀಟರ್‌ಗಳು, ಭಾರತವೂ ಪೈಪೋಟಿಯಲ್ಲಿದೆ. ಆದರೆ ಜನಸಂಖ್ಯೆಯನ್ನು ಪರಿಗಣಿಸಿದರೆ ಸಮಾದಾನಕರ ಪ್ರಮಾಣದಲ್ಲಿ ಬಳಸುತ್ತಿದೆ ಎನ್ನಬಹುದು. ವಿಶ್ವ ಬಳಕೆಯ ಶೇ.5.50ರಷ್ಟು ಉಪಯೋಗಿಸುತ್ತಿದೆ. ವಾರ್ಷಿಕ ಒಬ್ಬ ಮನುಷ್ಯ 224 ಲೀಟರ್ ಸುಡುತ್ತಿದ್ದಾನೆ.

ವಿಶ್ವದಲ್ಲಿ ನಿತ್ಯವೂ 103 ಮಿಲಿಯನ್ ಬ್ಯಾರಲ್ (16,377 ಮಿಲಿಯನ್ ಲೀಟರ್ಸ್) ತೈಲದಲ್ಲಿ ಸುಮಾರು ಶೇ.80ರಷ್ಟು ಮಧ್ಯಪ್ರಾಚ್ಯದಿಂದಲೇ ಸರಬರಾಜು ಆಗುತ್ತಿರುವುದು. ಅದರಲ್ಲಿ ಶೇ. 62.5ರಷ್ಟು ಅರಬ್ ದೇಶಗಳಾದ ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್, ಇರಾಕ್, ಕತಾರ್ ಮತ್ತು ಕುವೈತ್‌ಗಳಲ್ಲಿ ಉತ್ಪಾದನೆ ಆಗುತ್ತಿರುವುದು. ವಾರ್ಷಿಕ 200 ಟಿಎಂಸಿಗಿಂತಲೂ ಹೆಚ್ಚು ಪ್ರಮಾಣದ ತೈಲವನ್ನು ಭೂಮಿಯ ಒಡಲಾಳದಿಂದ ತೆಗೆದು ಬಳಸುತ್ತಿದ್ದೇವೆ. ಕೃಷ್ಣರಾಜ ಸಾಗರ ಅಣೆಕಟ್ಟೆಯಲ್ಲಿ ಶೇಖರವಾಗುವ ನೀರಿನ ಪ್ರಮಾಣದ ನಾಲ್ಕೂವರೆಯಷ್ಟು ಎನ್ನಬಹುದು.

ಅರಬ್ ರಾಷ್ಟ್ರಗಳಲ್ಲಿರುವ ತೈಲ ಘಟಕಗಳ ಮೇಲೆ ಕ್ಷಿಪಣಿಗಳ ಮಳೆಗೆರೆದು ಸುಡುತ್ತಿದ್ದರೆ, ದೈನಂದಿನ ಬದುಕಿನ ಮೇಲೆ ಆಗುವ ಪರಿಣಾಮವನ್ನು ತಿಳಿಯದೆ ಮೂರ್ಖರಂತೆ ವರ್ತಿಸುತ್ತಿರುವುದು ವಿಷಾಧನೀಯ. ಇಂಧನಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಿಕೊಳ್ಳುವ ಹಂತದಲ್ಲಿ ಇದ್ದೇವೆ ಹಾಗೂ ಮಾಡಿಕೊಳ್ಳಲೇಬೇಕಿರುವ ಪರಿಸ್ಥಿತಿಯಲ್ಲಿ ಇದ್ದೇವೆ. ಆ ನಿಟ್ಟಿನಲ್ಲಿ ಸಂಶೋಧನೆಗಳು ಆಗಬೇಕು. ತೈಲಕ್ಕಾಗಿ ಭಾರತ ಅನ್ಯ ದೇಶಗಳನ್ನು ಅವಲಂಬಿಸುವುದು ನಿಲ್ಲಬೇಕು. ಸದ್ಯಕ್ಕೆ ಕಷ್ಟವಾಗುತ್ತದೆ. ಭಾರತೀಯ ವಿದ್ಯಾವಂತರು ತಮ್ಮ ಬುದ್ಧಿವಂತಿಕೆಯನ್ನು ಅಮೆರಿಕಾ ಕೊಡುವ ಹೆಚ್ಚಿನ ಸಂಬಳಕ್ಕಾಗಿ ವಲಸೆ ಹೋಗಿ ಅಲ್ಲಿ ದುಡಿದು ದೊಡ್ಡಣ್ಣನಾಗಿ ಬೆಳೆಯುವಂತೆ ಮಾಡುತ್ತಿರುವಾಗ, ನಮ್ಮ ದೇಶ ಇಂಧನ ಉತ್ಪಾದನೆಯಲ್ಲಿ ಸ್ವಾವಲಂಬಿಯನ್ನಾಗಿ ಮಾಡುವುದಕ್ಕೆ ನಮ್ಮ ವಿಜ್ಞಾನಿಗಳಿಗೆ ಕಷ್ಟವಾಗದು.

ಮನುಷ್ಯ ಆರ್ಥಿಕವಾಗಿ ಎತ್ತರಕ್ಕೆ ಬೆಳೆದಾಗ ಅಹಂ ಕೂಡ ತನಗೆ ಅರಿವು ಇಲ್ಲದಂತೆ ಬೆಳೆಸಿಕೊಳ್ಳುತ್ತಾನೆ. ಇದರ ಫಲವಾಗಿಯೇ ಅಮೆರಿಕಾ, ಇಸ್ರೇಲ್, ಇರಾನ್ ದೇಶಗಳು ಒಂದಕ್ಕೊಂದು ಬೆಂಕಿ ಹಚ್ಚಿಕೊಂಡು ಸಾಯುತ್ತಿವೆ. ಜೊತೆಗೆ ಇತರೆ ದೇಶಗಳಿಗೂ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿವೆ.

ಭಾರತಕ್ಕೆ ಪ್ರಮುಖವಾಗಿ ಆಮದು ಆಗುತ್ತಿರುವ ತೈಲ ಮಾರ್ಗದ ಬಗ್ಗೆ ಈ ಸಮಯದಲ್ಲಿ ತಿಳಿಯೋಣ ಬನ್ನಿ, ಈ ಜಲಮಾರ್ಗ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಕೊಂಡಿರುವುದರಿಂದಲೇ ನಮಗೆ ಗ್ಯಾಸ್ ಸಮಸ್ಯೆ ಉಲ್ಭಣಿಸಿರುವುದು.

ಜಾಗತಿಕವಾಗಿ ಸಂಭವಿಸುವ ಕೊರೊನಾ, ಚಂಡಮಾರುತಗಳು, ಯುದ್ದಗಳಂತಹ ಅಹಿತಕರ ಘಟನೆಗಳು ನಮಗೆ ಗೊತ್ತಿಲ್ಲದ ಹೊಸ ವಿಚಾರಗಳು, ಹೊಸ ಸ್ಥಳಗಳು ಮತ್ತು ಹೊಸ ಪದಗಳು. ಇರಾನ್ ಮತ್ತು ಇಸ್ರೇಲ್–ಅಮೆರಿಕಾ ನಡುವಿನ ಯುದ್ದದ ಪರಿಣಾಮವಾಗಿ ದೇಶ ಇಂಧನ ಕೊರತೆಯನ್ನು ಎದುರಿಸುತ್ತಿದೆ. ಕೊರತೆ ಏಕಾಯಿತೆಂದು ತಿಳಿಯುವ ಮಾರ್ಗದಲ್ಲಿ ಸಿಕ್ಕಿದ್ದು ಹಾರ್ಮುಜ್ ಜಲಸಂಧಿ (The Strait of Hormuz) ಎಂಬ ಹೊಸ ಸ್ಥಳ, ನಮಗಿದು ಹೊಸದಾದರೂ ಭೂಮಿಯು ಹುಟ್ಟಿದಾಗಿನಿಂದ ಇರುವ ಎರಡು ಕೊಲ್ಲಿಗಳನ್ನು ಕೂಡಿಸಿರುವ ಜಲಮಾರ್ಗ.

ಕನ್ನಡಿಗರಾದ ನಮಗೆ ವ್ಯಾಕರಣದ ಲೋಪ, ಆಗಮ, ಆದೇಶ ಸಂಧಿಗಳು ಗೊತ್ತಿತ್ತು, ಜಲಸಂಧಿ ಎಂಬುದೊಂದಿದೆ ಎನ್ನುವುದು ಗೊತ್ತಾಗಿದ್ದೇ ಯುದ್ದದ ಪರಿಣಾಮವಾಗಿ ನಮ್ಮ ಅಡುಗೆ ಮನೆಯಲ್ಲಿ ಗ್ಯಾಸ್ ಕೊರತೆ ಕಂಡಿದ್ದರಿಂದ. ಹಾರ್ಮುಜ್ ಜಲಸಂಧಿಯು ಪರ್ಷಿಯನ್ ಕೊಲ್ಲಿ ಮತ್ತು ಒಮನ್ ಕೊಲ್ಲಿಗಳನ್ನು ಬೆಸೆಯುತ್ತದೆ. ಎರಡೂ ಕೊಲ್ಲಿಗಳನ್ನು ಒಳಗೊಂಡ ಸಮುದ್ರವು ಇರಾನ್, ಇರಾಕ್, ಕುವೈತ್, ಕತಾರ್, ಬಹ್ರೇನ್, ದುಬೈ, ಸೌದಿ ಅರೇಬಿಯಾ, ಯುಎಇ ಮತ್ತು ಒಮನ್‌ಗಳನ್ನು ಸುತ್ತವರಿದು ಅರಬ್ಬಿ ಸಮುದ್ರಕ್ಕೆ ಸೇರಿದ ಪ್ರದೇಶವಾಗಿದೆ. ಒಮನ್ ಕೊಲ್ಲಿಯು ಮುಗಿಯುತ್ತಿದ್ದಂತೆ ಮುಂದೆ ಪ್ರಯಾಣಿಸಿದರೆ ಸಿಗುವುದೇ ಪಾಕಿಸ್ತಾನದ ಕರಾಚಿ ಮತ್ತು ಭಾರತದ ಗುಜರಾತ್. ಮುಂಬೈನಿಂದ ಪರ್ಷಿಯನ್ ಕೊಲ್ಲಿಯ ಪ್ರಾರಂಭದಲ್ಲಿರುವ ಕುವೈತ್ ಸುಮಾರು 2750ಕಿಮೀ ದೂರವಿದೆ, ಹಡಗಿನಲ್ಲಿ ಮುಂಬೈನಿಂದ ಕುವೈತ್‌ಗೆ ಪ್ರಯಾಣಿಸಲು ಸುಮಾರು ಏಳು ದಿನಗಳ ಕಾಲ ಹಿಡಿಯುತ್ತದೆ.

> "ಗಲ್ಫ್ ಭಾಗದ ದೇಶಗಳಲ್ಲಿನ ಪ್ರಮುಖ ಉತ್ಪಾದಕರಿಂದ ಇಂಧನ ರಫ್ತಿಗೆ ಇದು ಪ್ರಮುಖ ಜಲ ಮಾರ್ಗವಾಗಿದೆ. ಹಾರ್ಮುಜ್ ಜಲಸಂಧಿಯ ಮಾರ್ಗದಲ್ಲಿ ದೀರ್ಘಕಾಲದವರೆಗೆ ಹಡಗುಗಳ ಪ್ರಯಾಣಕ್ಕೆ ಅಡಚಣೆ ಆದಲ್ಲಿ ಯುರೋಪ್ ಮತ್ತು ಏಷ್ಯಾದ ಮಾರುಕಟ್ಟೆಗೆ ಭಾರಿ ಹೊಡೆತ ಬೀಳುತ್ತದೆ. ಜಪಾನ್, ಭಾರತ, ದಕ್ಷಿಣ ಕೊರಿಯಾ ಮತ್ತು ಚೀನಾ ದೇಶಗಳು ಇಂಧನ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ. ಹಲವು ಗಲ್ಫ್ ಪ್ರದೇಶಗಳಿಗೆ ಇದು ಏಕೈಕ ಸಮುದ್ರ ಮಾರ್ಗವಾಗಿದೆ.

ಹಾರ್ಮುಜ್ ಜಲಸಂಧಿಯು ಅದರ ಅತ್ಯಂತ ಕಿರಿದಾದ ಭಾಗದಲ್ಲಿ ಕೇವಲ 34 ಕಿಮೀ ಅಗಲ ಹಾಗೂ ಉದ್ದ ಸುಮಾರು 167ಕಿಮೀ. ಹಡಗುಗಳು ಸುಗಮವಾಗಿ ಸಂಚರಿಸಲು ಸಾಧ್ಯವಿರುವ ಜಲ ಮಾರ್ಗ ಇದು. ವಿಶ್ವದಲ್ಲಿ ಪ್ರತೀದಿನ 103 ಮಿಲಿಯನ್ ಬ್ಯಾರಲ್ ತೈಲವನ್ನು ಬಳಸಲಾಗುತ್ತಿದೆ. ಇದರಲ್ಲಿ ಸುಮಾರು ಐದನೇ ಒಂದು ಭಾಗದಷ್ಟು ತೈಲವು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುತ್ತದೆ. ಭಾರತ ಉಪಯೋಗಿಸುವ ತೈಲದಲ್ಲಿ ಸುಮಾರು ಶೇ.65ರಷ್ಟು ಈ ಮಾರ್ಗದ ಮೂಲಕವೇ ಅಮದಾಗುತ್ತಿರುವುದು. ಆದ್ದರಿಂದ ನಮಗೆ ಹಾರ್ಮುಜ್ ಜಲಸಂಧಿ ಮಾರ್ಗ ಅತೀ ಮುಖ್ಯವಾಗಿದೆ.

ಗಲ್ಫ್ ಭಾಗದ ದೇಶಗಳಲ್ಲಿನ ಪ್ರಮುಖ ಉತ್ಪಾದಕರಿಂದ ಇಂಧನ ರಫ್ತಿಗೆ ಇದು ಪ್ರಮುಖ ಜಲ ಮಾರ್ಗವಾಗಿದೆ. ಹಾರ್ಮುಜ್ ಜಲಸಂಧಿಯ ಮಾರ್ಗದಲ್ಲಿ ದೀರ್ಘಕಾಲದವರೆಗೆ ಹಡಗುಗಳ ಪ್ರಯಾಣಕ್ಕೆ ಅಡಚಣೆಯಾದಲ್ಲಿ ಯುರೋಪ್ ಮತ್ತು ಏಷ್ಯಾದ ಮಾರುಕಟ್ಟೆಗೆ ಭಾರೀ ಹೊಡೆತ ಬೀಳುತ್ತದೆ. ಜಪಾನ್, ಭಾರತ, ದಕ್ಷಿಣ ಕೊರಿಯಾ ಮತ್ತು ಚೀನಾ ದೇಶಗಳು ಇಂಧನ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ. ಹಲವು ಗಲ್ಫ್ ಪ್ರದೇಶಗಳಿಗೆ ಇದು ಏಕೈಕ ಸಮುದ್ರ ಮಾರ್ಗವಾಗಿದೆ.

ಜಲಸಂಧಿಯನ್ನು ಕ್ರಿ.ಶ.309 ಮತ್ತು 379ರ ನಡುವೆ ಆಳಿದ ಪರ್ಷಿಯಾದ ರಾಜ ಎರಡನೇ ಶಾಪುರ್‌ನ ತಾಯಿ ಇಫ್ರಾ ಹಾರ್ಮಿಜ್ಡ್ ಅವರ ಹೆಸರಿಡಲಾಗಿದೆ ಎಂದು ಹೇಳಲಾಗುತ್ತದೆ. ಕೊಲ್ಲಿ ಎಂಬ ಗ್ರೀಕ್ ಪದದಿಂದಲೂ ಜಲಸಂಧಿಗೆ ಬಂದಿರುವ ಸಾಧ್ಯತೆಯೂ ಇದೆಯೆಂದು ಹೇಳುತ್ತಾರೆ. ಆ ಕಾಲದಲ್ಲೇ ರಕ್ಷಣೆಗಾಗಿ ದೇಶದ ಮಿಲಿಟರಿ ಪುನರುಜ್ಜೀವನ ಕೆಲಸಗಳು ಹಾಗೂ ವಿಸ್ತರಣೆ ಕೆಲಸಗಳನ್ನು ಶಾಪುರ್‌ರವರು ಕೈಗೊಂಡಿದ್ದರು. ತೈಲ ವ್ಯಾಪಾರದಲ್ಲಿ ಹೆಚ್ಚು ಆರ್ಥಿಕ ವಹಿವಾಟು ನಡೆಯುವುದರಿಂದ ಹಾರ್ಮುಜ್ ಜಲಸಂಧಿಯು ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಪ್ರಮುಖವಾಗಿದೆ ಹಾಗೂ ಸದಾ ಸಂಚಾರಕ್ಕೆ ತೆಗೆದುಕೊಳ್ಳುವುದರಿಂದ ಹಲವು ರಾಷ್ಟ್ರಗಳು ಇಂಧನ ಸಮಸ್ಯೆಯಿಂದ ಮುಕ್ತರಾಗಿರುತ್ತಾರೆ. ನಾಗರಿಕರಿಗೆ ಬೇಡವಾದ ಯುದ್ಧಗಳನ್ನು ಆಡಳಿತ ನಡೆಸುವ ನಾಯಕರು ಬಯಸುವುದೇಕೇ ಎಂಬುದೇ ತಿಳಿಯುತ್ತಿಲ್ಲ!. ಆದರೂ ಈ ಯುದ್ದದಿಂದ ಹಾರ್ಮುಜ್ ಜಲಸಂಧಿಯ ಮಹತ್ವದ ಬಗ್ಗೆ ತಿಳಿದುಕೊಂಡೆವು.

ದೇಶಗಳು ನಾನೇ ಹೆಚ್ಚು ಎನ್ನುವ ಅಹಂನಲ್ಲಿ ಕ್ಷಿಪಣಿಗಳನ್ನು ಸುರಿದು ಸಂಪನ್ಮೂಲಗಳನ್ನು ನಾಶ ಮಾಡಿ ನರಬಲಿ ತೆಗೆದುಕೊಳ್ಳುತ್ತಿರುವ ಹಾಗೂ ವಿಶ್ವದ ಶಾಂತಿ ಕದಡುವ ಯುದ್ದಗಳು ನಾಳಿನ ನೆಮ್ಮದಿಗಾಗಿ ಬೇಡವಾಗಿದೆ.

ಶ್ರೀಕೃಷ್ಣನ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಬಹುದು; ನಿಮ್ಮ ಗುರಿಯನ್ನು ಸಾಧಿಸಲು, ನೀವು ವಿಫಲವಾದರೆ, ತಂತ್ರವನ್ನು ಬದಲಾಯಿಸಿ, ಗುರಿಯಲ್ಲ..!?, ಎಂಬ ಮಾತು, ಗರ್ವದಿಂದ ಮೆರೆಯುತ್ತಿರುವ ತೈಲ ರಾಷ್ಟ್ರಗಳನ್ನು ನಂಬಿ ಕುಳಿತುಕೊಳ್ಳದೆ, ನಾವು ಇಂಧನದ ಸ್ವಾವಲಂಬನೆಯ ಗುರಿಯನ್ನು ಮುಟ್ಟಬೇಕಾಗಿದೆ. ಇದಕ್ಕಿರುವ ಒಂದೇ ಮಾರ್ಗ ನಮ್ಮ ತಂತ್ರಗಾರಿಕೆಯನ್ನು ಬದಲಾಯಿಸಿಕೊಳ್ಳುವುದು. ಗುರಿ ಮಾತ್ರ ಶೇಕಡ ನೂರರಷ್ಟು ಇಂಧನವನ್ನು ಉತ್ಪಾದಿಸುವುದೇ ಆಗಿರಲಿ!.

ಕುಂಬಾರಕೊಪ್ಪಲು ಶ್ರೀ ಮಲೆಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಯುಗಾದಿ ಜಾತ್ರೋತ್ಸವ



ಮೈಸೂರು, ಮಾ.20(ಎಂಕೆ)– ಮೈಸೂರಿನ ಕುಂಬಾರಕೊಪ್ಪಲು ಶ್ರೀ ಮಲೆ ಮಹದೇಶ್ವರ ದೇವಸ್ಥಾನದ ಯುಗಾದಿ ಹಬ್ಬದ ಜಾತ್ರಾ ಮಹೋತ್ಸವ ವೈಭವದಿಂದ ನೆರವೇರಿತು.

ಯುಗಾದಿ ಹಬ್ಬದ ದಿನದಂದು ಶ್ರೀ ಮಲೆ ಮಹದೇಶ್ವರ ಉತ್ಸವಮೂರ್ತಿ ಸೇರಿದಂತೆ ಪೂಜಾ ಸಾಮಗ್ರಿಗಳನ್ನು ಬಲಮುರಿಯಲ್ಲಿ ಶುಚಿಗೊಳಿಸಿ, ಅಲಂಕೃತ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತರಲಾಯಿತು.


ಮೆರವಣಿಗೆಯುದ್ದಕ್ಕೂ ಕಾಲ್ನಡಿಗೆಯಲ್ಲಿ ಸಾಗಿದ ಅಪಾರ ಭಕ್ತಾದಿಗಳು ಪೂಜೆ ಸಲ್ಲಿಸಿ, ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ನಂತರ ದೇವಸ್ಥಾನದ ಆವರಣದಲ್ಲಿ ತೀರ್ಥ ಪ್ರಸಾದ ನೀಡಲಾಯಿತು. ಹಾಗೆಯೇ ಶುಕ್ರವಾರ ಬೆಳಗ್ಗೆಯಿಂದಲೇ ಆರಂಭವಾದ ಪೂಜಾ ಕೈಂಕರ್ಯಗಳು ಶ್ರದ್ಧಾ–ಭಕ್ತಿಯಿಂದ ನೆರವೇರಿದವು. ನಾದಸ್ವರದೊಂದಿಗೆ ದೇವಸ್ಥಾನದ ಸುತ್ತಲೂ ಸಾಗಿದ ಹುಲಿವಾಹನ ಮೆರವಣಿಗೆ ಹಾಗೂ ಕೊಂಡೋತ್ಸವದಲ್ಲಿ ಜನ ಸಾಗರವೇ ನೆರೆದಿತ್ತು. ಹಾಗೆಯೇ ಪ್ರಸಾದ ವಿನಿಯೋಗದ ಜೊತೆಗೆ ಜಾತ್ರಾ ಮಹೋತ್ಸವದ ಅಂಗವಾಗಿ ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಹಾರಗಳ ಹರಾಜು: ಬಲಮುರಿಯಿಂದ ದೇವಸ್ಥಾನದವರೆಗೆ ಸಾಗಿದ ಮೆರವಣಿಗೆ ಯುದ್ದಕ್ಕೂ ಭಕ್ತಾಧಿಗಳು ಸಮರ್ಪಿಸಿದ್ದ ಬಗೆ ಬಗೆಯ ಹೂ ಮತ್ತು ಹಣ್ಣಿನ ಹಾರಗಳನ್ನು ಹರಾಜು ಹಾಕಲಾಯಿತು. ಉತ್ಸವ ಮೂರ್ತಿಯನ್ನು ಅಲಂಕರಿಸಿದ್ದ ಹಾರಗಳನ್ನು ಖರೀದಿಸಲು ಮುಗಿ ಬಿದ್ದ ಭಕ್ತಾದಿಗಳು, ಹರಾಜು ಕೂಗಿ ಹಾರಗಳನ್ನು ಖರೀದಿಸಿದರು.

ಕುಂಬಾರಕೊಪ್ಪಲಿನ ಹಿರಿಯರು ಆದ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ವಿದ್ಯಾವರ್ಧಕ ಸಂಘದ ಟ್ರಸ್ಟಿ ಗುಂಡಪ್ಪಗೌಡ, ಕುಂಬಾರಕೊಪ್ಪಲು ಅಭ್ಯುದಯ ಸಂಘದ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಕಾರ್ಯದರ್ಶಿಗಳಾದ ಶಿವಪ್ಪ, ಭೈರಪ್ಪ, ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮುಖಂಡರಾದ ಬಿ.ಸುರೇಶ್, ಮಹೇಶ್, ಶ್ರೀನಿವಾಸ್, ರಾಮ್ ಪ್ರಸಾದ್, ಚೇತನ್, ಪುನೀತ್ ಮತ್ತಿತರರಿದ್ದರು.

ಮಂಟೇಸ್ವಾಮಿ, ಆದಿಶಕ್ತಿ ದರ್ಶನ

ಮೈಸೂರು ತಾಲೂಕು ಜಯಪುರ ಗ್ರಾಮದ ಸಿದ್ದಪ್ಪಾಜಿ ಬಡಾವಣೆಯಲ್ಲಿ ಗುರುವಾರ ರಾತ್ರಿ ಮಂಟೇಸ್ವಾಮಿ ದೇವರ ಕಂಡಾಯ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಮಂಟೇಸ್ವಾಮಿ ಮತ್ತು ಆದಿಶಕ್ತಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಗ್ರಾಮಸ್ಥರು ಅಭಿನಂದಿಸಿದರು. ಈ ವೇಳೆ ಮುಖಂಡರಾದ ಕೋಟೆಹುಂಡಿ ಮಹದೇವು, ಅಭಿಷೇಕ್, ಅಬ್ದುಲ್ ಮುತಾಲೀಫ್, ಎಂ.ನಾಗರಾಜು, ಬಿ.ರೇಣುಕಾ, ಮೂಗನಾಯಕ, ನಂಜುಂಡಸ್ವಾಮಿ, ಆಟೋ ಸ್ವಾಮಿ, ರಾಜಣ್ಣ, ಮುನಿಸ್ವಾಮಿ, ಹೊಸಕೆರೆ ಬೈರೇಗೌಡ, ಶಿವರಾಜು, ಸಂತೋಷ್ ಕುಮಾರ್, ಬಡಾವಣೆ ನಿವಾಸಿಗಳು ಉಪಸ್ಥಿತರಿದ್ದರು.



ಇಂದು ಪವಿತ್ರ ರಂಜಾನ್ ಹಬ್ಬ ಆಚರಣೆಗೆ ಮುಸ್ಲಿಂ ಬಾಂಧವರ ಸಡಗರ

ಮೈಸೂರು, ಮಾ.20(ವಿವಿಹೆಚ್)– ನಾಳೆ(ಮಾ.21) ಮೈಸೂರು ನಗರದಲ್ಲಿ ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಸಿದ್ಧತೆಗಳು ಭರದಿಂದ ಸಾಗಿವೆ.

ಪವಿತ್ರ ರಮಝಾನ್ ತಿಂಗಳ ಉಪವಾಸವನ್ನು ಪೂರ್ಣಗೊಳಿಸಿದ ಮುಸ್ಲಿಂ ಬಾಂಧವರು ಚಂದ್ರ ದರ್ಶನದ ನಂತರ ಈ ಹಬ್ಬವನ್ನು ಆಚರಿಸಲಿದ್ದಾರೆ. ನಗರದಲ್ಲಿನ ಮಸೀದಿಗಳು ವಿಶೇಷ ನಮಾಝ್‌ಗಾಗಿ ಅಲಂಕಾರಗೊಂಡಿದ್ದು, ಅಂದು ಬೆಳಿಗ್ಗೆ 9 ಗಂಟೆಗೆ ಮೈಸೂರಿನ ತಿಲಕ್‌ನಗರದಲ್ಲಿರುವ ಹಳೇ ಈದ್ಗಾ ಮೈದಾನದಲ್ಲಿ ಸಾವಿರಾರು ಮಂದಿ ಭಾಗಿಯಾಗಿ ಸಾಮೂಹಿಕ ರಂಜಾನ್ ಪ್ರಾರ್ಥನೆ ಸಲ್ಲಿಸಲಿದ್ದಾರೆ.

ಈ ವೇಳೆ ಮೈಸೂರು ಸರ್ ಖಾಜಿ ಹಜರತ್ ಮೌಲಾನಾ ಮೊಹಮದ್ ಉಸ್ಮಾನ್ ಷರೀಫ್, ಸಾಮೂಹಿಕ ಪ್ರಾರ್ಥನೆಯಲ್ಲಿ ರಂಜಾನ್ ಸಂದೇಶ ನೀಡಲಿದ್ದಾರೆ. ಮುಸ್ಲಿಂ ಬಾಂಧವರು ತಾವು ಗಳಿಸಿದ ಆದಾಯದ ಶೇ.2.50ರಷ್ಟನ್ನು ಜಕತ್ ಫಿತ್ರಾ ಹೆಸರಲ್ಲಿ ದಾನ ಮಾಡಿ, ಎಲ್ಲರೂ ಸಂತೋಷದಿಂದ ಹಬ್ಬ ಆಚರಿಸುತ್ತಾರೆ.

ಈಗಾಗಲೇ ಮಾರುಕಟ್ಟೆಯಲ್ಲಿ ಖರೀದಿಗಳು ಜೋರಾಗಿದ್ದು, ಹೊಸ ಬಟ್ಟೆಗಳು, ಸಿಹಿ ತಿಂಡಿಗಳು ಮತ್ತು ಹಬ್ಬಕ್ಕೆ ಬೇಕಾದ ವಸ್ತುಗಳ ಜೊತೆಗೆ ಖಾದ್ಯಗಳಿಗೆ ಬಹು ಬೇಡಿಕೆಯಾಗಿದೆ.

ನಗರ ಪಾಲಿಕೆ ಮತ್ತು ಪೊಲೀಸ್ ಇಲಾಖೆ ಸಾರ್ವಜನಿಕರ ಅನುಕೂಲಕ್ಕಾಗಿ ಸೂಕ್ತ ವ್ಯವಸ್ಥೆಗಳನ್ನು ಮಾಡಿವೆ. ವಾಹನ ಸಂಚಾರ ನಿಯಂತ್ರಣ, ಭದ್ರತೆ ಮತ್ತು ಸ್ವಚ್ಛತೆಯ ಕಡೆಗೆ ಹೆಚ್ಚಿನ ಗಮನ ಹರಿಸಲಾಗಿದೆ. ಯಾವುದೇ ಅಡಚಣೆಗಳಿಲ್ಲದೆ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲು ಅಧಿಕಾರಿಗಳು ಮನವಿ ಮಾಡಿದ್ದಾರೆ.

ರಂಜಾನ್ ಹಬ್ಬವು ಸಹೋದರತ್ವ ಸಹಾನುಭೂತಿ ಮತ್ತು ಏಕತೆಯ ಸಂಕೇತವಾಗಿದ್ದು, ಎಲ್ಲಾ ಧರ್ಮದ ಜನರು ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ ಮೈಸೂರಿನ ಜನರು ಸಹ ಈ ಹಬ್ಬವನ್ನು ಸೌಹಾರ್ದತೆಯಿಂದ ಆಚರಿಸಲು ಕಾಯುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದೇವೇಗೌಡ–ಕುಮಾರಸ್ವಾಮಿ ಪಿಎಂ–ಸಿಎಂ ಮಾಡಿದ್ದು ನಮ್ಮ ಪಕ್ಷ

ಅವರಿಗೆ ಹೃದಯ ವೈಶಾಲ್ಯತೆ ಇಲ್ಲ: ಡಿ.ಕೆ.ಶಿವಕುಮಾರ್


ನವದೆಹಲಿ, ಮಾ.20– ಕಾಂಗ್ರೆಸ್ ಪಕ್ಷವು ಜಾತ್ಯತೀತ ತತ್ವ ಉಳಿಸಬೇಕು ಎಂಬ ಕಾರಣಕ್ಕೆ ದೇವೇಗೌಡರನ್ನು ಪ್ರಧಾನಿ ಮಾಡಿದ್ದು, ಕುಮಾರ ಸ್ವಾಮಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದೆವು. ನಮ್ಮ ಪಕ್ಷ ಅವರಿಗೆ ಎಲ್ಲಾ ಅವಕಾಶಗಳನ್ನು ನೀಡಿದೆ. ಆದರೆ, ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ವಿಶಾಲ ಹೃದಯ ಅವರಿಗೆ ಇರಲಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.



ರಾಜ್ಯಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ –ಜೆಡಿಎಸ್ ಸಂಬಂಧ ಹೇಳಿಕೆ ಬಗ್ಗೆ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಟ್ಟಂತಹ ಸ್ಥಾನವನ್ನು ನಿಭಾಯಿಸುವ ಸಾಮರ್ಥ್ಯ, ಧೈರ್ಯ ಎರಡನ್ನೂ ಅವರಿಬ್ಬರು ಹೊಂದಿರಲಿಲ್ಲ. ಮೈತ್ರಿಯನ್ನು ಸಾವಧಾನ, ಸಂತೋಷದಿಂದ ಮುನ್ನಡೆಸುವುದು ಅವರ ಕರ್ತವ್ಯವಾಗಿತ್ತು. ಜೊತೆಯಾಗಿ ಒಯ್ಯದ್ದಕ್ಕೆ ಅವರು ಅಧಿಕಾರ ಕಳೆದುಕೊಳ್ಳಬೇಕಾಯಿತು ಎಂದರು.

ದೇವೇಗೌಡರನ್ನು ಪ್ರಧಾನಿ ಮಾಡಿದ್ದು ಹಾಗೂ ಅವರ ಮಗ ಕುಮಾರ ಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದ್ದು ಕಾಂಗ್ರೆಸ್ ಪಕ್ಷ ನಮ್ಮ ಪಕ್ಷ ಅವರಿಗೆ ಎಲ್ಲಾ ಅವಕಾಶಗಳನ್ನು ನೀಡಿದೆ ಎಂದರು. ಮೈತ್ರಿಯನ್ನು ಸಾವಧಾನದಿಂದ ಹಾಗೂ ಸಂತೋಷದಿಂದ ಮುನ್ನಡೆಸಿ ಕೊಂಡು ಹೋಗುವುದು ಅವರ ಕರ್ತವ್ಯವಾಗಿತ್ತು. ಜೊತೆಯಾಗಿ ತೆಗೆದುಕೊಂಡು ಹೋಗದ ಕಾರಣಕ್ಕೆ ಅವರು ಅಧಿಕಾರ ಕಳೆದುಕೊಳ್ಳಬೇಕಾಯಿತು ಎಂದರು. ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಅಭ್ಯರ್ಥಿಗಳನ್ನು ಎರಡು–ಮೂರು ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ದಾವಣಗೆರೆ ಟಿಕೆಟ್ ವಿಚಾರವಾಗಿ ಗೊಂದಲ ಉಂಟಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಾಗೂ ಸಿಎಂ ಈ ವಿಚಾರವಾಗಿ ಚರ್ಚೆ ಮಾಡಿದ್ದು, ವರದಿ ಇನ್ನೂ ಬಂದಿಲ್ಲ. ಮುಖ್ಯಮಂತ್ರಿಗಳು ಎಚ್.ವೈ.ಮೇಟಿ ಅವರ ಕುಟುಂಬದವರನ್ನು ಕರೆಸಿ ಚರ್ಚೆ ಮಾಡಿದ್ದಾರೆ. ದಾವಣಗೆರೆ ಚುನಾವಣಾ ಆಕಾಂಕ್ಷಿಗಳು ನನ್ನನ್ನು ಭೇಟಿ ಮಾಡುತ್ತಿದ್ದಾರೆ. ನಾನು ಮಂಗಳವಾರ ಆ ಭಾಗದ ಸಂಸದರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜತೆ ಚರ್ಚೆ ಮಾಡಿದ್ದೇನೆ. ನಾನು ಹೈಕಮಾಂಡ್ ನಾಯಕರಿಗೆ ವರದಿ ನೀಡುತ್ತೇನೆ. ಅಂತಿಮ ತೀರ್ಮಾನ ಹೈಕಮಾಂಡ್ ತೆಗೆದುಕೊಳ್ಳಲಿದೆ ಎಂದು ತಿಳಿಸಿದರು.





ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿ ಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ನಂ. 1800, 8ನೇ ಮುಖ್ಯ ರಸ್ತೆ, 7ನೇ ಅಡ್ಡರಸ್ತೆ, 2ನೇ ಹಂತ, ಹೆಬ್ಬಾಳ, ಮೈಸೂರು–570017, ಇಲ್ಲಿನ ನಿವಾಸಿಯಾದ ಶ್ರೀ. ಸಮರ್ ಜ್ಯೋತಿಪಾಲ್ ಬಿನ್ ಲೇಟ್. ಧ್ರುಬೋ ಜ್ಯೋತಿಪಾಲ್ ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವದಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿನ, ಸರ್ವೆ ಸಂಖ್ಯೆ 3/1, 9/1, 10/2, 20, 50, 57 ಮತ್ತು 58/1 ರಲ್ಲಿ ಒಟ್ಟು 13 ಎಕರೆ 04 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ನಿರ್ಮಿಸಿರುವ ಶ್ರೀ ಸಪ್ತಗಿರಿ ಲೇಔಟ್–2 ಬಡಾವಣೆಯಲ್ಲಿರುವ ಪೂರ್ವ ಪಶ್ಚಿಮ 9.14 ಮೀಟರ್, ಉತ್ತರ ದಕ್ಷಿಣ 12.2 ಮೀಟರ್, ಒಟ್ಟೂ ವಿಸ್ತೀರ್ಣ 111.51 ಚದರ ಮೀಟರ್ ಅಳತೆಯ ವಸತಿ ನಿವೇಶನಕ್ಕೆ ಚಕ್ಕುಬಂದಿ: ಪೂರ್ವಕ್ಕೆ:–ರಸ್ತೆ, ಪಶ್ಚಿಮಕ್ಕೆ:– ನಿವೇಶನ ಸಂಖ್ಯೆ 329–F, ಉತ್ತರಕ್ಕೆ: ನಿವೇಶನ ಸಂಖ್ಯೆ 324–E, ದಕ್ಷಿಣಕ್ಕೆ:–ರಸ್ತೆ

Sd/- M.N Prakash Kalappa
Advocate & Leagal consultant
#2-3, first Floor, PRI Cmplex,
67/7A, New Sayyajirao Road,
fort Mohalla, Mysore - 570004
Mob: 9343112535

Date: 18-03-2026

PUBLIC NOTICE

This is to inform the general public that our client intends to purchase the Schedule Property as described below and is in negotiations with **Dr. M. N.Kumaraswamy** S/o M. Nanjundaswamy, the owner of the Schedule Property. In case if any person/s has/have any claims of any kind whatsoever, they are hereby instructed to make their claims to the undersigned within **21 (Twenty One) days** from the date of publication of this Notice failing which the proposed transaction shall be completed without any reference to such claim(s) and such claim(s) shall be considered as waived.

SCHEDULE PROPERTY


All that piece and parcel of the Residential Building consisting of (Ground+ First+ Second floors) Ground floor having a built area of 224.54 Square Meters (Two Two Four Point Five Four Square Meters) and First floor having a built area of 224.54 Square Meters (Two Two Four Point Five Four Square Meters) and Second Floor having built area of 23.10 Square Meters (Two Three Point One Zero Square Meters) in all admeasuring 472.18 Square Meters (Four Seven Two Point One Eight Square Meters) constructed on the Property No. 1460, situated at Thonachi Koppal C & D, Jayanagar, Chamaraja Mohalla presently known as Kuvempunagar, Mysore presently comes within the limits of Mysore Mahanagara Palike and the Property No. 1460 measuring East to West : 80-0 Feet and North to South: 50-0 Feet, in all admeasuring 444.44 Sq. Yards and bounded on: East by: Road, West by: Site No. 1497, North by: Site No. 1459, South by: Site No. 1461

Address of Advocate:
Poornima Ranganath, Law-Assist,
Advocate and Legal Consultants,
No. 187, 2nd Floor, 37th Cross,
18th Main,4th 'T' Block, Jayanagar,
Bangalore-560041,
Phone No. 9902012138
E-mail: poornimar@law-assist.in





ಉತ್ತರ ಕ್ರಿಯಾದಿ ಭೂ ಶಾಂತಿ ಆಹ್ವಾನ ಪತ್ರಿಕೆ



ಶ್ರೀ ಸಿ. ಎನ್. ದೊಡ್ಡಲಿಂಗೇಗೌಡರು

ಖ್ಯಾತ ವಕೀಲರು, ಮಾಜಿ ಅಧ್ಯಕ್ಷರು, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ
ಮಾಜಿ ಅಧ್ಯಕ್ಷರು, ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ

ಇವರು ದಿನಾಂಕ: 11–03–2026 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 21–03–2026 ಶನಿವಾರ ಬೆಳಗ್ಗೆ 11–10 ಕ್ಕೆ ನಮ್ಮ ಸ್ವಗೃಹ ತಿ.ನರಸೀಪುರ ತಾಲ್ಲೂಕು ಚಿದರವಳ್ಳಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕೆಂದು ವಿನಂತಿ.

ದುಃಖತಪ್ತರು:

ಪತ್ನಿ: ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ನಳಿನ ಮತ್ತು ಶ್ರೀ ಸಿ.ಡಿ ಜಗದೀಶ್‌ಗೌಡ, ಶ್ರೀಮತಿ ಸಿ.ಡಿ ಕಲ್ಪನ ಮತ್ತು ಶ್ರೀ ರಾಧಾಕೃಷ್ಣೇಗೌಡ, ಶ್ರೀಮತಿ ಸಿ,ಡಿ ಭಾರತಿ ಮತ್ತು ಶ್ರೀ ಎಲ್. ಶಿವಕುಮಾರ್, ಶ್ರೀಮತಿ ಪ್ರತಿಮ ಮತ್ತು ಶ್ರೀ ಸಿ.ಡಿ ಕೃಷ್ಣ ತಮ್ಮಂದಿರು: ಎಂ. ಕೆಂಪೇಗೌಡ, ಎಂ. ಪುಟ್ಟಸ್ವಾಮಿ, ಎಂ. ನಾಗರಾಜು, ಎಂ ಬಸವರಾಜು, ಎಂ ಪ್ರಕಾಶ್, ಬಂಧು ಮಿತ್ರರು ಹಾಗೂ ಚಿದರವಳ್ಳಿ ಗ್ರಾಮಸ್ಥರು

ಕರ್ನಾಟಕ ಸರ್ಕಾರ

ರೇಷ್ಮೆ ಇಲಾಖೆ ಜಿಲ್ಲಾ ಪಂಚಾಯತ್ ಚಾಮರಾಜನಗರ

(ದೂರವಾಣಿ ಸಂಖ್ಯೆ :08226–222691)

Email ID:ddserizpchnagar@gmail.com

ಸಂ/ರೇಉನಿ/ಜಿಪಂಚಾ/ಲೆಕ್ಕ/ವಾಹನ/ಹೊರಗುತ್ತಿಗೆಆಧಾರ/01/2025–2026 ದಿನಾಂಕ: 16.03.2026

ಇ–ಟೆಂಡರ್ ಪ್ರಕಟಣೆ

ರೇಷ್ಮೆ ಉಪನಿರ್ದೇಶಕರು ಜಿಲ್ಲಾ ಪಂಚಾಯತ್ ಚಾಮರಾಜನಗರ ಕಛೇರಿ ಹಾಗೂ ಅಧೀನ ಸಂಸ್ಥೆಗಳಿಗೆ ಸರ್ಕಾರಿ ಕಾರ್ಯನಿಮಿತ್ತವಾಗಿ ಒಂದು ವರ್ಷದ ಅವಧಿಗೆ(2026–2027ನೇ ಸಾಲಿಗೆ) ಖಾಸಗಿ ವಾಹನವನ್ನು ಬಾಡಿಗೆ ಆಧಾರದಲ್ಲಿ ಹವಾ ನಿಯಂತ್ರಿತ ಹಾಗೂ ಹವಾನಿಯಂತ್ರಣ ರಹಿತ ವಾಹನ ಪೂರೈಸಲು ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ಅರ್ಹ ಟ್ರಾವೆಲ್ಸ್/ಏಜೆನ್ಸಿ/ಮಾಲೀಕರಗಳಿಂದ ಇ–ಟೆಂಡರ್ ಕರೆಯಲಾಗಿದೆ. (ಅಂದಾಜು ರೂ.17.40 ಲಕ್ಷಗಳು)

1 ಇ–ಟೆಂಡರ್ ಪ್ರಕಟಣೆಯ ದಿನಾಂಕ:	16/03/2026
2 ಟೆಂಡರ್ ಫಾರಂ ಅರ್ಜಿಗಳನ್ನು ಇ–procurement portalನಲ್ಲಿ ಪಡೆಯುವ ದಿನಾಂಕ:	16/03/2026 ರಿಂದ 01/04/2026 ರವರೆಗೆ
3 ಇ–procurement portal ಮಾಡಲು ಕೊನೆಯ ದಿನಾಂಕ ಮತ್ತು ವೇಳೆ:	01/04/2026 ಸಂಜೆ 4.00 ಗಂಟೆ
4 ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇಎಂ ಮೊತ್ತ :	ರೂ. 43,500/–
5 ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ಸ್ಥಳ: ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:	02/04/2026ರ ಸಂಜೆ 4.05 ಗಂಟೆಯ ನಂತರ, 04/04/2026 ಬೆಳಿಗ್ಗೆ 10.30 ಗಂಟೆಯ ನಂತರ ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ–571313

ಹೆಚ್ಚಿನ ಮಾಹಿತಿಗಾಗಿ ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಚಾಮರಾಜನಗರವನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ರೇಷ್ಮೇ ಉಪನಿರ್ದೇಶಕರು
ಜಿಲ್ಲಾ ಪಂಚಾಯತ್, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:799:2025–26

PUBLIC NOTICE

That our clients **(1) Vijay H, (2) Suresh Kumar Chopra, (3) Suresh Kumar B,** all residents of Mysuru are intending to purchase and have entered sale agreement dated 04.03.2026 of immovable commercial property together with building constructed thereon bearing door numbers: 225, 225/1, 226, 226/1, 227, 227/1 (respective new numbers: M:60, M60/1 to M60/5) situated at Sayyaji Rao Road, Opp: Krishna Rajendra Hospital, Mandi Mohalla, Mysore measuring east to west: 37 feet and north to south: 39 feet (i.e.1443 square feet) on the eastern side, and east to west: 50 feet and north to south: 23 feet (i.e.1150 square feet) on the western side with PID NO 85614 Zone-6 Ward 41 more fully described in the schedule mentioned herein below from its owner Sathyaprasad S/o Late Dayananda S.R aged 51 years, residing at D.No.#114/B, Vivekananda Road, 1st Main, 5th cross, Yadavagiri, Mysore-570020 for valuable consideration, anybody including bank or any financial institution having any objections to the Sale of the said property may contact the undersigned advocate or the intending purchaser in the address shown below with their written objection within a 10 days from the date of this publication. If no objections are received, our client will proceed to materialise the sale without any further reference. It may be noted that in no circumstances, any objections after the notice period will be entertained in the matter.

SCHEDULE PROPERTY

All that piece and parcel of the commercial property together with building constructed thereon (being entire property schedule to sale deed dated 30.03.1981 registered in the office of the headquarters Sub-registrar, Mysore, with Document No.77, entered at pages 222/226 of Volume 3257 in Book No.1 dated 04.04.1981) bearing door numbers: 225, 225/1, 226, 226/1, 227, 227/1 (respective new numbers: M:60, M60/1 to M60/5) situated at Sayyaji Rao Road, Opp: Krishna Rajendra Hospital, Mandi Mohalla, Mysore measuring east to west: 37 feet and north to south: 39 feet (i.e.1443 square feet) on the eastern side, and east to west: 50 feet and north to south: 23 feet (i.e.1150 square feet) on the western side with PID NO 85614 Zone-6 Ward 41 and bounded on: East by : Road, West by: : Sayyaji Rao Road, North by : Galli, South by : Private property.

Contact: 9448602246

AAGAM LAW ASSOCIATES
Sd/- C. Bharath Kumar, Advocate, # 685, 5th Cross, Paparam Street, Nazarbad, Mysore-570010, Mob: 97404 36307

Dated: 17.03.2026

ಏ.10ರಿಂದ ಮೈಸೂರಲ್ಲಿ ಬೇಸಿಗೆ ವಸ್ತು ಪ್ರದರ್ಶನ



50 ದಿನಗಳ ಬೇಸಿಗೆ ವಸ್ತು ಪ್ರದರ್ಶನಕ್ಕೆ ಎಲ್ಲಾ ರೀತಿಯ ಸಿದ್ಧತೆಗಳು ಈಗಾಗಲೇ ನಡೆಯುತ್ತಿದೆ. ಫನ್‌ವರ್ಲ್ಡ್ ಸಂಸ್ಥೆಯೂ ಅರ್ಜಿ ಸಲ್ಲಿಸಿದೆ. ಟೆಂಡರ್ ಕರೆಯುವುದಿಲ್ಲ. ಹೆಚ್ಚಿನ ಅರ್ಜಿಗಳು ಬಂದರೆ ಮಾತ್ರ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತದೆ.
-ಅಯೂಬ್ ಖಾನ್, ಅಧ್ಯಕ್ಷ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ಮೈಸೂರು, ಮಾ.20(ಜಿಎ)–ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ 50 ದಿನಗಳ ಬೇಸಿಗೆ ವಸ್ತು ಪ್ರದರ್ಶನ ಆಯೋಜಿಸಲು ನಿರ್ಧರಿಸಿದೆ.

ಮಕ್ಕಳಿಗೆ ಪರೀಕ್ಷೆಗಳು ಮುಕ್ತಾಯಗೊಂಡು ಮೈಸೂರಿಗೆ ಬರುವ ಪ್ರವಾಸಿಗರಿಗೆ ಮತ್ತಷ್ಟು ಆಕರ್ಷಣೆ ನೀಡಲು ಚಿಂತಿಸಿ ಈ ಬಾರಿ ವಸ್ತು ಪ್ರದರ್ಶನ ಪ್ರಾಧಿಕಾರದಿಂದ ಏ.10 ರಿಂದ ಮೇ.30ರವರೆಗೆ ಬೇಸಿಗೆ ವಸ್ತು ಪ್ರದರ್ಶನ ಆಯೋಜಿಸಲಿದ್ದು, ಈಗಾಗಲೇ ಸಿದ್ಧತೆಗಳು ಆರಂಭಗೊಂಡಿದೆ.

ದಸರಾ ಮಹೋತ್ಸವದ ನಂತರವೂ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಡಿಸೆಂಬರ್ ಅಂತ್ಯದವರೆಗೆ ವಸ್ತು ಪ್ರದರ್ಶನವನ್ನು ಆಯೋಜಿಸಲಾಗುತ್ತಿತ್ತು. ಇದಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಭೇಟಿ ನೀಡುವ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾಗಿದೆ. ಆದರೆ, ದಸರಾ ನಂತರ ಇಲ್ಲಿ ಯಾವುದೇ ಮನರಂಜನೆ ಇಲ್ಲದಿರುವುದರನ್ನು ಗಮನಿಸಿದ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ವರ್ಷಪೂರ್ತಿ ವಸ್ತು ಪ್ರದರ್ಶನ ನಡೆಸುವ ಉದ್ದೇಶದಿಂದ ಸಾಕಷ್ಟು ಬದಲಾವಣೆಗಳನ್ನು ವಸ್ತು ಪ್ರದರ್ಶನ ಮೈದಾನದಲ್ಲಿ ಮಾಡಿದ್ದಾರೆ.

ಎ ಬ್ಲಾಕ್ ವಾಣಿಜ್ಯ ಮಳಿಗೆಗೆ ಪಾರಂಪರಿಕ ಶೈಲಿಯ ಟಚ್, ಸಂಗೀತ ಕಾರಂಜಿ, ಡ್ರ್ಯಾಗನ್ ಪಾಂಡ ಎಲ್ಲವೂ ಜನರನ್ನು ಆಕರ್ಷಿಸಿದ್ದು, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ 50ದಿನಗಳ ಬೇಸಿಗೆ ಮೇಳ ನಡೆಸಲು ಮುಂದಾಗಿದ್ದಾರೆ. ಈಗಾಗಲೇ ಕೆಲವು ಗುತ್ತಿಗೆದಾರರು ಇದಕ್ಕೆ ಆಸಕ್ತಿ ತೋರಿದ್ದು, ಅರ್ಜಿ ಸಲ್ಲಿಸಲು ಉತ್ಸುಕರಾಗಿದ್ದಾರೆ.

ಬೇಸಿಗೆ ವಸ್ತು ಪ್ರದರ್ಶನದಲ್ಲಿ 50ಕ್ಕೂ ಹೆಚ್ಚು ಮಳಿಗೆಗಳು, ಫುಡ್ ಕೋರ್ಟ್, ಸಂಗೀತ ಕಾರಂಜಿ, ಡ್ರ್ಯಾಗನ್ ಪಾಂಡ ಎಲ್ಲವನ್ನು ಒಳಗೊಂಡಿದ್ದು, ದೇಶದ ವಿವಿಧ ರಾಜ್ಯದ ಮಾರಾಟಗಾರರು ಅವರ ರಾಜ್ಯಗಳ ವಿಶೇಷತೆಗಳನ್ನು ಪ್ರದರ್ಶಿಸಲಿದ್ದಾರೆ.

ಇಂದಿನಿಂದ ಸೀರೆ ಮೇಳ

ಈ ಬೇಸಿಗೆ ಮೇಳಕ್ಕೂ ಮುನ್ನ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪ್ರಾಧಿಕಾರದಿಂದ ಮಹಿಳೆಯರಿಗಾಗಿ ವಿಶೇಷವಾಗಿ ಮಾ.21ರಿಂದ ಏ.1ರವರೆಗೆ ಮಧ್ಯಾಹ್ನ 3ಗಂಟೆಯಿಂದ 9.30ರವರೆಗೂ ಸೀರೆ ಮೇಳವನ್ನು ಆಯೋಜಿಸಿದ್ದು, ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಸೀರೆ ಮೇಳದಲ್ಲಿ ಸ್ಥಳೀಯ ಹಾಗೂ ಅಕ್ಕಪಕ್ಕದ ಜಿಲ್ಲೆ ಹಾಗೂ ರಾಜ್ಯದ ಮಹಿಳಾ ಉದ್ಯಮಿಗಳು ಭಾಗವಹಿಸಲಿದ್ದಾರೆ. 40ಕ್ಕೂ ಮಳಿಗೆಗಳು ಇರಲಿದ್ದು, ಅಮ್ಯೂಸ್‌ಮೆಂಟ್ ಪಾರ್ಕ್, ಫುಡ್ ಕೋರ್ಟ್ ಹಾಗೂ ಪ್ರಮುಖ ಆಕರ್ಷಣೆಯಾದ ಸಂಗೀತ ಕಾರಂಜಿ 10 ದಿನವೂ ಇರಲಿದೆ.

ಆರ್‌ಎಸ್‌ಎಸ್‌ನಿಂದ ಯುಗಾದಿ ಉತ್ಸವ

ಪರಸ್ಪರ ಸಹಕಾರ ಮನೋಭಾವಕ್ಕೆ ಕರೆ



ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್)ದ ವತಿಯಿಂದ ಮೈಸೂರಿನಲ್ಲಿ ಯುಗಾದಿ ಉತ್ಸವ ಆಚರಿಸಲಾಯಿತು

ಮೈಸೂರು, ಮಾ.20(ಎಂಕೆ)– ಮೈಸೂರಿನ ಕನ್ನೇಗೌಡನ ಕೊಪ್ಪಲು ಮೈದಾನದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ವತಿಯಿಂದ ಯುಗಾದಿ ಉತ್ಸವ ಆಚರಿಸಲಾಯಿತು.

ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ.ಹೆಡ್ಗೆವಾರ್ ಹಾಗೂ ಮಾಧವ ಸದಾಶಿವರಾವ್ ಗೋಳ್ವಲ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಂಸದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಿದರು.

ಬಳಿಕ ದಿಕ್ಸೂಚಿ ಭಾಷಣ ಮಾಡಿದ ಆರ್‌ಎಸ್‌ಎಸ್ ರಾಜ್ಯ ಸಂಚಾಲಕ ಸುಧೀರ್, ಹಿಂದೂ ಧರ್ಮದಲ್ಲಿ ಪ್ರತಿಯೊಂದು ಹಬ್ಬಕ್ಕೂ ವಿಶೇಷತೆ ಇದೆ. ಪ್ರಮುಖವಾಗಿ ಯುಗಾದಿ ಹಬ್ಬ ಹಿಂದೂಗಳಿಗೆ ಹೊಸ ವರ್ಷದ ಆರಂಭದ ಹಬ್ಬವಾಗಿದ್ದು, ಬೇವು–ಬೆಲ್ಲ ಸವಿಯುವ ಮೂಲಕ ಕಷ್ಟ–ಸುಖವನ್ನು ಸಮನಾಗಿ ಸ್ವೀಕರಿಸಿ ಮುನ್ನಡೆಯಬೇಕು ಎಂಬುದರ ಅರ್ಥವಾಗಿದೆ ಎಂದರು.

ಶ್ರೀ ಪರಾಭವ ನಾಮ ಸಂವತ್ಸರ ಎಂಬುದು ನಮ್ಮಲ್ಲಿ ಕೆಟ್ಟ ಗುಣಗಳ ಸೋಲಾಗಿದೆ. ಕೆಟ್ಟದನ್ನು ಸೋಲಿಸಿ, ಒಳ್ಳೆಯತನ ವನ್ನು ಗೆಲ್ಲಿಸುವುದು ಮುಖ್ಯ ವಾಗಿದೆ ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಸಂಘ ಜೀವಿಯಾಗಿ ಬದುಕಬೇಕು. ಪರಸ್ಪರ ಸಹಕಾರ ಮನೋಭಾವ ಬೆಳೆಸಿ ಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಮಾಡುವ ವೃತ್ತಿಗೂ ಮತ್ತು ಜೀವನಕ್ಕೂ ವ್ಯತ್ಯಾಸದ ಅಂತರ ಹೆಚ್ಚಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರ ಧಾರ್ಮಿಕ ಆಚರಣೆಗಳನ್ನು ತಪ್ಪದೆ ಮಾಡಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘವು ವಿಶ್ವದಲ್ಲೇ ಅತಿದೊಡ್ಡ ಸಂಘವಾಗಿದ್ದು, ಯಾವುದೇ ನೋಂದಣಿ ಶುಲ್ಕ ವಿಲ್ಲದೆ ದೇಶದ ಸೇವೆಗಾಗಿ ಸಂಘಕ್ಕೆ ಸೇರಬಹು ದಾಗಿದೆ. ಪ್ರಪಂಚದ 71 ದೇಶಗಳಲ್ಲಿ ಆರ್‌ಎಸ್‌ಎಸ್ ತನ್ನ ಶಾಖೆ ಹೊಂದಿದ್ದು, ರಾಷ್ಟ್ರದ ಜನರ ಸೇವೆಗಾಗಿ ದುಡಿಯುತ್ತಿದೆ ಎಂದು ಹೇಳಿದರು.

ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ನಗರ ಪಾಲಿಕೆ ಮಾಜಿ ಮೇಯರ್ ಶಿವಕುಮಾರ್, ಉಪ ಮೇಯರ್ ಶೈಲೇಂದ್ರ, ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್, ನಿಕಟಪೂರ್ವ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು, ನಗರ ಉಪಾಧ್ಯಕ್ಷ ಅರುಣ್‌ಗೌಡ, ಸತೀಶ್, ರಾಜೇಶ್ ಮತ್ತಿತರರಿದ್ದರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ಶಿಕ್ಷಕರ ಶಿಬಿರ

ಮೈಸೂರು, ಮಾ. 20–ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 4ರಿಂದ 6ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಕರಿಗಾಗಿ ಶಿಬಿರವನ್ನು ಏರ್ಪಡಿಸಲಾಗಿದೆ. ಈ ಶಿಬಿರದಲ್ಲಿ ರಾಜ್ಯದ ಎಲ್ಲ ಶಿಕ್ಷಕರಿಗಳಿಗೂ ಭಾಗವಹಿಸಲು ಅವಕಾಶ ಕಲ್ಪಿಸಿದೆ ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಶಿಬಿರದ ಸಂಚಾಲಕರಾದ ಎಚ್.ಎಸ್. ನಾಗರಾಜು (9591577957), ಎಸ್.ಎನ್. ನಾಗೇಂದ್ರ ಪ್ರಸಾದ್ (9611552144), ಎನ್. ರಮೇಶ್ (8310927515), ಸಿ.ಎಂ. ಯೋಗೀಶ್ (99643 98915), ಶ್ರೀಮತಿ ಎಸ್. ಸೌಮ್ಯ (9980076066) ಸಂಪರ್ಕಿಸಿ ವಿವರಗಳನ್ನು ಪಡೆದು www.jssonline.org ಯಿಂದ ವಿವರ ಪಡೆಯಬಹುದು. ಇ–ಮೇಲ್ (jsspublications@gmail.com) ಮೂಲಕವೂ ನೊಂದಾಯಿಸಿಕೊಳ್ಳಬಹುದಾಗಿದೆ

ಡಾ. ಎ.ಪಿ.ಪೂರ್ಣಿಮಾ ಅವರಿಗೆ ಅಂತರರಾಷ್ಟ್ರೀಯ 'ಹಿಂದಿ ಗೌರವ್ ಸಮ್ಮಾನ್ 2026' ಗೌರವ



ಮೈಸೂರು, ಮಾ. 20– ಮೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿನ ಡಾ. ಪೂರ್ಣಿಮಾ ಎ.ಪಿ ಅವರಿಗೆ ದುಬೈನ (ಯುಎಇ) 'ಸಾಹಿತ್ಯ ಅರ್ಪಣ್' ಸಂಸ್ಥೆಯು ಪ್ರತಿಷ್ಠಿತ ಅಂತರಾಷ್ಟ್ರೀಯ ಪ್ರಶಸ್ತಿಯಾದ 'ಹಿಂದಿ ಗೌರವ್ ಸಮ್ಮಾನ್ 2026' ಅನ್ನು ನೀಡಿ ಗೌರವಿಸಿದೆ. ಹಿಂದಿ ಭಾಷೆ ಮತ್ತು ಸಾಹಿತ್ಯಕ್ಕೆ ಅವರು ಸಲ್ಲಿಸಿದ ಅಪಾರ ಸೇವೆ ಮತ್ತು ಸಮರ್ಪಣಾ ಮನೋಭಾವವನ್ನು ಗುರುತಿಸಿ ಈ ಜಾಗತಿಕ ಗೌರವವನ್ನು ನೀಡಲಾಗಿದೆ.

ಡಾ. ಪೂರ್ಣಿಮಾ ಅವರು ಪ್ರಸ್ತುತ ಮೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ (ಸ್ವಾಯತ್ತ) ಹಿಂದಿ ವಿಭಾಗದ ಮುಖ್ಯಸ್ಥರಾಗಿ ಮತ್ತು ಸಹ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 11 ವರ್ಷಗಳಿಗೂ ಹೆಚ್ಚು ಶೈಕ್ಷಣಿಕ ಅನುಭವ ಹೊಂದಿರುವ ಇವರು 2017 ರಿಂದ ಈ ಸಂಸ್ಥೆಯ ಅವಿಭಾಜ್ಯ ಅಂಗವಾಗಿದ್ದಾರೆ. ಇವರು ಇದುವರೆಗೆ 14 ಪುಸ್ತಕಗಳು ಮತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. ದುಬೈನಲ್ಲಿ ಸಂದ ಗೌರವದ ಜೊತೆಗೆ, ಇತ್ತೀಚೆಗೆ ಇವರಿಗೆ ರಾಷ್ಟ್ರ ಮಟ್ಟದ 'ಟಿಜಿಟಿ ಮಹಾದೇವಿ ವರ್ಮಾ ಸಮ್ಮಾನ್–2026' ಪ್ರಶಸ್ತಿ ಲಭಿಸಿದೆ.

ದೇಶದ ಆರ್ಥಿಕತೆ ಬೆಳವಣಿಗೆಯಲ್ಲಿ ಕಾರ್ಪೊರೇಟ್ ಕಂಪನಿಗಳ ಕಾರ್ಯದರ್ಶಿಗಳ ಪಾತ್ರ ಮಹತ್ವ

'ಕಾರ್ಪೊರೇಟ್ ಲಾ-360' ಕಾರ್ಯಕ್ರಮದಲ್ಲಿ ಶಾಸಕ ಜಿಟಿಡಿ ಅಭಿಪ್ರಾಯ



ಮೈಸೂರು –ಕೆಆರ್‌ಎಸ್ ರಸ್ತೆಯಲ್ಲಿರುವ ಐಸಿಎಸ್‌ಐ–ಮೈಸೂರು ಘಟಕದಲ್ಲಿ ದಿ ಇನ್‌ಸ್ಟಿಟ್ಯೂಷನ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾದ ವತಿಯಿಂದ ಆಯೋಜಿಸಿದ್ದ 'ಕಾರ್ಪೊರೇಟ್ ಲಾ–360' ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು, ಮಾ.20(ಜಿಎ)–ಕಂಪನಿಗಳು ಬೆಳೆಯಲು ಕೇವಲ ವ್ಯವಹಾರವೇ ಸಾಕಾಗುವುದಿಲ್ಲ. ಕಾನೂನು ಬದ್ಧವಾಗಿ ನಿಯಮಾನುಸಾರವಾಗಿ ನಡೆಯಬೇಕು. ಅದನ್ನು ಖಚಿತಪಡಿಸಿಕೊಳ್ಳುವಲ್ಲಿ ಕಂಪನಿಗಳ ಕಾರ್ಯದರ್ಶಿಗಳ ಪಾತ್ರ ಮುಖ್ಯ ಎಂದು ಶಾಸಕ ಜಿಟಿ.ದೇವೇಗೌಡ ತಿಳಿಸಿದರು.

ಮೈಸೂರು –ಕೆಆರ್‌ಎಸ್ ರಸ್ತೆಯಲ್ಲಿರುವ ಐಸಿಎಸ್‌ಐ–ಮೈಸೂರು ಘಟಕದಲ್ಲಿ ದಿ ಇನ್‌ಸ್ಟಿಟ್ಯೂಷನ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾದ ವತಿಯಿಂದ ನಡೆದ 'ಕಾರ್ಪೊರೇಟ್ ಲಾ–360' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಆರ್ಥಿಕತೆ ಬೆಳವಣಿಗೆಯಲ್ಲಿ ಕಾರ್ಪೊರೇಟ್ ಕಂಪನಿಗಳ ಕಾರ್ಯದರ್ಶಿಗಳ ಪಾತ್ರ ಮಹತ್ವದಾಗಿದೆ ಎಂದರು.

ಕಂಪನಿಗಳು ಯಾವ ನಿಯಮಗಳನ್ನು ಪಾಲಿಸಬೇಕು. ಕಾನೂನುಗಳ ವಿಚಾರವಾಗಿ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಬೇಕು. ಕಾನೂನುಗಳಿಗೆ ಅನುಗುಣವಾಗಿ ಕಂಪನಿಯನ್ನು ಹೇಗೆ ನಡೆಸಬೇಕು ಎಂಬುದರಲ್ಲಿ ಕಾರ್ಯದರ್ಶಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಅದಕ್ಕಾಗಿ ಕಂಪನಿ ಕಾರ್ಯದರ್ಶಿಗಳ ಸೇವೆಯು ಕೇವಲ ಕಂಪನಿಗಳಿಗೆ ಸೀಮಿತವಾಗಿರುವುದಿಲ್ಲ. ಬದಲಿಗೆ ದೇಶದ ಅಭಿವೃದ್ಧಿಗೂ ಮುಖ್ಯವಾಗಿದೆ ಎಂದು ಪ್ರತಿಪಾದಿಸಿದರು.

ಈ ಎರಡು ದಿನಗಳ ಕಾಲ ಕಂಪನಿಗಳ ಕಾನೂನು ಪಾಲನೆ, ಹಣಕಾಸು ವ್ಯವಹಾರಗಳು, ಆದಾಯ ವೆಚ್ಚಗಳ ನಿರ್ವಹಣೆ, ಸಾಲದ ಸಮಸ್ಯೆಗಳು, ದಿವಾಳಿತನಕ್ಕೆ ಸಂಬಂಧಿಸಿದ ಕಾನೂನುಗಳು ಹಾಗೂ ವಿದೇಶಿ ಹೂಡಿಕೆಗಳ ಬಗ್ಗೆ ಚರ್ಚೆ ನಡೆಯುವುದು ಬಹಳ ಉಪಯುಕ್ತವಾಗಿದೆ. ಈ ವಿಷಯಗಳು ಇಂದಿನ ಕಾಲದಲ್ಲಿ ತುಂಬಾ ಪ್ರಸ್ತುತವಾಗಿವೆ ಎಂದರು.

ಕಂಪನಿಗಳು ಪ್ರತಿಯೊಬ್ಬರಿಗೂ ಅಗತ್ಯವಿದೆ. ಕೃಷಿಯ ಕ್ಷೇತ್ರವೂ ದೇಶದಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿದೆ. ಈ ಕ್ಷೇತ್ರವನ್ನು ಬಿಟ್ಟರೆ ಕಂಪನಿಗಳ ಮೂಲಕ ಸಾರ್ವಜನಿಕರು ಆರ್ಥಿಕ ಸಬಲರಾಗುತ್ತಿದ್ದಾರೆ. ಇಂತಹ ಉದ್ಯಮಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳಬೇಕು. ಇದಕ್ಕಾಗಿ ಕೌಶಲ್ಯ ಮತ್ತು ಕಾನೂನಿನ ಅರಿವು ಅಗತ್ಯ ಎಂದು ತಿಳಿಸಿದರು.

ಇಲ್ಲಿನ ಸುತ್ತಮುತ್ತ ಸಂಸ್ಥೆಗಳು ಎದುರಿಸುತ್ತಿರುವ ರಸ್ತೆ ಸಮಸ್ಯೆಯ ಬಗ್ಗೆ ನನ್ನ ಗಮನಕ್ಕೆ ತರಲಾಗಿದೆ. ಈ ವಿಷಯದಲ್ಲಿ ಸಂಬಂಧಿಸಿದ ಅಧಿಕಾರಿ ಗಳೊಂದಿಗೆ ಚರ್ಚಿಸಿ ಸಾಧ್ಯವಾದ ಮಟ್ಟಿಗೆ ಪರಿಹಾರ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗೋಪಾಲಕೃಷ್ಣ ಹೆಗಡೆ, ನಾಗೇಂದ್ರ ರಾವ್, ಮಂಜುಗೌಡ, ಅಭಿಷೇಕ್ ಭಾರದ್ವಜ್, ಕೀರ್ತನ ಗೋಪಾಲ್ ಉಪಸ್ಥಿತರಿದ್ದರು.

ವಿಕ್ರಾಂತ್ ಪಿ.ದೇವೇಗೌಡರು ಇನ್ನಿಲ್ಲ



ಮೈಸೂರು, ಮಾ.20–ಮೈಸೂರು ನಗರ ಕಾಂಗ್ರೆಸ್ ಹಾಲಿ ಉಪಾಧ್ಯಕ್ಷರು, ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷರೂ ಆದ ವಿಕ್ರಾಂತ್ ಪಿ.ದೇವೇಗೌಡ (64) ಅವರು ಇಂದು ರಾತ್ರಿ 11.45 ಗಂಟೆ ವೇಳೆಗೆ ಅಪೊಲೋ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ಲಕ್ಷ್ಮಿ, ಪುತ್ರ ಶ್ರೀನಿವಾಸ, ಪುತ್ರಿಯರಾದ ಪದ್ಮಾವತಿ, ರೇಖಾ, ಅಳಿಯ ಚಂದನ್, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ. ಇವರು ಮೂಲತಃ ಕನ್ನೇಗೌಡನ ಕೊಪ್ಪಲು–ಜಯನಗರದವರಾದರೂ (ಕೆ.ಜಿ.ಕೊಪ್ಪಲು) ಕುವೆಂಪುನಗರದ ಜೋಡಿ ಬಸವ ರಸ್ತೆಯಲ್ಲಿ ನೆಲೆಸಿದ್ದರು. ಇವರ ಅಂತ್ಯಕ್ರಿಯೆ ನಾಳೆ(ಶನಿವಾರ) ಮಧ್ಯಾಹ್ನ ಕೆ.ಜಿ.ಕೊಪ್ಪಲು ರುದ್ರಭೂಮಿ (ಕಾವೇರಿ ಸ್ಕೂಲ್ ಪಕ್ಕ)ಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಕ್ರಾಂತ್ ಟೈರ್ಸ್ (ಹಾಲಿ ಜೆ.ಕೆ.ಟೈರ್ಸ್) ಕಾರ್ಖಾನೆಯಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿದ ನಂತರ ಸ್ವಯಂ ನಿವೃತ್ತಿ ಪಡೆದು ವೆಂಕಟೇಶ್ವರ ಟ್ರೇಡರ್ಸ್ ಹೆಸರಿನ ಪೇಂಟ್ಸ್ ಅಂಗಡಿಯನ್ನು ತೆರೆದು ಕೊನೆಯವರೆಗೂ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದರು. ತಮ್ಮ ಹೆಸರಿನ ಮುಂದೆ 'ವಿಕ್ರಾಂತ್' ಸೇರಿಸಿಕೊಂಡು ಆತ್ಮೀಯರಲ್ಲಿ ಅತ್ಯಂತ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಕಟ್ಟಾ ಅಭಿಮಾನಿ ಆಗಿದ್ದು, ಅವರ ಹೆಸರಲ್ಲಿ ಅಭಿಮಾನಿ ಬಳಗವನ್ನೇ ಕಟ್ಟಿದ್ದರು. ಆ ಮೂಲಕ ಸಾಕಷ್ಟು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಎಸ್.ಎಂ.ಕೃಷ್ಣ ಹಾಗೂ ಅವರ ಕುಟುಂಬ ಮೈಸೂರಿಗೆ ಭೇಟಿ ನೀಡಿದ ವೇಳೆ ಅವರನ್ನು ಉಪಚರಿಸುವುದರಲ್ಲಿ ಗೌಡರು ಸಂಭ್ರಮಿಸುತ್ತಿದ್ದರು. ಎಸ್.ಎಂ.ಕೃಷ್ಣ ಅವರು ಮತ್ತು ಅವರ ಕುಟುಂಬವೂ ಸಹ ಇವರನ್ನು ಅತ್ಯಂತ ಪ್ರೀತಿ–ವಿಶ್ವಾಸದಿಂದ ಕಾಣುತ್ತಾ ಬಂದಿದೆ.

ಚಂಪಾ ಶಿವಣ್ಣ ನಿಧನ




ಮೈಸೂರು, ಮಾ. 20 – ಹಿರಿಯ ಕವಯತ್ರಿ ಹಾಗೂ ಲೇಖಕಿ ಚಂಪಾ ಶಿವಣ್ಣ(71) ಅವರು ಇಂದು ಬೆಳಗ್ಗೆ ಅವರ ಹುಟ್ಟೂರು ಶಿವಮೊಗ್ಗದಲ್ಲಿ ನಿಧನರಾದರು. ಇವರು 'ಮೈಸೂರು ಮಿತ್ರ'ನ ಕಾರ್ಯನಿರ್ವಾಹಕ ಸಂಪಾದಕ ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಪಾದಕರಾಗಿದ್ದ ಎಂ.ಆರ್. ಶಿವಣ್ಣ ಅವರ ಧರ್ಮಪತ್ನಿ.

ಕನ್ನಡ ಸಾಹಿತ್ಯ ಪರಿಷತ್ ದತ್ತಿ ಪ್ರಶಸ್ತಿ ಪುರಸ್ಕೃತರಾದ ಇವರು ಪುತ್ರಿ ಪತ್ರಕರ್ತೆ ಶಿವರಂಜನಿ, ಅಳಿಯ ಪ್ರಹ್ಲಾದ್ ರಾವ್, ಮೊಮ್ಮಗ ಪ್ರಥಮ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಶುಕ್ರವಾರ ಸಂಜೆ 6 ಗಂಟೆಗೆ ಮೈಸೂರಿಗೆ ತಂದು, ಮೈಸೂರಿನ ಬನ್ನಿಮಂಟಪದಲ್ಲಿರುವ ಅವರ ನಿವಾಸ ನಂ. 914, ಶಿವಕೃಪ, 5ನೇ ಮುಖ್ಯ ರಸ್ತೆ, ಶಿವರಾತ್ರೀಶ್ವರನಗರ ಇಲ್ಲಿ ನಾಳೆ (ಶನಿವಾರ) ಮಧ್ಯಾಹ್ನ 1 ಗಂಟೆಯವರೆಗೆ ಇರಿಸಿ, ಸಾರ್ವಜನಿಕರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು.

ಬಳಿಕ ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ. ಕೆ.ಬಿ. ಜಗದೀಶ್




ಮೈಸೂರು, ಮಾ. 20 – ಮೈಸೂರು ಕೆ.ಸಿ. ನಗರ ನಿವಾಸಿ ಹಾಗೂ ನಿವೃತ್ತ ವೈದ್ಯಾಧಿಕಾರಿ ಡಾ. ಕೆ.ಬಿ. ಜಗದೀಶ್ (77) ಅವರು ಮಾ. 18ರ ಬುಧವಾರ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಪತ್ನಿ ಚಂದ್ರಮತಿ, ಪುತ್ರ ಅರವಿಂದ್, ಪುತ್ರಿ ಆಶಿತ, ಅಳಿಯ ಗೋವರ್ಧನ್, ಮೊಮ್ಮಕ್ಕಳಾದ ಅರ್ಜುನ್, ಆರ್ನವ್ ಸೇರಿದಂತೆ ಅಪಾರ ಬಂಧು–ವರ್ಗ, ಮಿತ್ರರನ್ನು ಅಗಲಿದ್ದಾರೆ. ಇವರು ಮಂಡ್ಯ ಜಿಲ್ಲಾ ವೈದ್ಯಾಧಿಕಾರಿ, ಚಾಮರಾಜನಗರ ಜಿಲ್ಲಾ ಸರ್ಜನ್ ಹಾಗೂ ವಿಕ್ಟೋರಿಯಾ ಆಸ್ಪತ್ರೆ ಆರ್‌ಎಂಓ ಆಗಿ ಸೇವೆ ಸಲ್ಲಿಸಿ, ನಿವೃತ್ತಿ ಬಳಿಕವೂ ಖಾಸಗಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟ ತಪ್ಪಲಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ. ಎಲ್. ಜಯಮ್ಮ



ಮೈಸೂರು, ಮಾ. 20– ಮೈಸೂರಿನ ಸರಸ್ವತಿಪುರಂ ನಿವಾಸಿ ದಿವಂಗತ ಎಂ.ಜಿ. ಮಹದೇವಪ್ಪ ಅವರ ಪತ್ನಿ ಡಾ. ಎಲ್. ಜಯಮ್ಮ (90) ಗುರುವಾರ ನಿಧನರಾದರು. ಮೃತರು ಪುತ್ರ ಎಂ. ಯತೀಶ್, ಪುತ್ರಿ ಅನಿತಾ ಶಶಿಧರ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೂಲೈನಾ ಕ್ರಾಸ್ಟಾ



ಮೈಸೂರು, ಮಾ. 20– ಮೈಸೂರಿನ ಕೆಸರೆ 3ನೇ ಹಂತ, ಆರ್.ಎಸ್. ನಾಯ್ಡುನಗರ ನಿವಾಸಿ ಜೂಲೈನಾ ಕ್ರಾಸ್ಟಾ(51) ಗುರುವಾರ ನಿಧನರಾದರು. ಮೃತರು ತಾಯಿ, ಪತಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಮಾ. 21) ರಮ್ಮನಹಳ್ಳಿಯಲ್ಲಿರುವ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.3.2026 ಶನಿವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಪಿಸಿಒಡಿ ತಪಾಸಣಾ ಶಿಬಿರ, ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9.30 ರಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಆಡೋಣ ಬಾ... ಮಕ್ಕಳಿಗಾಗಿ ಬೇಸಿಗೆ ರಂಗ ಶಿಬಿರ, ಸ್ಥಳ: ಎಸ್‌ಬಿಎಂ ಮತ್ತು ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ರಿಂಗ್ ರಸ್ತೆ, ಬೆಳಗ್ಗೆ 10 ರಿಂದ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ಮಹಿಳಾ ದಿನಾಚರಣೆ, ಉದ್ಘಾಟನೆ : ನಾಟಕಕಾರ ಮತ್ತು ಜಾನಪದ ವಿದ್ವಾಂಸರಾದ ಡಾ. ಸುಜಾತ ಅಕ್ಕಿ, ಮುಖ್ಯ ಅತಿಥಿಗಳು : ಕಾವಾ ಆಡಳಿತಾಧಿಕಾರಿ ಡಾ. ನಿರ್ಮಲಾ ಮಠಪತಿ, ಸನ್ಮಾನಿತರು ; ವಾಣಿಜ್ಯ ತೆರಿಗೆ ಅಧಿಕಾರಿ ಡಾ. ಭಾವನಾ ಗಜೇಂದ್ರ, ಅಧ್ಯಕ್ಷತೆ : ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶೋಭಾರಾಣಿ ಜೈಪ್ರಕಾಶ್, ಉಪಸ್ಥಿತರು : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು :** ವಿಕ್ರಂ ಚದುರಂಗ ಅವರ ಹೊಸ ಕೃತಿಗಳ ಬಿಡುಗಡೆ ಸಮಾರಂಭ, ನಲ್ನುಡಿ : ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಪ್ರೊ. ಮನು ಚಕ್ರವರ್ತಿ, ಲೇಖಕರ ಮಾತು : ವಿಕ್ರಂ ಚದುರಂಗ, ಉಪಸ್ಥಿತರು : ಅಭಿರುಚಿ ಗಣೇಶ್, ಪ್ರೊ. ಹೆಚ್.ಎಸ್. ಸಿದ್ದಮಲ್ಲಿಕಾರ್ಜುನಸ್ವಾಮಿ, ಸ್ಥಳ: ದಿ ಕಾಸ್ಮೋಪಾಲಿಟನ್ ಕ್ಲಬ್, ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈತ್ರಿ – ಮೈಸೂರು ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ:** ವಿಶ್ವ ಸ್ವಯಂ ಸೇವಾ ಸಂಸ್ಥೆಗಳ ದಿನ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಪತ್ರಕರ್ತೆ ಶ್ರೀಮತಿ ರಶ್ಮಿ ಕೋಟಿ, ಅಧ್ಯಕ್ಷತೆ : ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಮುಖ್ಯ ಅತಿಥಿಗಳು : ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ವೈ.ಎಸ್. ಸಿದ್ದೇಗೌಡ, ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ವಿಕಸನ ಸಂಸ್ಥೆಯ ಮಹೇಶ್ ಚಂದ್ರಗುರು, ಸ್ಥಳ: ಸೀತಾ ಸಭಾಂಗಣ, ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆ, ಮೇಟಗಳ್ಳಿ, ಬೆಳಗ್ಗೆ 11ಕ್ಕೆ.

■ **ನಾಟ್ಯ ಸ್ವರಾಂಜಲಿ ಸಂಗೀತ ಶಾಲೆ :** 3ನೇ ವಾರ್ಷಿಕೋತ್ಸವ ಪ್ರಯುಕ್ತ ಕನ್ನಡ ಹಳೆಯ ಚಿತ್ರಗೀತೆಗಳ ಕರೋಕೆ ರಸದೌತಣ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಹಿನ್ನೆಲೆ ಗಾಯಕಿ ಅನಿತಾ ಸಾ.ರಾ.ಮಹೇಶ್, ಮುಖ್ಯ ಅತಿಥಿಗಳು : ನಿನಾದ್ ಮ್ಯೂಸಿಕಲ್ ಟ್ರಸ್ಟ್‌ನ ಅಧ್ಯಕ್ಷ ಪ್ರಸನ್ನ ಕುಮಾರ್, ಬಿಜೆಪಿ ಹಿರಿಯ ಮುಖಂಡ ಡಾ.ಸುಶ್ರುತ್ ಗೌಡ, ಗ್ರಂಥಾಲಯ ಸಹಾಯಕ ರವಿಶಂಕರ್, ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಸಮಿತಿಯ ಜಿ.ಪರಶುರಾಮಪ್ಪ, ಉರಗ ತಜ್ಞ ಸ್ನೇಕ್ ಶ್ಯಾಮ್, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ ವಿ.ಬೈರಿ, ಸ್ಥಳ: ರಮಾ ಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಸ್. ಸಂಗೀತಾ ಹಾಗೂ ಜಯಂತಿ ವಿ. ಭಟ್, ವ್ಯಾಖ್ಯಾನ–ಡಾ.ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಆಯುಷ್ ವಾಣಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಅಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಲ್ಲಾಡಿ ಬ್ರದರ್ಸ್–ಯುಗಳ ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ಯಶೋಧರ ಚರಿತೆ (ಜನ್ನನ ಕಾವ್ಯದ ನಾಟಕ ರೂಪ), 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಅಡಿಕೆ ಹಾಗೂ ತೆಂಗಿನ ಬೇಸಾಯ ಕುರಿತು ಸಂವಾದ, ಭಾಗವಹಿಸುತ್ತಾರೆ–ಹುಣಸೂರು ತಾಲ್ಲೂಕು ಕಟ್ಟೇಮಳಲವಾಡಿಯ ಕೃಷಿಕ ದಂಪತಿ ವಿಶ್ವನಾಥರಾವ್ ಸುತ್ರಾವೆ ಮತ್ತು ಪಿ. ಎನ್. ಚಂದ್ರಕಲಾ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

■ **ತನುಮನ ಸಂಸ್ಥೆ :** ಧಮ್ಮ ಸಂಗೀತಯಾನ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವರಪ್ಪ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಾಹಿತಿ ಡಾ. ಕೆ.ಪಿ. ಮಹಾದೇವಯ್ಯ, ನಾಟ್ಯ ಸಂಸ್ಥೆ ಕಾರ್ಯದರ್ಶಿ ಎನ್. ಸಂತೋಷ್, ಗಾಯಕ ಲಕ್ಷ್ಮೀರಾವ್, ಆರ್. ರೂಪ, ಸ್ಥಳ: ಚಿಂತನ ಚಾವಡಿ, ಕಲಾಮಂದಿರ ಆವರಣ, ಸಂಜೆ 4ಕ್ಕೆ

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–924, ಕಥೆ ಹೇಳುವವರು: ಡಾ. ವಿನೋದ, ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಬಿಎಸ್‌ಎಸ್ ವಿದ್ಯೋದಯ, ರಾಗಾ ಮ್ಯೂಸಿಕ್ ಅಕಾಡೆಮಿ, ಸಂಸ್ಕಾರ ಭಾರತಿ :** ಭಗಿನಿ ರಾಗ ಸೌರಭ, ವಿದುಷಿ ಲಕ್ಷ್ಮೀ ನಾಗರಾಜ್ ಮತ್ತು ಇಂದು ನಾಗರಾಜ್ ಅವರಿಂದ ದ್ವಂದ್ವ ಹಾಡುಗಾರಿಕೆ, ವಿದುಷಿ ಅದಿತಿ ಕೃಷ್ಣಪ್ರಕಾಶ್ –ವಯೋಲಿನ್, ವಿದ್ವಾನ್ ಬಿ.ಎಸ್. ಪ್ರಶಾಂತ್ –ಮೃದಂಗ, ವಿದ್ವಾನ್ ರಘುನಂದನ್ ರಾವ್–ಘಟಂ, ಸ್ಥಳ: ಬಿಎಸ್‌ಎಸ್ ವಿದ್ಯೋದಯ, ರಾಘವೇಂದ್ರಸ್ವಾಮಿ ಮಠದ ಹತ್ತಿರ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ

■ **ಆರಭಿ ಸಾಂಸ್ಕೃತಿಕ ಟ್ರಸ್ಟ್ :** "ನಮ್ಮ ಹಾಡು ನಿಮ್ಮೊಂದಿಗೆ" ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ಕಿರು ರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 6ಕ್ಕೆ.

■ **ಬೆಂಗಳೂರು ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು:** 163ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಮೈಸೂರು ಯದುಕುಮಾರ್ ಮತ್ತು ತಂಡದಿಂದ ಸ್ಯಾಕ್ಸೋಫೋನ್ ವಾದನ, ಸಹಕಾರ : ಪೂರ್ವಿಕ ಎಂ.ಆರ್.–ಸ್ಯಾಕ್ಸೋಫೋನ್, ಚಂದನ್–ಪಿಟೀಲು, ಸೋಮೇಶ–ಕೊಳಲು, ರಾಜೇಶ್ –ಕೀಬೋರ್ಡ್, ರಾಘವೇಂದ್ರ ಪ್ರಸಾದ್–ರಿದಂ ಪ್ಯಾಡ್, ನಾಗೇಶ್–ಡೋಲು, ಶೇಷಾಚಲ ಬಾಬು –ತಬಲ, ಕಿರಣ್ ಕುಮಾರ್–ಮೃದಂಗ, ಲಕ್ಷ್ಮೀಕಾಂತ್–ಘಟಂ, ಹರೀಶ್ –ಶ್ರುತಿ ಮತ್ತು ದೀಪಕ್–ತಾಳ, ಸ್ಥಳ: ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣ, ಸಂಜೆ 6ಕ್ಕೆ

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ರಾಮೋತ್ಸವ ಕಾರ್ಯಕ್ರಮ, ಸಂಜೆ 6.30 ರಿಂದ ವಿದುಷಿ ಶ್ರೀಮತಿ ರಾಜಲಕ್ಷ್ಮಿ ಮತ್ತು ತಂಡದವರಿಂದ ದೇವರ ನಾಮಗಳು, ಸಂಜೆ 7 ರಿಂದ ಶಿವಾರ ಉಮೇಶ್ ಅವರಿಂದ ಹರಿಕಥೆ 'ಶ್ರೀರಾಮ ಜನನ', ಸ್ಥಳ:ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ ಐ ಬ್ಲಾಕ್, ರಾಮಕೃಷ್ಣನಗರ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಂದಿ–ಮಂದಿ ನಾಟಕ ಪ್ರದರ್ಶನ, ನಿರ್ದೇಶನ : ಶಕೀಲ್ ಅಹ್ಮದ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

ಸಿಗ್ನಲ್....ಸಿಗ್ನಲ್....ಸಿಗ್ನಲ್....ಎಲ್ನೋಡಿದ್ರೂ ಸಿಗ್ನಲ್...!?

ಮೈಸೂರಲ್ಲಿ 43 ವೃತ್ತಗಳಲ್ಲಿ ಹೊಸ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಕೆ!



●ಕೆಲವು ಅಗತ್ಯ, ಇನ್ನು ಕೆಲವು ಅನಗತ್ಯ ●ಅಗತ್ಯ ಸಿಗ್ನಲ್ ಲೈಟ್‌ಗಳಿಂದ ಟ್ರಾಫಿಕ್ ಜಾಮ್ ಕಿರಿಕಿರಿ ಮುಕ್ತ ●ಅನಾವಶ್ಯಕ ಸಿಗ್ನಲ್‌ನಿಂದ ವಾಹನ ದಟ್ಟಣೆ ಸಮಸ್ಯೆ

ಮೈಸೂರು, ಮಾ.20(ಬಿಎಲ್‌ಯು)– ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಸಾಂಸ್ಕೃತಿಕ ನಗರಿ ಮೈಸೂರಿನ ಹಲವು ವೃತ್ತ ಹಾಗೂ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಸಂಚಾರಿ ಪೊಲೀಸರು ಅಳವಡಿಸಿದ್ದಾರೆ. ಸಂಚಾರಿ ಪೊಲೀಸರ ಈ ಕ್ರಮಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸಂಚಾರ ದಟ್ಟಣೆ ಇಲ್ಲದ ಸ್ಥಳಗಳಲ್ಲೂ ಅನಾವಶ್ಯಕವಾಗಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ ಎಂದು ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದ ಶಿವರಾಂಪೇಟೆಯ ಶೃಂಗಾರ್ ಹೋಟೆಲ್ ಬಳಿ, ದಿವಾನ್ಸ್ ರಸ್ತೆ ಹಾಗೂ ದೇವರಾಜ ಅರಸ್ ರಸ್ತೆ ಜಂಕ್ಷನ್‌ನಲ್ಲಿ, ಜೆಎಲ್‌ಬಿ ರಸ್ತೆ ರೋಟರಿ ಶಾಲೆ ಬಳಿ ಸೇರಿದಂತೆ ಕೆಲವು ಸ್ಥಳಗಳಲ್ಲಿ ಅನಾವಶ್ಯಕವಾಗಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ಸಂಚಾರ ದಟ್ಟಣೆ ಕಡಿಮೆ ಮಾಡುವ ಬದಲು ಟ್ರಾಫಿಕ್ ಜಾಮ್ ಹೆಚ್ಚಾಗುತ್ತಿದೆ ಎಂದು ತೊಂದರೆ ಅನುಭವಿಸುತ್ತಿರುವ ಸಾರ್ವಜನಿಕರು, ವಾಹನ ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಹುಣಸೂರು ರಸ್ತೆ ಮತ್ತು ಗೋಕುಲಂ ರಸ್ತೆ ಜಂಕ್ಷನ್‌ನಲ್ಲಿ ಹೊಸದಾಗಿ ಅಳವಡಿಸಿರುವ ಸಿಗ್ನಲ್ ಲೈಟ್‌ನಲ್ಲಿ ಹಾದು ಹೋಗುತ್ತಿರುವ ವಾಹನಗಳು.

ಮೈಸೂರು ನಗರದಲ್ಲಿ 2025ಕ್ಕೂ ಮೊದಲು 53 ಸಿಗ್ನಲ್ ಲೈಟ್‌ಗಳಿದ್ದವು. ಆದರೆ 2025 ರಿಂದ 2026 ಮಾರ್ಚ್‌ವರೆಗೆ ಹೊಸದಾಗಿ ಎಐ ಚಾಲಿತ ಅತ್ಯಾಧುನಿಕ ತಂತ್ರಜ್ಞಾನದ 43 ಸಿಗ್ನಲ್ ಲೈಟ್‌ಗಳನ್ನು ಸಂಚಾರಿ ಪೊಲೀಸರು ಅಳವಡಿಸಿದ್ದಾರೆ. ಈ ಮೂಲಕ ಮೈಸೂರು ನಗರದಲ್ಲಿ ಒಟ್ಟು 96 ಸಿಗ್ನಲ್ ಲೈಟ್‌ಗಳಿವೆ.

ಸುಗಮ ಸಂಚಾರ ವ್ಯವಸ್ಥೆ ಹಾಗೂ ವಾಹನ ದಟ್ಟಣೆ ಸಮಸ್ಯೆ ನಿವಾರಣೆಗೆ ಶಾಲಾ–ಕಾಲೇಜುಗಳು, ಮಾರುಕಟ್ಟೆಗಳು, ಆಸ್ಪತ್ರೆಗಳು ಹಾಗೂ ಪಾದಚಾರಿ ವಲಯಗಳ ಬಳಿ 43 ಸ್ಮಾರ್ಟ್ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಸಂಚಾರಿ ಪೊಲೀಸರು ಅಳವಡಿಸಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನದ ಇವು ಸಿಂಕ್ರೋನೈಸೇಷನ್ ಆಗುವ ಸುಧಾರಿತ ಪ್ರೋಗ್ರಾಮಿಂಗ್ ಹೊಂದಿದೆ. ಅಲ್ಲದೆ ಸಂಚಾರ ನಿಯಂತ್ರಣ ಕೇಂದ್ರ (ಟಿಸಿಸಿ) ದೊಂದಿಗೆ ಸಂಯೋಜಿಸಲ್ಪಟ್ಟಿರುತ್ತದೆ.

ನೈಜ ಸಮಯ ನಿರ್ವಹಣೆ, ಟ್ರಾಫಿಕ್ ಬೇಡಿಕೆಯ ಆಧಾರದ ಮೇಲೆ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಲಿದೆ. ಅಲ್ಲದೆ ತುರ್ತು ಪರಿಸ್ಥಿತಿಯಲ್ಲಿ ಅಥವಾ ವಿಶೇಷ ಸಂದರ್ಭಗಳಲ್ಲಿ ಹಸ್ತಚಾಲಿತವಾಗಿ ಇದನ್ನು ನಿಯಂತ್ರಿಸಬಹುದಾಗಿದೆ.

ಮೈಸೂರು ನಗರದ ಬನ್ನಿಮಂಟಪದ ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತ (ಹೈವೆ ಸರ್ಕಲ್), ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಬಳಿಯ ಕೌಟಿಲ್ಯ ವೃತ್ತ, ಮಹಾರಾಜ ಕಾಲೇಜು ಮೈದಾನ ಬಳಿಯ ಏಕಲವ್ಯ ವೃತ್ತ, ಹೆಬ್ಬಾಳಿನ ಅಭಿಷೇಕ್ ಸ್ಟೋರ್ ವೃತ್ತ, ಹೈ ಟೆನ್ಷನ್ ಜೋಡಿ ರಸ್ತೆ, ಹುಣಸೂರು ರಸ್ತೆ, ಗೋಕುಲಂ ರಸ್ತೆ ಸೇರಿದಂತೆ ಹಲವೆಡೆ ಹೊಸ ಸಿಗ್ನಲ್ ಲೈಟ್‌ಗಳನ್ನು ಹೊಸದಾಗಿ ಅಳವಡಿಸಲಾಗಿದೆ. ಇವುಗಳಲ್ಲಿ ಕೆಲವು ಇಂದಿಗೂ ಕಾರ್ಯ ನಿರ್ವಹಿಸದೆ ಸ್ಥಗಿತವಾಗಿದೆ.

ಆರ್ ಟಿಒ ವೃತ್ತ, ಶಿವರಾಂಪೇಟೆಯ ಶೃಂಗಾರ್ ಹೋಟೆಲ್ ಬಳಿ, ಹರ್ಷ ಬಾರ್ ಬಳಿಯ ಬೋಗಾದಿ ರಸ್ತೆ, ಜೆಎಲ್‌ಬಿ ರಸ್ತೆ ಹಾಗೂ ಮಾನಂದವಾಡಿ ರಸ್ತೆಯ ಜಂಕ್ಷನ್, ಜೆ.ಪಿ.ನಗರ, ಅಗ್ರಹಾರದ ಜೆಎಸ್‌ಎಸ್ ಆಸ್ಪತ್ರೆ ಜಂಕ್ಷನ್ ಸೇರಿದಂತೆ ಇತರೆಡೆ ಕೂಡ ಹೊಸ ಸಿಗ್ನಲ್ ಲೈಟ್‌ಗಳನ್ನು ಸಂಚಾರಿ ಪೊಲೀಸರು ಅಳವಡಿಸಿದ್ದಾರೆ.

ಹೊಸದಾಗಿ ಅಳವಡಿಸಿರುವ 43 ಸಿಗ್ನಲ್ ಲೈಟ್‌ಗಳಲ್ಲಿ ಹಲವು ಅತ್ಯವಶ್ಯವಾಗಿದೆ. ಇದರಿಂದ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಿದಂತಾಗಿದೆ. ಆದರೆ ಕೆಲವು ಮಾತ್ರ ಅನಗತ್ಯವಾಗಿ ಅಳವಡಿಸಲಾಗಿದ್ದು, ಇದರಿಂದ ಸುಗಮ ಸಂಚಾರ ವ್ಯವಸ್ಥೆ ಬದಲು, ವಾಹನ ದಟ್ಟಣೆಯ ಸಮಸ್ಯೆ ಎದುರಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಸಂಚಾರ ದಟ್ಟಣೆ ಕಡಿಮೆ ಮಾಡುವ ದೃಷ್ಟಿಯಿಂದ ಅಗತ್ಯ ಸ್ಥಳಗಳಲ್ಲಿ ಸಿಗ್ನಲ್ ಲೈಟ್ ಅಳವಡಿಸಲಾಗಿದೆ ಎಂದು ಪೊಲೀಸರು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ಕೆಲವು ಹೊಸ ಸಿಗ್ನಲ್ ಲೈಟ್‌ಗಳಿಂದ ಟ್ರಾಫಿಕ್ ಜಾಮ್ ಆಗುತ್ತಿದೆ. ಇದಕ್ಕೆ ಶಿವರಾಂಪೇಟೆ ಶೃಂಗಾರ್ ಹೋಟೆಲ್ ಬಳಿ ಹಾಗೂ ದೇವರಾಜ ಅರಸ್ ರಸ್ತೆ ಮತ್ತು ದಿವಾನ್ಸ್ ರಸ್ತೆಯ ಜಂಕ್ಷನ್ ಬಳಿ ಇರುವ ಅವೈಜ್ಞಾನಿಕ ಸಿಗ್ನಲ್ ಲೈಟ್‌ಗಳೇ ಸ್ಪಷ್ಟ ಉದಾಹರಣೆ ಎಂದು ವಾದಿಸಿದ್ದಾರೆ.

ಸಾರ್ವಜನಿಕರು ಉದಾಹರಣೆಯಾಗಿ ನೀಡಿರುವ ಈ ಸ್ಥಳಗಳಲ್ಲಿ ರಸ್ತೆ ಕಿರಿದಾಗಿದ್ದು, ಈಗ ಟ್ರಾಫಿಕ್ ಜಾಮ್ ಆಗುತ್ತಿದೆ. ಸಿಗ್ನಲ್ ಲೈಟ್ ಅಳವಡಿಸುವ ಮೊದಲು ವಾಹನಗಳು ಸರಾಗವಾಗಿ ಸಂಚರಿಸುತ್ತಿದ್ದವು. ಆದರೆ ಈಗ ವಾಹನ ದಟ್ಟಣೆಯಾಗುತ್ತಿದೆ. ಆಂಬುಲೆನ್ಸ್‌ಗಳು ಬಂದಾಗ ಟ್ರಾಫಿಕ್ ಜಾಮ್ ದಾಟಿ ಹೋಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಹೊಸ ಸಿಗ್ನಲ್ ಲೈಟ್‌ಗಳಿಂದ ಸುಗಮ ಸಂಚಾರ ವ್ಯವಸ್ಥೆ; ಟ್ರಾಫಿಕ್ ಜಾಮ್ ಇಲ್ಲವೇ ಇಲ್ಲ

ಮೈಸೂರಿನ ಹಲವೆಡೆ ಹೊಸದಾಗಿ ಅಳವಡಿಸಿರುವ ಎಐ ಚಾಲಿತ ಅತ್ಯಾಧುನಿಕ ತಂತ್ರಜ್ಞಾನದ ಸಿಗ್ನಲ್ ಲೈಟ್‌ಗಳಿಂದ ಸುಗಮ ಸಂಚಾರ ವ್ಯವಸ್ಥೆ ಇದ್ದು, ಎಲ್ಲೂ ವಾಹನ ದಟ್ಟಣೆ ಕಂಡು ಬರುವುದಿಲ್ಲ. ಉದಾಹರಣೆಗೆ ಮೈಸೂರಿನ ಜೆಎಲ್‌ಬಿ ರಸ್ತೆ ಮತ್ತು ಮಾನಂದವಾಡಿ ರಸ್ತೆ ಜಂಕ್ಷನ್‌ನ ಫೈವ್‌ಲೈಟ್ ಸರ್ಕಲ್‌ನಿಂದ ರೈಲ್ವೆ ನಿಲ್ದಾಣ ಬಳಿಯ ದಾಸಪ್ಪ ವೃತ್ತದವರೆಗೆ 9 ಸಿಗ್ನಲ್ ಲೈಟ್‌ಗಳಿವೆ.

ಎಐ ಆಧಾರಿತ ಈ ಸಿಗ್ನಲ್ ಲೈಟ್‌ಗಳಲ್ಲಿ ವಾಹನ ದಟ್ಟಣೆ ಕಂಡು ಬರುವುದಿಲ್ಲ. ಜೆಎಲ್‌ಬಿ ರಸ್ತೆ ಮತ್ತು ಮಾನಂದವಾಡಿ ರಸ್ತೆ ಜಂಕ್ಷನ್‌ನ ಫೈವ್‌ಲೈಟ್ ಸರ್ಕಲ್‌ನಿಂದ ಹೊರಟರೆ ದಾಸಪ್ಪ ವೃತ್ತದವರೆಗೆ ಎಲ್ಲೂ ವಾಹನಗಳು ನಿಲ್ಲುವ ಪ್ರಮೇಯ ಬರುವುದಿಲ್ಲ. ಒಂದು ಸಿಗ್ನಲ್ ಲೈಟ್‌ನಿಂದ ಮತ್ತೊಂದು ಸಿಗ್ನಲ್ ಲೈಟ್‌ವರೆಗೆ ಹೋಗುವ ಸಮಯಕ್ಕೆ ಸಿಗ್ನಲ್ ಸಿಗಲಿದ್ದು, ಎಲ್ಲೂ ಕಾಯುವ ಪರಿಸ್ಥಿತಿ ಬರುವುದಿಲ್ಲ.

ಎಐ ಚಾಲಿತ ಸಂಚಾರ ಮೇಲ್ವಿಚಾರಣೆ, ದಕ್ಷ ಸಂಚಾರ ತಿರುವು, ಸಾರ್ವಜನಿಕ ಸಾರಿಗೆ ಹೆಚ್ಚಿಸುವುದು, ಸೈಕ್ಲಿಂಗ್ ಉತ್ತೇಜಿಸುವುದು, ಸಂಚಾರ ದಟ್ಟಣೆ ಕಡಿಮೆ ಮಾಡುವ ಬಹುಪಯೋಗವಿದೆ. ಆದರೆ ಕೆಲವು ಸಿಗ್ನಲ್ ಲೈಟ್‌ಗಳಲ್ಲಿ ಮಾತ್ರ ಉಪಯೋಗಕ್ಕಿಂತ ಸಮಸ್ಯೆಯೇ ಹೆಚ್ಚಾಗಿದೆ. ಇಂತಹ ಹಲವು ಸಿಗ್ನಲ್ ಲೈಟ್‌ಗಳು ನಗರದ ತುಂಬಾ ತುಂಬಿವೆ. ಇವು ಸುಗಮ ಸಂಚಾರಕ್ಕಿಂತ ವಾಹನ ದಟ್ಟಣೆಯನ್ನೆ ಹೆಚ್ಚಿಸುತ್ತದೆ. ಇದರಿಂದ ತಾವು ತಲುಪಬೇಕಾದ ಸ್ಥಳ ಸೇರಲು ವಾಹನ ಸವಾರರಿಗೆ ವಿಳಂಬವಾಗುತ್ತಿದೆ.

ಅಗತ್ಯ ಸ್ಥಳಗಳಲ್ಲಿ ಮಾತ್ರ ಸಿಗ್ನಲ್ ಲೈಟ್ ಅಳವಡಿಕೆ

ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಅಗತ್ಯ ಇರುವ ಸ್ಥಳಗಳಲ್ಲಿ ಮಾತ್ರ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಅನಗತ್ಯವಾಗಿ ಎಲ್ಲೂ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿಲ್ಲ. 2025ಕ್ಕೂ ಮೊದಲು 53 ಸಿಗ್ನಲ್ ಲೈಟ್‌ಗಳಿತ್ತು, 2025 ರಿಂದ 2026ರ ಮಾರ್ಚ್‌ವರೆಗೆ 43 ಹೊಸ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಕಳೆದ ಒಂದೂಕಾಲು ವರ್ಷದ ಅವಧಿಯಲ್ಲಿ ಮೈಸೂರು ನಗರದಲ್ಲಿ ಹೊಸದಾಗಿ 2 ಲಕ್ಷ ವಾಹನಗಳು ಸೇರ್ಪಡೆಗೊಂಡಿದೆ. ಹಾಗಾಗಿ, ಸಹಜವಾಗಿಯೇ ವಾಹನ ದಟ್ಟಣೆ ಹೆಚ್ಚಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಎಲ್ಲಿ ವಾಹನ ದಟ್ಟಣೆ ಇದೆಯೋ ಅಲ್ಲಿ ಮಾತ್ರ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ.

ಮೈಸೂರಿನಲ್ಲಿ 53 ಹಳೆಯ ಸಿಗ್ನಲ್ ಲೈಟ್‌ಗಳಿವೆ. ಹೊಸದಾಗಿ ಅಳವಡಿಸಿರುವ ಸಿಗ್ನಲ್ ಲೈಟ್ ಜೊತೆ ಹಳೆಯ ಸಿಗ್ನಲ್ ಲೈಟ್‌ಗಳನ್ನು ಸಮನ್ವಯಗೊಳಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಕೆಲವು ಸಮಸ್ಯೆಗಳು ಎದುರಾಗಿದೆ.

ಹಾಗಂತ ಹಳೆಯ 53 ಸಿಗ್ನಲ್ ಲೈಟ್‌ಗಳನ್ನು ಕೂಡಲೇ ತೆರವು ಮಾಡಿ ಆ ಸ್ಥಳಗಳಲ್ಲಿ ಹೊಸ ಸಿಗ್ನಲ್ ಲೈಟ್ ಅಳವಡಿಸಲು ಆಗುವುದಿಲ್ಲ. ಆರ್ಥಿಕ ಸಮಸ್ಯೆ ಕಾರಣ ಇದನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತಿಲ್ಲ. ಆದರೂ ಹಳೆಯ ಹಾಗೂ ಹೊಸ ಸಿಗ್ನಲ್‌ಗಳನ್ನು ಬಳಸಿಕೊಂಡು ಮೈಸೂರಿನಲ್ಲಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಿದ್ದೇವೆ.

– **ಶಿವಶಂಕರ್,** ಎಸಿಪಿ, ಸಂಚಾರ ಪೊಲೀಸ್

ಉತ್ತರಾದಿ ಮಠದಲ್ಲಿ ವಿಜೃಂಭಣೆಯಿಂದ ನೆರವೇರಿದ ಶ್ರೀ ಸತ್ಯಸಂತುಷ್ಟ ತೀರ್ಥರ ಆರಾಧನೆ



ಮೈಸೂರಿನ ಅಗ್ರಹಾರದಲ್ಲಿರುವ ಉತ್ತರಾದಿ ಮಠದಲ್ಲಿ ಶುಕ್ರವಾರ ಶ್ರೀ ಸತ್ಯ ತೀರ್ಥರ ಆರಾಧನೆ ಅಂಗವಾಗಿ ಮೂಲ ಬೃಂದಾವನಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು. ಇದೇ ವೇಳೆ ಮಠದ ಆವರಣದಲ್ಲಿ ಪಲ್ಲಕ್ಕಿ ಉತ್ಸವ ನೆರವೇರಿತು.

ಮೈಸೂರು, ಮಾ.20– ನಗರದ ಅಗ್ರಹಾರದಲ್ಲಿರುವ ಶ್ರೀ ಉತ್ತರಾದಿ ಮಠದಲ್ಲಿ ಶ್ರೀ ಸತ್ಯಸಂತುಷ್ಟ ತೀರ್ಥರ ಆರಾಧನಾ ಉತ್ಸವವು ವಿಜೃಂಭಣೆಯಿಂದ ಜರುಗಿತು.

ಮಾ.18ರಂದು ಪೂರ್ವಾರಾಧನೆ, ಮಾ.19ರಂದು ಮಧ್ಯಾರಾಧನೆ ಮತ್ತು ಇಂದು(ಮಾ.20) ಉತ್ತರ ಆರಾಧನೆ ನಿಮಿತ್ತವಾಗಿ ಗುರುಗಳ ಮೂಲ ಬೃಂದಾವನಕ್ಕೆ ವಿಶೇಷ ಅಭಿಷೇಕ, ಪಂಚಾಮೃತ, ವಿಶೇಷ ಅಲಂಕಾರದೊಂದಿಗೆ ಸಾತ್ವಿಕರಿಂದ ಪಾರಾಯಣ, ತಪಸ್ವಿ ವರೇಣ್ಯರಾದ ಶ್ರೀ ಸತ್ಯಸಂತುಷ್ಟ ತೀರ್ಥರ ಮಹೋನ್ನತ ಜೀವನಾದರ್ಶಗಳನ್ನು ಸ್ಮರಿಸುವ ನಿಟ್ಟಿನಲ್ಲಿ ಪಂಡಿತರಿಂದ ಉಪನ್ಯಾಸ ನೆರವೇರಿತು.

ಇದೇ ವೇಳೆ ಜರುಗಿದ ದೇವರ ಪಲ್ಲಕ್ಕಿ ಉತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಭಕ್ತಿ ಸಮರ್ಪಿಸಿದರು. ಎಲ್ಲರಿಗೂ ತೀರ್ಥ ಹಾಗೂ ಪ್ರಸಾದ ವಿತರಣೆ ಮಾಡಲಾಯಿತು. ಆರಾಧನೆ ನಿಮಿತ್ತ ವಿದ್ವಾನ್ ಸುಮಂತ ವಸಿಷ್ಠ ಮತ್ತು ತಂಡದವರು ದಾಸವಾಣಿ ಸಂಗೀತ ಪ್ರಸ್ತುತಪಡಿಸಿದರು. ಜೊತೆಗೆ ಪರಾಭವ ಸಂವತ್ಸರದ ಪಂಚಾಂಗ ಶ್ರವಣ ಮಾಡಲಾಯಿತು.

ನ್ಯಾಯಾಲಯದೊಳಗೆ ರಾಜಕೀಯ ಹೋರಾಟ ಬೇಡ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಬೆದರಿಕೆ ಆರೋಪ ಅರ್ಜಿ ವಿಚಾರಣೆ ನಿರಾಕರಿಸಿದ 'ಸುಪ್ರೀಂ' ಸೂಚನೆ; ಹೈಕೋರ್ಟ್‌ಗೆ ಹೋಗಲು ಅವಕಾಶ

ನವದೆಹಲಿ, ಮಾ.20– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆದೇಶದಂತೆ ತನ್ನ ಆಸ್ತಿಯನ್ನು ವಶಪಡಿಸಿಕೊಳ್ಳಲು ಬೆದರಿಕೆ ಹಾಕಲಾಗುತ್ತಿದೆ ಎಂದು ಆರೋಪಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಶುಕ್ರವಾರದ ವಿಚಾರಣೆ ವೇಳೆ ಅರ್ಜಿ ವಜಾಗೊಳಿಸಿ, ಕರ್ನಾಟಕ ಹೈಕೋರ್ಟ್ ಸಂಪರ್ಕಿಸಲು ಅವಕಾಶ ನೀಡಿದೆ. ಈ ವೇಳೆ ಅರ್ಜಿದಾರರು ರಾಜ್ಯಕ್ಕೆ ಪ್ರವೇಶಿಸುವಾಗ ತಮ್ಮ ಸುರಕ್ಷತೆ ಖಚಿತಪಡಿಸಿಕೊಳ್ಳಲು ಆದೇಶ ನೀಡುವಂತೆ ಕೋರಿದಾಗ, ಅರ್ಜಿಯನ್ನು ಇ–ಫೈಲಿಂಗ್ ಮಾಡುವ ಆಯ್ಕೆಯೂ ಲಭ್ಯವಿದೆ ಎಂದು ನ್ಯಾಯಪೀಠ ತಿಳಿಸಿದೆ.

ಅರ್ಜಿದಾರರ ಪರ ವಕೀಲರು, ಕಕ್ಷಿದಾರರಿಗೆ ಕರ್ನಾಟಕಕ್ಕೆ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ಅವರ ಭದ್ರತೆಗೆ ಧಕ್ಕೆ ತರಲಾಗುತ್ತಿದೆ. ಪದೇ ಪದೆ ಬೆದರಿಕೆ ಒಡ್ಡಲಾಗುತ್ತಿದೆ. ಪರಿಣಾಮ ಅವರು ದೆಹಲಿಯಲ್ಲಿ ವಾಸಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅವರು ಕರ್ನಾಟಕದಲ್ಲಿರುವ ತಮ್ಮ ಸ್ವಂತ ಮನೆಯಲ್ಲಿ ವಾಸಿಸಲು ಬಯಸುತ್ತಾರೆ. ಆದರೆ ಹಾಗೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ವಾದಿಸಿದರು.

ಅರ್ಜಿದಾರರ ಆಸ್ತಿಯನ್ನು ವಶಪಡಿಸಿಕೊಳ್ಳುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಪೊಲೀಸರಿಗೆ ಹಲವು ದೂರುಗಳನ್ನು ಸಲ್ಲಿಸಿದ್ದಾರೆ. ಇವರ ಪರವಾಗಿ ನ್ಯಾಯಾಲಯ ಆದೇಶ ನೀಡಿದೆ. ಆದರೂ ಬೆದರಿಕೆ ಮುಂದುವರೆದಿದೆ. ಕಳೆದ ಜನವರಿಯಲ್ಲಿ ಮನೆಯ ಮೇಲೆ ಕಲ್ಲು ತೂರಾಟ ನಡೆಸಿ, ಗೂಂಡಾಗಳು ಆವರಣಕ್ಕೆ ನುಗ್ಗಿ ಧ್ವಂಸ ಮಾಡಿದ್ದಾರೆ. ಹೇಗಾದರೂ ಆಸ್ತಿಯನ್ನು ವಶಪಡಿಸಿಕೊಳ್ಳಲು ಹವಣಿಸುತ್ತಿದ್ದಾರೆ ಎಂದು ದೂರಿದರು.



ಈ ವೇಳೆ ನ್ಯಾಯಾಲಯವು, ದೆಹಲಿಯಲ್ಲಿಯೂ ನಿಮ್ಮ ಹಿಂದೆ ಜನರನ್ನು ಕಳುಹಿಸುತ್ತಿದ್ದಾರೆಯೇ ಎಂದು ಪ್ರಶ್ನಿಸಿದಾಗ ಅರ್ಜಿದಾರರ ಪರ ವಕೀಲರು ಪ್ರತಿಕ್ರಿಯಿಸಿ, ದೆಹಲಿಯಲ್ಲಿ ಅಲ್ಲ, ಕರ್ನಾಟಕದಲ್ಲಿ ಎಂದು ಉತ್ತರಿಸಿದರು. ಅರ್ಜಿದಾರರು ಕರ್ನಾಟಕಕ್ಕೆ ಹಿಂದಿರುಗಿ ತಮ್ಮ ನಿವಾಸದಲ್ಲಿ ವಾಸಿಸಲು ಬಯಸುತ್ತಾರೆ. ಆದರೆ ಈ ರೀತಿಯ ಘಟನೆಗಳಿಂದ ಅದು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು.

ಆದರೆ ನ್ಯಾಯಪೀಠ, ಅರ್ಜಿದಾರರು ಸ್ವತಃ ರಾಜಕೀಯ ಹಿನ್ನೆಲೆ ಹೊಂದಿದ್ದಾರೆ. ನ್ಯಾಯಾಲಯದೊಳಗೆ ಅವರು ರಾಜಕೀಯ ಹೋರಾಟ ನಡೆಸುತ್ತಿದ್ದಾರೆ. ಹಾಗಾಗಿ ಈ ಅರ್ಜಿಯನ್ನು ಪರಿಗಣಿಸಲು ಆಸಕ್ತಿ ಹೊಂದಿಲ್ಲ ಎಂದು ವಜಾಗೊಳಿಸಿ, ಅರ್ಜಿದಾರರು ಕರ್ನಾಟಕ ಹೈಕೋರ್ಟ್ ಮುಂದೆ ಹೋಗಲು ಅವಕಾಶ ಮಾಡಿಕೊಟ್ಟಿತು.


ವೃದ್ಧರಿಗೆ ಹೌಸ್ ಅರೆಸ್ಟ್ ಬೆದರಿಕೆ; 8.50 ಲಕ್ಷ ವಂಚನೆ

ಮೈಸೂರು, ಮಾ.20(ಎಸ್‌ಪಿಎನ್)– ವೃದ್ದರೊಬ್ಬರಿಗೆ ಡಿಜಿಟಲ್ ಅರೆಸ್ಟ್ ಆತಂಕ ಸೃಷ್ಟಿಸಿ 8.50 ಲಕ್ಷ ರೂ. ವಂಚಿಸಿದ್ದು, ಈ ಸಂಬಂಧ ಸೆನ್‌ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ಆಲನಹಳ್ಳಿ ನಿವಾಸಿ ಶ್ರೀವತ್ಸ(78) ವಂಚನೆಗೆ ಒಳಗಾದವರು. ಜ.27ರಂದು ವಂಚಕ ಶ್ರೀವತ್ಸ ಅವರನ್ನ ಸಂಪರ್ಕಿಸಿ ತಾವು ಮುಂಬೈನಲ್ಲಿ ಖರೀದಿಸಿರುವ ಏರ್‌ಟೆಲ್ ಸಿಮ್‌ನಿಂದ ನೀವು ಹಲವಾರು ಮಹಿಳೆಯರಿಗೆ ಕರೆಮಾಡಿ ಅಸಭ್ಯವಾಗಿ ಮಾತನಾಡಿದ್ದು, ಈ ಬಗ್ಗೆ ಮುಂಬೈ ಕ್ರೈಂ ಬ್ರಾಂಚ್‌ನಲ್ಲಿ ದೂರು ದಾಖಲಾಗಿದೆ ಎಂದು ವಂಚಕ ಬೆದರಿಸಿದ್ದಾನೆ.

ಅಲ್ಲದೆ, ನಿಮ್ಮ ವಿರುದ್ದ ಮನಿ ಲಾಂಡ್ರಿಂಗ್ ಕೇಸ್, ನರೇಶ್ ಗೋಯಲ್ ಕೇಸ್‌ಗಳ ಮೂಲಕ ನಿಮ್ಮ ಬ್ಯಾಂಕ್ ಖಾತೆಗೆ ಹಣ ಬಂದಿದೆ ಎಂದು ವಂಚಕ ಹೆದರಿಸಿ, ನೀವು ಹೌಸ್ ಅರೆಸ್ಟ್ ಆಗಿದ್ದೀರಿ ಎಂದು ಶ್ರೀವತ್ಸ ಅವರಿಗೆ ಬೆದರಿಕೆ ಹಾಕಿ, ನಿಮ್ಮ ಬ್ಯಾಂಕ್ ಖಾತೆ ಪರಿಶೀಲಿಸುವುದಾಗಿ ತಿಳಿಸಿ ಮಾ.13ರಿಂದ ಮಾ.17ರವರೆಗೆ ನಿರಂತರ ಕರೆ ಮಾಡಿ ಶ್ರೀವತ್ಸರಿಂದ ಹಂತಹಂತವಾಗಿ ಬ್ಯಾಂಕ್ ಖಾತೆಯ ವಿವರ ಪಡೆದುಕೊಂಡಿದ್ದಾನೆ.

ಕೊನೆಗೆ ಮಾ.17ರಂದು 8,59,047 ರೂ.ಗಳನ್ನು ವಂಚಕ, ಶ್ರೀವತ್ಸ ಅವರ ಖಾತೆಯಿಂದ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಕ್ರಮೇಣ ತಾವು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಮೋಸ ಹೋಗಿರುವುದು ಖಚಿತಪಡಿಸಿಕೊಂಡ ಶ್ರೀವತ್ಸ ಅವರು, ಸೆನ್ ಪೊಲೀಸ್ ಠಾಣೆಗೆ ಹಾಜರಾಗಿ ಪ್ರಕರಣ ದಾಖಲಿಸಿದ್ದಾರೆ.

ಮಂಟೇಸ್ವಾಮಿ ದರ್ಶನ



ಮೈಸೂರು ತಾಲೂಕು, ಜಯಪುರ ಗ್ರಾಮದ ಸಿದ್ದಪ್ಪಾಜಿ ರಸ್ತೆ ಬಡಾವಣೆಯಲ್ಲಿ ನಡೆದ ಮಂಟೇಸ್ವಾಮಿ ದೇವರ ಕಂಡಾಯ ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಬಡಾವಣೆ ನಿವಾಸಿಗಳು ಅಭಿನಂದಿಸಿದರು.

ವಿಶ್ವ ಕಿಡ್ನಿ ದಿನಾಚರಣೆ: ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಆರೋಗ್ಯ ಸಭೆ

ತ್ವರಿತ ರೋಗ ನಿರ್ಣಯ ಬಹಳ ಮುಖ್ಯ



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ವಿಶ್ವ ಕಿಡ್ನಿ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಣಿಪಾಲ್ ಆರೋಗ್ಯ ಸಭೆಯಲ್ಲಿ ತಜ್ಞ ವೈದ್ಯರು, ಸಾರ್ವಜನಿಕರಿಗೆ ಕಿಡ್ನಿ ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸಿದರು.

ಮೈಸೂರು, ಮಾ.20– ವಿಶ್ವ ಕಿಡ್ನಿ ದಿನಾಚರಣೆ ಅಂಗವಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ 'ಮಣಿಪಾಲ್ ಆರೋಗ್ಯ ಸಭೆ' ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪ್ರಮುಖ ನೆಫ್ರಾಲಜಿ ಮತ್ತು ಯೂರಾಲಜಿ ತಜ್ಞರು ಕಿಡ್ನಿ ಕಾಯಿಲೆಗಳು, ಆರಂಭಿಕ ಲಕ್ಷಣಗಳು ಮತ್ತು ಲಭ್ಯವಿರುವ ಸುಧಾರಿತ ಚಿಕಿತ್ಸೆಗಳ ಬಗ್ಗೆ ಸಾರ್ವಜನಿಕರಿಗೆ ಸಮಗ್ರ ಮಾಹಿತಿ ನೀಡಿದರು.

ನೆಫ್ರಾಲಜಿ ವಿಭಾಗದ ಕನ್ಸಲ್ಟೆಂಟ್ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಫಿಸಿಷಿಯನ್ ಡಾ.ವಿಪಿನ್ ಕಾವೇರಪ್ಪ ಪಿ.ಟಿ. ಅವರು ಮಾತನಾಡಿ, ಕಿಡ್ನಿ ಕಾಯಿಲೆ ಒಂದು ರೀತಿಯ ಮೌನ ಕಾಯಿಲೆ. ಇದು ಯಾವುದೇ ಲಕ್ಷಣಗಳಿಲ್ಲದೆ ವರ್ಷಗಳ ಕಾಲ ಇರುವ ಹಲವು ಪ್ರಕರಣಗಳಿವೆ. ರೋಗ ಲಕ್ಷಣಗಳು ಗೋಚರಿಸುವ ಹೊತ್ತಿಗೆ ಮೂತ್ರಪಿಂಡದ ಸಾಮರ್ಥ್ಯ ಬಹಳ ಕ್ಷೀಣಿಸಿರುತ್ತದೆ. ಕಿಡ್ನಿ ಹಾನಿಯಾಗಲು ಮಧುಮೇಹ ಮತ್ತು ರಕ್ತದೊತ್ತಡ ಪ್ರಮುಖ ಕಾರಣಗಳಾಗಿವೆ. ಜೀವನಶೈಲಿಯಲ್ಲಿನ ಬದಲಾವಣೆಯಿಂದ ಯುವಜನರಲ್ಲಿ ಈ ಸಮಸ್ಯೆ ಹೆಚ್ಚಾಗುತ್ತಿದ್ದು, ಮಧುಮೇಹ ಮತ್ತು ಬಿಪಿ ನಿಯಂತ್ರಣ, ಆರೋಗ್ಯ ತಪಾಸಣೆ ಹಾಗೂ ದೈಹಿಕ ಚಟುವಟಿಕೆಯುಳ್ಳ ಜೀವನಶೈಲಿ ಮೂಲಕ ಕಾಯಿಲೆಯನ್ನು ಆರಂಭದಲ್ಲೇ ತಡೆಗಟ್ಟಬಹುದು ಎಂದು ಸಲಹೆ ನೀಡಿದರು.

ಯೂರಾಲಜಿ, ಆಂಡ್ರಾಲಜಿ ಕನ್ಸಲ್ಟೆಂಟ್ ಹಾಗೂ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಸರ್ಜನ್ ಡಾ.ಟಿ.ಪಿ.ದಿನೇಶ್‌ಕುಮಾರ್, ಇಂದು ಲೇಸರ್ ಆಧಾರಿತ ಮತ್ತು ಎಂಡೋಸ್ಕೋಪಿಕ್ ಕನಿಷ್ಠ ಶಸ್ತ್ರಚಿಕಿತ್ಸೆ ತಂತ್ರಜ್ಞಾನಗಳ ಮೂಲಕ ಕಡಿಮೆ ನೋವು ಮತ್ತು ತ್ವರಿತ ಚೇತರಿಕೆಯೊಂದಿಗೆ ನಿಖರವಾಗಿ ಚಿಕಿತ್ಸೆ ನೀಡಬಹುದು. ದೇಹದಲ್ಲಿ ನೀರಿನಾಂಶ ಕಡಿಮೆಯಾಗುವುದರಿಂದ(ಡಿಹೈಡ್ರೇಶನ್) ಹಾಗೂ ತಪ್ಪು ಆಹಾರ ಪದ್ಧತಿಯಿಂದಾಗಿ ಕಿಡ್ನಿ ಸ್ಟೋನ್ ಸಮಸ್ಯೆ ಹೆಚ್ಚಾಗುತ್ತಿದೆ. ಆರಂಭದಲ್ಲಿ ಕಾಣಿಸಿಕೊಳ್ಳುವ ಬೆನ್ನುನೋವು, ಮೂತ್ರ ವಿಸರ್ಜನೆ ವೇಳೆ ಉರಿ ಅಥವಾ ರಕ್ತ ಕಾಣಿಸಿಕೊಳ್ಳುವ ಲಕ್ಷಣಗಳನ್ನು ನಿರ್ಲಕ್ಷಿಸಬಾರದು. ಸಾಕಷ್ಟು ನೀರು ಕುಡಿಯುವುದು ಮತ್ತು ಉಪ್ಪಿನ ಸೇವನೆ ಕಡಿಮೆ ಮಾಡುವುದು ಬಹುಮುಖ್ಯ. ಮೈಸೂರಿನ ಮಣಿಪಾಲ್ ಆಸ್ಪತ್ರೆಯು ಅತ್ಯಾಧುನಿಕ 100 ಡಬ್ಲ್ಯೂ ಹೋಲ್ಮಿಯಮ್ ಲೇಸರ್ ತಂತ್ರಜ್ಞಾನವನ್ನು ಹೊಂದಿದ್ದು, ಗಂಭೀರವಾದ ಕಿಡ್ನಿ ಸ್ಟೋನ್ ಪ್ರಕರಣಗಳಲ್ಲೂ ಅತ್ಯಂತ ನಿಖರ ಹಾಗೂ ಪರಿಣಾಮ ಕಾರಿ ಚಿಕಿತ್ಸೆ ನೀಡಲು ಸಜ್ಜಾಗಿದೆ ಎಂದು ತಿಳಿಸಿದರು.

ಇದೇ ವಿಭಾಗದ ಮತ್ತೋರ್ವ ತಜ್ಞರಾದ ಡಾ.ಕೆ.ಎ.ತಿಮ್ಮಯ್ಯ ಅವರು ಮೂತ್ರಪಿಂಡ ವೈಫಲ್ಯದ ಕೊನೆಯ ಹಂತದ ಬಗ್ಗೆ ಮಾತನಾಡಿ, ಡಯಾಲಿಸಿಸ್ ಮೂಲಕ ಜೀವ ಉಳಿಸಬಹುದಾದರೂ, ಕಿಡ್ನಿ ವೈಫಲ್ಯ ಹೊಂದಿರುವವರಿಗೆ ಕಿಡ್ನಿ ಟ್ರಾನ್ಸ್‌ಪ್ಲಾಂಟ್ (ಕಸಿ) ಅತ್ಯುನ್ನತ ಚಿಕಿತ್ಸೆಯಾಗಿದೆ. ಟ್ರಾನ್ಸ್‌ಪ್ಲಾಂಟ್ ನಂತರ ರೋಗಿಗಳು ಸಹಜ ಜೀವನ ನಡೆಸಬಹುದು. ಜೀವಂತ ದಾನಿಗಳು ಕಿಡ್ನಿ ದಾನ ಮಾಡುವುದರಿಂದ ಅವರ ಭವಿಷ್ಯದ ಆರೋಗ್ಯದ ಮೇಲೆ ಯಾವುದೇ ಅಡ್ಡಪರಿಣಾಮಗಳಿರುವುದಿಲ್ಲ. ಅಲ್ಲದೆ, ರಕ್ತದ ಗುಂಪು ಹೊಂದಾಣಿಕೆಯಾಗುವ ದಾನಿಗಳು ಸಿಗದಿದ್ದರೂ ಈಗ ಕಸಿ ಮಾಡಿಸಿಕೊಳ್ಳಲು ಹೆಚ್ಚಿನ ಅವಕಾಶಗಳಿವೆ ಎಂದು ಹೇಳಿದರು.

ತಿಳುವಳಿಕೆಯ ಕೊರತೆ, ವಿಳಂಬವಾದ ತಪಾಸಣೆ ಮತ್ತು ತಡವಾದ ರೋಗನಿರ್ಣಯದ ಪರಿಣಾಮದಿಂದ ಮೂತ್ರಪಿಂಡ ಆರೈಕೆಗೆ ದೊಡ್ಡ ಸವಾಲಾಗಿದೆ. ಸದ್ಯ ಅತ್ಯಾಧುನಿಕ ಶಸ್ತ್ರಚಿಕಿತ್ಸೆ ಹಾಗೂ ಮೂತ್ರಪಿಂಡ ಕಸಿಯಂತಹ ಚಿಕಿತ್ಸೆಗಳು ಲಭ್ಯವಿದ್ದರೂ ಆರಂಭಿಕ ಹಂತದಲ್ಲೇ ರೋಗ ಪತ್ತೆ ಹಚ್ಚುವುದು ಬಹಳ ಮುಖ್ಯ. ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ತಪಾಸಣೆ, ಡಯಾಲಿಸಿಸ್ ಸೇರಿದಂತೆ ಅತ್ಯಾಧುನಿಕ ಯೂರೋಲಾಜಿಕಲ್ ಚಿಕಿತ್ಸೆ ಹಾಗೂ ಕಿಡ್ನಿ ಕಸಿಯಂತಹ ಸಮಗ್ರ ಆರೈಕೆ ಸೇವೆಗಳು ಲಭ್ಯವಿವೆ ಎಂದು ಆರೋಗ್ಯ ಸಭೆಯಲ್ಲಿ ಮಾಹಿತಿ ನೀಡಲಾಯಿತು.

ಯುಗಾದಿ ಸಂಗೀತೋತ್ಸವದಲ್ಲಿ ಮುಂದುವರೆದ ಸಂಗೀತ ರಸದೌತಣ



ಯುಗಾದಿ ಸಂಗೀತೋತ್ಸವದಲ್ಲಿ ಶುಕ್ರವಾರ ಹಿನ್ನೆಲೆ ಗಾಯಕಿ ಅನುರಾಧ ಭಟ್ ತಂಡದವರು ಗಾಯನ ಪ್ರಸ್ತುತಪಡಿಸಿದರು

ಮೈಸೂರು, ಮಾ.20(ವಿವಿಹೆಚ್)– ಮೈಸೂರು ಅರಮನೆ ಮಂಡಳಿ ವತಿಯಿಂದ ಅರಮನೆ ಆವರಣದಲ್ಲಿ ಆಯೋಜಿಸಲಾಗಿದ್ದ ಯುಗಾದಿ ಸಂಗೀತೋತ್ಸವ ಶ್ರೀ ಪರಾಭವ ಸಂವತ್ಸರ–2026ರ ಎರಡನೇ ದಿನವಾದ ಶುಕ್ರವಾರ ಸಂಗೀತ ನಿರ್ದೇಶಕ ನಾಗೇಶ್ ಕಂದೇಗಾಲ, ಅನುರಾಧ ಭಟ್, ಶ್ರೀಹರ್ಷ, ಸುಪ್ರಿಯಾ ರಘುನಂದನ್ ಮತ್ತು ತಂಡದವರಿಂದ 'ಭಾವ ಯುಗಾದಿ' ಸಂಗೀತ ರಸಸಂಜೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ವೇಳೆ 'ಸಿದ್ದಯ್ಯ ಸ್ವಾಮಿ ಬನ್ನಿ...', 'ಸೋಜುಗಾದ ಸೂಜಿ ಮಲ್ಲಿಗೆ', 'ನಂದ ನಂದನ ನೀನು ಶ್ರೀ ಕೃಷ್ಣ', ಸೇರಿದಂತೆ ಹಲವು ಗೀತೆಗಳನ್ನು ಪ್ರಸ್ತುತಪಡಿಸುವ ಮೂಲಕ ನೆರೆದಿದ್ದವರನ್ನು ರಂಜಿಸಿದರು.

ಇದಕ್ಕೂ ಮೊದಲು ವಿದೂಷಿ ವಿಪಂಚೀ ರಘುರಾಮ್ ಮತ್ತು ಮಹತೀ ರಘುರಾಮ್ ತಂಡದಿಂದ 'ಶಾಸ್ತ್ರೀಯ ಸಂಗೀತ', ವಿದೂಷಿ ಸುನಿತಾ ನಂದಕುಮಾರ್ ತಂಡದಿಂದ 'ಭರತನಾಟ್ಯ', ಶ್ರೀದೇವಿ ಭಂಡಾರಕರ್ ಮತ್ತು ತಂಡದವರಿಂದ 'ಕರ್ನಾಟಕ ಶಾಸ್ತ್ರೀಯ ಸಂಗೀತ', ಮತ್ತು ಸಂಗೀತ ಮತ್ತು ತಂಡದವರಿಂದ 'ಜಾನಪದ ಯುಗಾದಿ ಉತ್ಸವ' ಕಾರ್ಯಕ್ರಮಗಳು ನಡೆಯಿತು. ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

ಗಾಯನದ ವೇಳೆ ಅನುರಾಧ ಭಟ್ ಮೈಕ್ ಆಫ್: ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಖ್ಯಾತ ಗಾಯಕಿ ಅನುರಾಧ ಭಟ್ ಅವರ ಮೈಕ್ ಆಫ್ ಮಾಡಿದ ಪ್ರಸಂಗ ನಡೆಯಿತು.

ಕೀ ಬೋರ್ಡ್ ಸಮಸ್ಯೆಯಿಂದಾಗಿ ನಿಗದಿತ ಸಮಯಕ್ಕಿಂತ ತಡವಾಗಿ ಆರಂಭವಾದ 'ಭಾವ ಯುಗಾದಿ' ಕಾರ್ಯ ಕ್ರಮ ರಾತ್ರಿ 10.30ರ ವರೆಗೂ ನಡೆ ಯಿತು. ನಿಗದಿತ ಸಮಯಕ್ಕಿಂತ ಹೆಚ್ಚಿನ ಸಮಯ ನೀಡಲಾಗುವುದಿಲ್ಲ ಎಂದು ಸೂಚಿಸಿದ ಪೊಲೀಸರು, ವೇದಿಕೆ ಮೇಲೆ ಹಾಡು ಹೇಳುತ್ತಿದ್ದ ಅನುರಾಧ ಭಟ್ ಅವರ ಮೈಕ್ ಆಫ್ ಮಾಡಿಸಿದರು. ಇದರಿಂದ ಬೇಸರ ಹೊರಹಾಕಿದ ಕಾರ್ಯಕ್ರಮ ಆಯೋಜಕರು ಮತ್ತು ಗಾಯಕರು ಪೊಲೀಸರ ವರ್ತನೆಗೆ ಅಸಮಾಧಾನ ವ್ಯಕ್ತಪಡಿಸಿದರು.

ಕಲಾವಿದರಿಗೆ ನೀವು ಅವಮಾನ ಮಾಡುತ್ತಿದ್ದೀರಿ, ದಿಢೀರ್ ಮೈಕ್ ಆಫ್ ಮಾಡಿದ್ದಾದರೂ ಯಾಕೆ ಎಂದು ಪ್ರಶ್ನಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಎಡಿಸಿ ಡಾ.ಪಿ.ಶಿವರಾಜು ಪರಿಸ್ಥಿತಿ ತಿಳಿ ಗೊಳಿಸಿ, ಕಲಾವಿದರನ್ನು ಸಮಾಧಾನಪಡಿಸಿದ ಪ್ರಸಂಗ ನಡೆಯಿತು.

ಮೈಸೂರು ಮಿತ್ರ ಶನಿವಾರ 21 ಮಾರ್ಚ್ 2026

ದೇವಸ್ಥಾನದ ಒತ್ತುವರಿ ಜಾಗ ತೆರವಿಗೆ ಕೊಡಗು ಏಕೀಕರಣ ರಂಗ ಆಗ್ರಹ

ಮಡಿಕೇರಿ, ಮಾ.20–ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ವಶದಲ್ಲಿರುವ ಭಾಗಮಂಡಲ ತಲಕಾವೇರಿ ದೇವಸ್ಥಾನ ಮತ್ತು ಅಂಜನ ಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯಕ್ಕೆ ಸೇರಿರುವ ಒತ್ತುವರಿಯಾಗಿರುವ ಜಾಗವನ್ನು ಆಯಾ ಒತ್ತುವರಿದಾರರು ಸ್ವಯಂ ಇಚ್ಛೆಯಿಂದ ತೆರವುಗೊಳಿಸಬೇಕೆಂದು ಕೊಡಗು ಏಕೀಕರಣ ರಂಗ ಮನವಿ ಮಾಡಿದೆ.

ಕೊಡಗು ಏಕೀಕರಣ ರಂಗದ ಪ್ರಮುಖರಾದ ಮಂದಪಂಡ ಕೆ.ಅಪ್ಪಚ್ಚು ಮಾತನಾಡಿ, ದೇವಸ್ಥಾನದ ಜಾಗವನ್ನು ತೆರವು ಮಾಡುವಂತೆ ಸಂಘಟನೆಯ ಮನವಿಗೆ ಸ್ಪಂದಿಸಿ ಒತ್ತುವರಿಯನ್ನು ತೆರವುಗೊಳಿಸಲಿ. ಇಲ್ಲವಾದಲ್ಲಿ ಸರ್ಕಾರದ ಮೂಲಕ ಒತ್ತುವರಿ ತೆರವಿನ ಪ್ರಕ್ರಿಯೆಗಳು ನಡೆಸಬೇಕೆಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು. ಶ್ರೀ ಭಗಂಡೇಶ್ವರ ಮತ್ತು ತಲಕಾವೇರಿ ದೇವಾಲಯದ ಜಮೀನು ಮತ್ತು ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯದ ದೇವರ ಕಾಡು ಒತ್ತುವರಿಯಾಗಿ ಕಾಫಿ ತೋಟ, ರೆಸಾರ್ಟ್‌ಗಳಾಗಿ ಬದಲಾಗುತ್ತಿದ್ದರು ಕ್ರಮ ಕೈಗೊಳ್ಳದ ಶ್ರೀ ಭಗಂಡೇಶ್ವರ ತಲ ಕಾವೇರಿ ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ, ಕುಶಾಲನಗರ ಪ್ರಾದೇಶಿಕ ವಲಯದ ಅರಣ್ಯಾಧಿಕಾರಿ, ದೇವಾಲಯದ ಜಾಗದಲ್ಲಿ ರೆಸಾರ್ಟ್ ನಿರ್ಮಿಸಲು ಅನುಮತಿ ನೀಡಿದ ಭಾಗ ಮಂಡಲ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಒತ್ತುವರಿ ವಿವರಗಳು: ಭಾಗಮಂಡಲ ಮತ್ತು ತಲಕಾವೇರಿ ದೇಗುಲಗಳಿಗೆ ಸಂಬಂಧಿಸಿದಂತೆ ಭಾಗಮಂಡಲ, ತಣ್ಣಿ ಮಾನಿ, ತಾವೂರು, ಚೇರಂಗಾಲ ಗ್ರಾಮಗಳಲ್ಲಿ ಒಟ್ಟು 158.27 ಎಕರೆ ಪ್ರದೇಶ ಒತ್ತುವರಿಯಾಗಿದೆ. ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯಕ್ಕೆ ಸೇರಿದ ಜಮೀನಿನಲ್ಲಿ 12.51 ಎಕರೆ ಜಾಗ ಒತ್ತುವರಿಯಾಗಿರುವುದಾಗಿ ಮಾಹಿತಿ ನೀಡಿ ಇದನ್ನು ತೆರವುಗೊಳಿಸುವಂತೆ ಆಗ್ರಹಿಸಿದರು. ಸುದ್ದಿಗೋಷ್ಠಿ ಯಲ್ಲಿ ಸಂಘಟನೆಯ ತೇಲಪಂಡ ಪ್ರಮೋದ್ ಸೋಮಯ್ಯ ಉಪಸ್ಥಿತರಿದ್ದರು.

ಕಡತವೇ ಮಾಯ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ವಶದಲ್ಲಿರುವ ದೇವಾಲಯಗಳ ಜಮೀನಿನ ಒತ್ತುವರಿ ತೆರವಿಗೆ ಕೊಡಗು ಏಕೀಕರಣ ರಂಗ ಮನವಿ ಮಾಡಿತ್ತು. ಈ ಬಗ್ಗೆ ಭೂ ಮಾಪನ ಇಲಾಖೆ ಸಮರ್ಪಕವಾದ ವರದಿ ಸಲ್ಲಿಸಿತ್ತು ಆಯುಕ್ತ ಭಾಗಮಂಡಲ ತಲಕಾವೇರಿ ದೇವಸ್ಥಾನದ ಒತ್ತುವರಿ ತೆರವಿಗೆ ಸ್ಥಳ ದಕ್ಕೆ ಆಗ್ರಹಿಸಿತ್ತು ಆದರೆ ಪಟ್ಟಭದ್ರರ ಗುಂಪು ಜಾಗಕ್ಕೆ ಸಂಬಂಧಿಸಿದ ಕಡತವನ್ನೇ ಮಾಯ ಮಾಡಿತ್ತು ಎಂದು ಆರೋಪಿಸಿದರು. ಆ ಬಳಿಕ 2023ರ ಜ.23ರಂದು ಏಕೀಕರಣ ರಂಗದ ಮನವಿ ಮೇರೆಗೆ ಲೋಕಾಯುಕ್ತ ನೀಡಿದ ಸೂಚನೆಯಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಭಾಗಮಂಡಲ, ತಾವೂರು ಮತ್ತು ತಣ್ಣಿಮಾನಿಯಲ್ಲಿ ಸರ್ವೇ ಮಾಡಿ ಒತ್ತುವರಿ ಜಾಗವನ್ನು ಗುರುತಿಸಿತ್ತು ಎಂದು ಮಾಹಿತಿ ನೀಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅವಕಾಶ ಕಲ್ಪಿಸದಿದ್ದರೆ ಮುಷ್ಕರ


ಗ್ರಾಮಸ್ಥರು, ಪೋಷಕರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ, ಮಾ.20–ಪ್ರವೇಶ ಪತ್ರ ಇಲ್ಲ ಎನ್ನುವ ಕಾರಣದಿಂದ ಬೆಟ್ಟಗೇರಿಯ ಇಬ್ಬರು ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅವಕಾಶವನ್ನು ನಿರಾಕರಿಸಿರುವ ಅಧಿಕಾರಿಗಳ ಕ್ರಮವನ್ನು ವಿರೋಧಿಸಿರುವ ಗ್ರಾಮಸ್ಥರು ಮತ್ತು ಮಕ್ಕಳ ಪೋಷಕರು ಮಾ.23ರಂದು ನಡೆಯುವ 2ನೇ ಪರೀಕ್ಷೆ ಬರೆಯಲು ಅವಕಾಶ ನೀಡದಿದ್ದರೆ ಮುಷ್ಕರ ನಡೆಸುವುದಾಗಿ ಗ್ರಾಮಸ್ಥರು, ಪೋಷಕರು ಎಚ್ಚರಿಕೆ ನೀಡಿದ್ದಾರೆ.

ಬೆಟ್ಟಗೇರಿ ಪ್ರೌಢಶಾಲೆಯಲ್ಲಿ 15 ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಪ್ರವೇಶ ಪತ್ರ ಬಂದಿದ್ದವು. ಇವರ ಪೈಕಿ ಇಬ್ಬರಿಗೆ ಮಾತ್ರ ಪ್ರವೇಶ ಪತ್ರ ಬಂದಿಲ್ಲ. ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಪರೀಕ್ಷೆಗೆ ಅವಕಾಶ ನೀಡಬೇಕಿದ್ದ ಅಧಿಕಾರಿಗಳು ಅನುಮತಿ ನೀಡದಿರುವ ಬಗ್ಗೆ ಗ್ರಾಮಸ್ಥರಾದ ಹೊಸೂರು ಗಿರೀಶ್ ಸುದ್ದಿಗೋಷ್ಠಿಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇಬ್ಬರು ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ದೊರಕದಿರುವುದಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ ಅವರು, ಮುಂದಿನ ಸೋಮವಾರ ನಡೆಯುವ ಪರೀಕ್ಷೆ ಮೊದಲ ಪರೀಕ್ಷೆ ವಂಚಿತ ಇಬ್ಬರು ಮಕ್ಕಳಿಗೆ ಅವಕಾಶ ನೀಡಬೇಕೆಂದು ಆಗ್ರಹಿಸಿದರು. ಪರೀಕ್ಷೆಗೆ ಅವಕಾಶ ನಿರಾಕರಣೆಯ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹತ್ತಾರು ಸಬೂಬುಗಳನ್ನು ನೀಡುತ್ತಾರೆ. ಆದರೆ, ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಪರೀಕ್ಷೆಗೆ ಅವಕಾಶ ಕಲ್ಪಿಸಿಕೊಡುವುದು ಅವರ ಕರ್ತವ್ಯವಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಪರೀಕ್ಷೆ ವಂಚಿತ ವಿದ್ಯಾರ್ಥಿ ಪ್ರಥಮ್‌ನ ತಾಯಿ ಕಡ್ಯದ ಶೋಭಾವತಿ ಮಾತನಾಡಿ, ಮಗನಿಗೆ ಮುಂದಿನ ಏಪ್ರಿಲ್‌ನಲ್ಲಿ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅವಕಾಶ ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ತಮ್ಮ ಮಗನಿಗೆ ಈಗ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿಯ ಮುಂದಿನ ಎಲ್ಲಾ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿಕೊಡಬೇಕೆಂದು ಮನವಿ ಮಾಡಿದರು. ಮಕ್ಕಳ ಪೋಷಕರಾದ ನರೇಂದ್ರ, ಗ್ರಾಮಸ್ಥರಾದ ಸೋಮಣ್ಣ, ಪವಿತ್ರ ಕುಮಾರ್, ಆರ್. ಭವಾನಿ ಶಂಕರ್ ಉಪಸ್ಥಿತರಿದ್ದರು.

ವಿದ್ಯುತ್ ಕಂಬಕ್ಕೆ ಬೈಕ್ ಅಪ್ಪಳಿಸಿ ಸವಾರ ಸಾವು


ಅನಿಲ್ ಕುಮಾರ್

ಸುಂಟಿಕೊಪ್ಪ, ಮಾ.20–ಮಾದಾಪುರ ರಾಜ್ಯ ಹೆದ್ದಾರಿ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವಿಗೀಡಾಗಿದ್ದು, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಮೀಪದ ಕೆಂಚಿಟ್ಟಿಯಲ್ಲಿ ನಡೆದಿದೆ.

ಸುಂಟಿಕೊಪ್ಪದಿಂದ ಮಾದಾಪುರ ಕಡೆಗೆ ತೆರಳುತ್ತಿದ್ದ ಬೈಕ್ (ಕೆಎ.12, ಕೂ–3627) ಸವಾರನ ನಿಯಂತ್ರಣ ಕಳೆದು ಕೊಂಡು ಕೆಂಚಟಿಯಲ್ಲಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದೆ. ಇದರಿಂದ ತೀವ್ರ ಗಾಯಗೊಂಡ ಮಾದಾಪುರ ಜಂಬೂರು ನಿವಾಸಿ ಅನಿಲ್ ಕುಮಾರ್(36) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಗರಗಂದೂರು ಗ್ರಾಮದ ನಿವಾಸಿ ದಿನೇಶ್ ಎಂಬುವರು ಗಾಯಗೊಂಡಿದ್ದು, ಇವರನ್ನು ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಮೋಹನ್‌ರಾಜ್ ಹಾಗೂ ಸಿಬ್ಬಂದಿಗಳು ತೆರಳಿ ಸ್ಥಳ ಪರಿಶೀಲನೆ ನಡೆಸಿದರು. ಘಟನೆಗೆ ಸಂಬಂಧಿಸಿದಂತೆ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದುಕೊಂಡಿದ್ದು, ಮೊಕದ್ದಮೆ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗೃಹ ಬಳಕೆ ಅಡುಗೆ ಅನಿಲ ಆತಂಕ ಅನಗತ್ಯ



ಮಡಿಕೇರಿ, ಮಾ.20–ಜಿಲ್ಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಂಪರ್ಕ ಹೊಂದಿರುವ ಪ್ರತಿ ಮನೆಗೂ ಪೂರೈಕೆ ಮತ್ತು ಬೇಡಿಕೆಗೆ ತಕ್ಕಂತೆ ಸರ್ಕಾರದ ನಿಯ ಮಾನುಸಾರ ಸರಬರಾಜು ಮಾಡುವಂತೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಅಡುಗೆ ಅನಿಲ ವಿತರಕರ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಅಮೆರಿಕ ಮತ್ತು ಇಸ್ರೇಲ್ ದೇಶಗಳು ಇರಾನ್ ವಿರುದ್ಧ ಸಾರಿರುವ ಸಮರ ತೀವ್ರಗೊಂಡಿರುವ ಪರಿಣಾಮವಾಗಿ ಅಡುಗೆ ಅನಿಲ ಪೂರೈಕೆ ಬಗ್ಗೆ ಸಾರ್ವಜನಿಕರಲ್ಲಿ ಆತಂಕ ಉಂಟಾಗಿದ್ದು, ಇದನ್ನು ನಿವಾರಿಸಬೇಕು. ಆ ನಿಟ್ಟಿನಲ್ಲಿ ಯಾರೂ ಸಹ ಆತಂಕಕ್ಕೆ ಒಳಗಾಗದಂತೆ ಗೃಹ ಬಳಕೆ ಅಡುಗೆ ಅನಿಲವನ್ನು ಪೂರೈಸಬೇಕು ಎಂದು ತಾಕೀತು ಮಾಡಿದರು.

ಆದ್ಯತೆ ಮೇರೆಗೆ ಹಾಗೂ ನಿಗಧಿತ ಅವಧಿಯೊಳಗಾಗಿ ಗೃಹಬಳಕೆ ಸಿಲಿಂಡರ್‌ಗಳ ಪೂರೈಕೆ ಮಾಡಬೇಕು, ಕಡ್ಡಾಯವಾಗಿ ಎಫ್‌ಐಎಫ್‌ಓ ಪ್ರಕಾರವೇ ಗೃಹಬಳಕೆ ಸಿಲಿಂಡರ್‌ಗಳ ವಿತರಣೆ ಮಾಡಬೇಕು. ಎಲ್‌ಪಿಜಿ ವಿತರಕರು ದಾಸ್ತಾನು ಕೊರತೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕು, ಇಕೆವೈಸಿ ಆಗದೇ ಇರುವ ಗ್ರಾಹಕರಿಗೆ ತಕ್ಷಣವೇ ಇಕೆವೈಸಿ ಮಾಡಿಸಿಕೊಂಡು, ಅನಿಲ ಸಿಲಿಂಡರ್ ಸರಬರಾಜು ಮಾಡಬೇಕು. ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ಕೃತಕ ಅಭಾವ ಸೃಷ್ಟಿಸುವುದು ಹಾಗೂ ಗ್ರಾಹಕರಿಂದ ಅನಧಿಕೃತವಾಗಿ ಹೆಚ್ಚಿನ ಹಣ ವಸೂಲಿ ಮಾಡುವಂತಿಲ್ಲ ಎಂದು ಕಟ್ಟುನಿಟ್ಟಿನ ಆದೇಶ ನೀಡಿದರು.

ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಾಗಿ ಜಿಲ್ಲೆಯಲ್ಲಿ 16,829 ಕುಟುಂಬಗಳು ಬುಕ್ಕಿಂಗ್ ಮಾಡಿದ್ದು, ಹಾಗೆಯೇ ವಾಣಿಜ್ಯ ಬಳಕೆಯ ಅಡುಗೆ ಅನಿಲ 505 ಮಂದಿ ಸಿಲಿಂಡರ್‌ಗಾಗಿ ಬುಕ್ಕಿಂಗ್ ಮಾಡಿದ್ದಾರೆ. ಆಯಾಯ ಸಂದರ್ಭದಲ್ಲಿ ಸರದಿಯಂತೆ ಅಡುಗೆ ಅನಿಲ ಪೂರೈಸಲಾಗುತ್ತದೆ ಎಂದು ಆಹಾರ ಇಲಾಖೆ ಉಪ ನಿರ್ದೇಶಕ ಎಂ.ಭೀಮರಾಯ ತಿಳಿಸಿದರು.

ಅಗ್ರಹಾರ ಬಾಚಹಳ್ಳಿಯಲ್ಲಿ ರೈತರಿಂದ
ಹೊನ್ನಾರು ಕಟ್ಟಿ ಕೃಷಿ ಚಟುವಟಿಕೆಗೆ ಚಾಲನೆ


ರೈತರು ಹೊನ್ನಾರು ಕಟ್ಟಿ ಕೃಷಿ ಚಟುವಟಿಕೆಗೆ ಚಾಲನೆ ನೀಡಿದರು.

ಕೆ.ಆರ್.ಪೇಟೆ, ಮಾ.20–ಯುಗಾದಿ ಹಬ್ಬದಂದು ರೈತರು ಸಾಂಪ್ರದಾಯಿಕವಾಗಿ ಹೊನ್ನಾರು ಕಟ್ಟಿ ವರ್ಷದ ಮೊದಲ ಕೃಷಿ ಚಟುವಟಿಕೆಗೆ ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ಚಾಲನೆ ನೀಡಿದರು.

ಬೇಸಾಯಕ್ಕೆ ಬಳಸುವ ಹಸು ಮತ್ತು ಎತ್ತುಗಳನ್ನು ಮೈತೊಳೆದು ಅಲಂಕರಿಸಿ ದೇವಾಲಯದ ಬಳಿ ಕರೆತಂದು ರಾಸುಗಳು ಸೇರಿದಂತೆ ನೇಗಿಲು, ನೊಗ ಪೂಜಿಸಿ ಹೊನ್ನಾರು ಆರಂಭಿಸಲಾಯಿತು. ಮಂಗಳವಾದ್ಯಗಳೊಂದಿಗೆ ಹೊಲದಲ್ಲಿ ಉಳುಮೆ ಮಾಡುವ ಮೂಲಕ ವರ್ಷದ ಮೊದಲ ಕೃಷಿ ಚಟುವಟಿಕೆಗೆ ಚಾಲನೆ ನೀಡಿ ಸಂಭ್ರಮಿಸಿದರು.

ಗ್ರಾಮ ದೇವತೆ ಶ್ರೀ ಲಕ್ಷ್ಮಿ ದೇವಿ ಅಮ್ಮನವರ ದೇವಾಲಯದ ಆವರಣದಲ್ಲಿ ಜಾನುವಾರುಗಳಿಗೆ ಹಾಗೂ ನೇಗಿಲು–ನೊಗಗಳಿಗೆ ದೇವಾಲಯದ ಅರ್ಚಕರು ಪೂಜೆ ಸಲ್ಲಿಸಿ ಹೊನ್ನಾರು ಕಟ್ಟಿ ಕಾರ್ಯಕ್ಕೆ ಚಾಲನೆ ನೀಡಿದರು. ಹೊನ್ನಾರು ಕಟ್ಟಿದ್ದ ರೈತರು ದೇವಾಲಯದಿಂದ ಆರಂಭಿಸಿ ಗ್ರಾಮದ ಸುತ್ತಲೂ ಇರುವ ಹೊಲದಲ್ಲಿ ಉಳುಮೆ ಮಾಡುತ್ತಾ ತಮಟೆ ಮತ್ತು ಮಂಗಳ ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಗ್ರಾಮವನ್ನು ಒಂದು ಸುತ್ತು ಬಂದು ನಂತರ ದೇವಾಲಯದ ಆವರಣದಲ್ಲಿ ಹೊನ್ನಾರು ಸಂಪನ್ನಗೊಂಡಿತು.

ಗ್ರಾಮದ ಯಜಮಾನರಾದ ಎ.ಸಿ. ಸಂತೋಷ್ ಚಂದ್ರೇಗೌಡ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್, ಲಾಳಿ ಬೋರೇಗೌಡ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಎ.ಎಂ. ಮಂಜೇಗೌಡ, ಗ್ರಾ.ಪಂ. ಮಾಜಿ ಸದಸ್ಯ ಬಿ.ಹೆಚ್.ಅಶೋಕ್, ಯಜಮಾನ್ ಲಾಳಿ ಬೋರೇಗೌಡ, ಉದ್ದಾನಿ ಮಹಾದೇವೇಗೌಡ, ದೇವರ ಜಯರಾಮೇಗೌಡ, ಸೀಮೆ ಮಹೇಂದ್ರ, ಎ.ವಿ.ಶಂಕರೇಗೌಡ, ಎ.ಪಿ.ಮಂಜೇ ಗೌಡ, ಎ.ಪಿ.ವೆಂಕಟೇಶ್, ಪುಟ್ಟಸ್ವಾಮಿ, ರಂಗನಾಯಕ, ಸ್ವಾಮಿ, ಪುಟ್ಟಸ್ವಾಮಯ್ಯ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು. ಗ್ರಾಮದ ಮಹಿಳೆಯರು ತಮ್ಮ ಮನೆಯ ಮುಂದೆ ರಂಗೋಲಿ ಬಿಡಿಸಿ ಹೊನ್ನಾರು ಕಟ್ಟಿದ್ದ ರಾಸುಗಳನ್ನು ಹರ್ಷದಿಂದ ಸ್ವಾಗತಿಸಿದರು.

ವೈರಮುಡಿ ಬ್ರಹ್ಮೋತ್ಸವದಲ್ಲಿ ಭಕ್ತಾದಿಗಳಿಗೆ ಮೂಲ ಸೌಕರ್ಯಕ್ಕೆ ಕ್ರಮ ವಹಿಸಿ


ಜಿಲ್ಲಾಧಿಕಾರಿ ಡಾ.ಕುಮಾರ ಸಿದ್ದತಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರು.

ಮೇಲುಕೋಟೆ, ಮಾ.20–ವೈರಮುಡಿ ಬ್ರಹ್ಮೋತ್ಸವದಲ್ಲಿ ಯಾವುದೇ ಲೋಪ ದೋಷಗಳಾಗದಂತೆ, ಭಕ್ತರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೂಚಿಸಿದ್ದಾರೆ.

ಮೇಲುಕೋಟೆ ಪ್ರವಾಸಿ ಮಂದಿರದಲ್ಲಿ ನಡೆದ ಮೇಲುಕೋಟೆಯ ಐತಿಹಾಸಿಕ ವೈರಮುಡಿ ಬ್ರಹ್ಮೋತ್ಸವದ ಪೂರ್ವಭಾವಿ ಸಿದ್ಧತೆಗಳ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತಾದಿಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ತೊಂದರೆ ಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು ಎಂದು ಆದೇಶಿಸಿದರು.

ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಕಟ್ಟುನಿಟ್ಟಿನ ಭದ್ರತೆ, ಸುಗಮ ಜನಸಂದಣಿ ನಿರ್ವಹಣೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಆದ್ಯತೆ ನೀಡಿ. ಶೌಚಾಲಯ, ವೈದ್ಯಕೀಯ ಸೌಲಭ್ಯ ಮತ್ತು ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲು ನಿರ್ದೇಶನ ನೀಡಲಾಯಿತು. ಜನದಟ್ಟಣೆಯನ್ನು ನಿಯಂತ್ರಿಸಲು ಮತ್ತು ಉತ್ಸವದ ಮೆರವಣಿಗೆ ಸುಗಮವಾಗಿ ಸಾಗಲು ಸೂಕ್ತ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಮೇಲುಕೋಟೆಯಲ್ಲಿ ಮಾ. 28ರಂದು ನಡೆಯುವ ವಿಶ್ವವಿಖ್ಯಾತ ವೈರಮುಡಿ ಬ್ರಹ್ಮೋತ್ಸವವು ಶ್ರೀ ಚೆಲುವನಾರಾಯಣ ಸ್ವಾಮಿಗೆ ವಜ್ರಖಚಿತ ಕಿರೀಟ ಧಾರಣೆ ಮಾಡಿ, ರತ್ನಖಚಿತ ಆಭರಣಗಳಿಂದ ಅಲಂಕರಿಸಿ, ರಾತ್ರಿ ವೇಳೆ ನಡೆಯುವ ಅದ್ದೂರಿ ಉತ್ಸವದಲ್ಲಿ ಭಕ್ತಾದಿಗಳಿಗೆ ದರ್ಶನಕ್ಕೆ ತೊಂದರೆ ಯಾಗದಂತೆ ನೋಡಿಕೊಳ್ಳುವಂತೆ ಬ್ಯಾರಿಕೆಡ್ ವ್ಯವಸ್ಥೆ ಅಳವಡಿಸಬೇಕು ಮತ್ತು ಶುಚಿತ್ವ ಕಾಪಾಡಿಕೊಳ್ಳಬೇಕು ಏ. 1ರಂದು ಮೇಲುಕೋಟೆಯ ಪುರಾಣ ಪ್ರಸಿದ್ಧ ಪಂಚ ಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯುವುದರಿಂದ ಕಲ್ಯಾಣಿಯನ್ನು ವೀಕ್ಷಣೆ ಮಾಡಿ ಭಕ್ತಾದಿಗಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ವಹಿಸಬೇಕು ಹಾಗೂ ಭಕ್ತಾದಿಗಳಿಗೆ ಸ್ನಾನಗೃಹ ಮತ್ತು ತಾತ್ಕಾಲಿಕ ಶೌಚಾಲಯದ ವ್ಯವಸ್ಥೆ ಹಾಗೂ ಲೈಟಿಂಗ್ ವ್ಯವಸ್ಥೆ ಕಲ್ಪಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಎಸ್ಪಿ ಡಾ.ಶೋಭಾರಾಣಿ, ಮುಜರಾಯಿ ಇಲಾಖೆ ತಹಸೀಲ್ದಾರ್ ತಮ್ಮಣ್ಣಗೌಡ, ಮೇಲುಕೋಟೆ ದೇವಸ್ಥಾನದ ಇಓ ಶೀಲಾ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ರಾತ್ರಿ ಪ್ರಥಮ ತೆಪ್ಪೋತ್ಸವ



ಮೇಲುಕೋಟೆ, ಮಾ.20–ಚೆಲುವ ನಾರಾಯಣಸ್ವಾಮಿಯವರ ಪ್ರಥಮ ತೆಪ್ಪೋತ್ಸವ ಕಲ್ಯಾಣಿಯಲ್ಲಿ ಮಾ. 21ರ ರಾತ್ರಿ ವಿಜೃಂಭಣೆಯಿಂದ ನೆರವೇರಲಿದೆ. ಶ್ರೀದೇವಿ–ಭೂದೇವಿಯೊಂದಿಗೆ ಮುತ್ತುಮುಡಿಯ ಅಲಂಕೃತನಾದ ಚೆಲುವ ನಾರಾಯಣಸ್ವಾಮಿಗೆ ರಾಮಾನುಜಾಚಾರ್ಯರೊಂದಿಗೆ ತೆಪ್ಪೋತ್ಸವ ನೆರವೇರಲಿದೆ. ತೆಪ್ಪೋತ್ಸವದ ವೇಳೆ ಪಾಂಡವಪುರ ಖಜಾನೆಯಿಂದ ತಂದಿರುವ ಅಮೂಲ್ಯ ಮುತ್ತುಗಳ ಆಭರಣಗಳಿಂದ ಸ್ವಾಮಿಯನ್ನು ಅಲಂಕಾರ ಮಾಡಲಾಗುತ್ತದೆ. ಕಲ್ಯಾಣಿಯಲ್ಲಿ ತೆಪ್ಪೋತ್ಸವ ಮೂರು ಪ್ರದಕ್ಷಿಣೆ ನಡೆಸಲಿದ್ದು ತೆಪ್ಪ ಮಂಟಪ ಸಿದ್ಧವಾಗಿದೆ. ಎರಡನೇ ತೆಪ್ಪೋತ್ಸವ ವೈರ ಮುಡಿ ಜಾತ್ರಾ ಮಹೋತ್ಸವದ 7ನೇ ದಿನವಾದ ಏ.1 ರಂದು ರಾತ್ರಿ ನಡೆಯಲಿದೆ.

ಸಹಸ್ರದೀಪೋತ್ಸವ: ಹಲವು ವರ್ಷಗಳ ನಂತರ ಪ್ರಥಮ ತೆಪ್ಪೋತ್ಸವದ ವೇಳೆ ಕಲ್ಯಾಣಿಯ ಸೋಪಾನಗಳಲ್ಲಿ ದೀಪೋತ್ಸವ ನಡೆಯಲಿದೆ ಮೇಲುಕೋಟೆ ದೇವಾಲಯದ ಕೈಂಕರ್ಯಪರರು ಮತ್ತು ನಾಗರೀಕರು ಸೇರಿ ಸಹಸ್ರ ದೀಪೋತ್ಸವವನ್ನು ಹಮ್ಮಿಕೊಂಡಿದ್ದು, ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಅನುಮತಿ ನೀಡಿದ್ದಾರೆ. ವೈರಮುಡಿ ಬ್ರಹ್ಮೋತ್ಸವಕ್ಕೂ ಮುನ್ನ ತೆಪ್ಪೋತ್ಸವದ ವೇಳೆ ಸಹಸ್ರಾರು ದೀಪಗಳು ಪ್ರಜ್ವಲಿಸಲಿದ್ದು ಚೆಲುವ ನಾರಾಯಣಸ್ವಾಮಿಗೆ ದೀಪಾರಾಧನೆಯಾಗಲಿದೆ.

ರೈತರಿಗೆ ಕಹಿಯಾದ ಯುಗಾದಿ; ಇಸ್ಪೀಟ್ ಪ್ರಿಯರಿಗೆ ನಿರಾಸೆ

ಭಾರತಿನಗರ.ಮಾ.20– ಭೀಕರ ಬರದ ಬವಣೆ, ಒಣಗುತ್ತಿರುವ ಬೇಸಿಗೆ ಬೆಳೆಗಳು, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಸಿಗದೆ ಸಂಕಷ್ಟದ ನಡುವೆ ರೈತರ ಪಾಲಿಗೆ ಈ ಬಾರಿ ಯುಗಾದಿ ನಿಜಕ್ಕೂ ಕಹಿಯಾಯಿತು. ಜೂಜಾಟಕ್ಕೆ ಪೊಲೀಸರ ನಿರ್ಬಂಧ ಹಿನ್ನೆಲೆಯಲ್ಲಿ ಜೂಜುಕೋರರಿಗೂ ನಿರಾಸೆಯಾಯಿತು.

ಮೂರ್ನಾಲ್ಕು ವರ್ಷಗಳಿಂದ ಪೊಲೀಸರ ಬಿಗಿ ಕ್ರಮದ ಪರಿಣಾಮ ಬಹುತೇಕ ಕ್ಲಬ್‌ಗಳು ಕದ ಮುಚಿದ್ದು, ಕ್ಲಬ್‌ಗಳನ್ನು ತೆರೆದು, ಜೂಜಾಟಕ್ಕೆ ಅವಕಾಶ ಮಾಡಿಕೊಡಲು ಇಸ್ಪೀಟು ಪ್ರಿಯರು, ದಂಧೆಕೋರರು ನಡೆಸಿದ ಪ್ರಯತ್ನ ಫಲಿಸಿಲ್ಲ.

ಯುಗಾದಿ ಹಬ್ಬದ ಪ್ರಯುಕ್ತ ಕಡೇಪಕ್ಷ 3 ದಿನದ ಮಟ್ಟಿಗಾದರೂ ಇಸ್ಪೀಟ್ ಆಡಲು ಅವಕಾಶ ಕೊಡುವಂತೆ ಕೋರಿ ಎಲ್ಲ ಕ್ಲಬ್‌ಗಳ ಸದಸ್ಯರು ಜಿಲ್ಲಾ ಎಸ್ಪಿಗೆ ಮನವಿ ಮಾಡಿದರೂ ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ. ಇಡೀ ಜಿಲ್ಲೆಯಲ್ಲಿ ಎಲ್ಲೂ ಬಹಿರಂಗವಾಗಿ ಇಸ್ಪೀಟ್ ಸೇರಿದಂತೆ ಜೂಜಾಟಕ್ಕೆ ಅವಕಾಶ ನೀಡಬಾರದು ಎಂದು ಖುದ್ದು ಎಸ್ಪಿಯೇ ಅಧೀನ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದರು. ಇದರಿಂದ ಇಸ್ಪೀಟ್ ಪ್ರಿಯರಿಗೆ ಯುಗಾದಿಯ ಸಂಭ್ರಮ ಕಳೆಗುಂದಿತು.

ಯುಗಾದಿ ಹಬ್ಬದಲ್ಲಿ ಪ್ರತಿ ವರ್ಷ ನಡೆಯುತ್ತಿದ್ದಂತೆ ಈ ವರ್ಷವೂ ಗ್ರಾಮೀಣ ಪ್ರದೇಶದ ಕೆಲವು ಮೊಂಡ ಇಸ್ಪೀಟ್ ಪ್ರಿಯರು ಜೂಜಿನಲ್ಲಿ ತೊಡಗಿದ್ದು ಅಲಲ್ಲಿ ಕಂಡು ಬಂದಿತು.

ಡಿ.ಸಿ.ಚಂದ್ರೇಗೌಡ ನಿಧನ



ಭಾರತೀನಗರ, ಮಾ.20– ಭಾರತೀನಗರದ ಕಾವೇರಿ ನೀರಾವರಿ ನಿಗಮದಲ್ಲಿ ಸಹಾಯಕ ಇಂಜಿನಿಯರ್ ಆಗಿದ್ದ ಡಿ.ಸಿ.ಚಂದ್ರೇಗೌಡ ಹೃದಯಾಘಾತದಿಂದ ಗುರುವಾರ ರಾತ್ರಿ ಮೃತಪಟ್ಟಿದ್ದಾರೆ.

ಮೃತರು ಪತ್ನಿ ಕಾವೇರಿ ನೀರಾವರಿ ನಿಗಮದ ಕಿರಿಯ ಇಂಜಿನೀಯರ್ ಶೀಲ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ದೇವಿಪುರದ ಅವರ ಜಮೀನಿನಲ್ಲಿ ಮಧ್ಯಾಹ್ನ 1 ಗಂಟೆಯಲ್ಲಿ ನೆರವೇರಿತು.

ಆಲಿಕಲ್ಲು ಮಳೆಗೆ ನೂರಾರು ಎಕರೆ ಬಾಳೆ ನಾಶ


ಮಳೆಯಿಂದ ಬಾಳೆ ಬೆಳೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿರುವುದು.

ಚಾಮರಾಜನಗರ: ಜಿಲ್ಲೆಯ ವಿವಿಧೆಡೆ ಕಳೆದ ಮೂರು ದಿನಗಳ ಹಿಂದೆ ಸುರಿದ ಭಾರೀ ಪ್ರಮಾಣದ ಆಲಿಕಲ್ಲು ಸಹಿತ ಗಾಳಿ ಮಳೆಗೆ ನೂರಾರು ಎಕರೆ ಪ್ರದೇಶದಲ್ಲಿ ಬಾಳೆ ಬೆಳೆ ಸೇರಿದಂತೆ ತೋಟಗಾರಿಕಾ ಬೆಳೆಗಳು ಹಾನಿ ಆಗಿದ್ದು, ಲಕ್ಷಾಂತರ ರೂಪಾಯಿ ನಷ್ಟವಾಗಿದೆ.


ಮಂಗಳವಾರ ಭಾರೀ ಪ್ರಮಾಣದ ಆಲಿಕಲ್ಲು ಮಳೆ ಹಾಗೂ ಬುಧವಾರ ಜೋರು ಗಾಳಿಯೊಂದಿಗೆ ಸುರಿದ ಧಾರಾಕಾರ ಮಳೆಯಿಂದ ಜಿಲ್ಲೆಯಲ್ಲಿ ಬಾಳೆ, ಮಾವು, ಪಪ್ಪಾಯಿ, ಅರಿಶಿಣ ಸೇರಿದಂತೆ ಸುಮಾರು 330 ಎಕರೆ ಪ್ರದೇಶದಲ್ಲಿ ಬೆಳೆಯಲಾಗಿದ್ದ ವಿವಿಧ ತೋಟಗಾರಿಕಾ ಬೆಳೆ ನಷ್ಟವಾಗಿದೆ. ಈ ಪೈಕಿ ಶೇ. 80ರಷ್ಟು ಬಾಳೆ ಬೆಳೆಗೆ ಹಾನಿಯಾಗಿದೆ ಎಂದು ಹೇಳಲಾಗಿದೆ.

ವರ್ಷದ ಮೊದಲ ಮಳೆ ತಂದ ಅವಾಂತರ: ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಳೆದ ಎರಡ್ಮೂರು ದಿನಗಳ ಹಿಂದೆ ವರ್ಷದ ಮೊದಲ ಮಳೆ ಸುರಿಯಿತು. ಆದರೆ, ಮಳೆಯೊಂದಿಗೆ ಭಾರೀ ಪ್ರಮಾಣದ ಆಲಿಕಲ್ಲು ಹಾಗೂ ಬಿರುಗಾಳಿಯೂ ಬೀಸಿದ್ದರಿಂದ ಬಾಳೆಯೊಂದಿಗೆ ಸೌತೆಕಾಯಿ, ಕಲ್ಲಂಗಡಿ, ಮಾವು, ಅರಿಸಿಣ, ಟೊಮೆಟೊ, ಪಪ್ಪಾಯಿ ಸೇರಿದಂತೆ ವಿವಿಧ ಬೆಳೆಗಳು ನೆಲಕಚ್ಚಿದ್ದು, ರೈತರು ಕಂಗಾಲಾಗಿದ್ದಾರೆ.

ಪರಿಹಾರಕ್ಕಾಗಿ ಮನವಿ: ಜಿಲ್ಲೆಯಲ್ಲಿ ಸುರಿದ ಆಲಿಕಲ್ಲು ಸಹಿತ ಮಳೆಯಿಂದ ಉಂಟಾಗಿರುವ ಬೆಳೆ ಹಾನಿಯಿಂದ ರೈತರು ಕಂಗಾಲಾಗಿದ್ದಾರೆ. ಕಷ್ಟಪಟ್ಟು ಬೆಳೆದ ಬೆಳೆ ನಾಶವಾಗಿದ್ದು, ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ, ಜಿಲ್ಲಾಡಳಿತ, ಜನಪ್ರತಿನಿಧಿಗಳು ಈ ಬಗ್ಗೆ ಸರ್ಕಾರಕ್ಕೆ ತಿಳಿಸಿ, ನಷ್ಟ ಅನುಭವಿಸಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಮನವಿ ಮಾಡುತ್ತಿದ್ದಾರೆ.

ಈ ಕುರಿತು ರೈತ ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿ, ಜಿಲ್ಲೆಯಲ್ಲಿ ಆಲಿಕಲ್ಲು ಮಳೆಗೆ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದ್ದು, ಈ ಕುರಿತು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸರ್ವೇ ನಡೆಸಿ ಆದಷ್ಟು ಬೇಗ ರೈತರಿಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಬಾಳೆ ಹಾನಿ ಪ್ರದೇಶಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ


ಗಾಳಿ–ಮಳೆಯಿಂದ ಬಾಳೆಗಿಡ ನೆಲಕ್ಕುರುಳಿದ ಹಿನ್ನೆಲೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಪರಿಶೀಲಿಸಿದರು.

ಚಾಮರಾಜನಗರ, ಮಾ.20– ಮೂರು ದಿನಗಳ ಹಿಂದೆ ಸುರಿದ ಮಳೆ ಪರಿಣಾಮ ತಾಲೂಕು ವ್ಯಾಪ್ತಿಯ ದೊಡ್ಡಮೋಳೆ, ಕಟ್ನವಾಡಿ, ಗ್ರಾಮಗಳಲ್ಲಿ ಮಳೆಯಿಂದ ಮನೆ ಗೋಡೆ ಕುಸಿತದ ಪರಿಣಾಮ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಪರಿಶೀಲಿಸಿ, ವೈಯಕ್ತಿಕ ಪರಿಹಾರ ನೀಡಿದರು.

ಇದೇ ವೇಳೆ ಕೆ.ಕೆ. ಹುಂಡಿ ಗ್ರಾಮ, ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಗಾಳಿ ಮಳೆಯಿಂದ ಬಾಳೆಬೆಳೆ, ತೆಂಗಿನಗಿಡ ಸೇರಿದಂತೆ ಬೆಳೆಗಳು ಹಾನಿಯಾಗಿರುವ ಸಂಬಂಧ ರೈತರಿಂದ ಮಾಹಿತಿ ಪಡೆದುಕೊಂಡರು.

ತಾಲೂಕು ವ್ಯಾಪ್ತಿಯ ದೊಡ್ಡಮೋಳೆ, ಕಟ್ನವಾಡಿ, ಗ್ರಾಮಗಳಲ್ಲಿ ಮಳೆಯಿಂದ ಮನೆ ಗೋಡೆ ಕುಸಿದಿದ್ದು, ಮನೆಗಳಿಗೆ ಸೂಕ್ತ ಪರಿಹಾರ, ಗಾಳಿ ಮಳೆಗೆ ಬೆಳೆಗಳು ಎಲ್ಲೆಲ್ಲಿ ಹಾನಿಯಾಗಿವೆ. ಅಂತಹ ಗ್ರಾಮಗಳಿಗೆ ರಾಜಸ್ವ ನಿರೀಕ್ಷಕರು, ಕಂದಾಯಾಧಿಕಾರಿಗಳು ಭೇಟಿ ನೀಡಿ, ರೈತರಿಂದ ಮಾಹಿತಿ ಪಡೆದುಕೊಂಡು, ಸೂಕ್ತ ಪರಿಹಾರ ಕೊಡಿಸುವ ಸಂಬಂಧ ಸರ್ಕಾರಕ್ಕೆ ಅಂದಾಜು ಪಟ್ಟಿ ಸಲ್ಲಿಸುವಂತೆ ಶಾಸಕರು ಸೂಚನೆ ನೀಡಿದರು.

ರಾಜಸ್ವ ನಿರೀಕ್ಷಕಗಳಾದ ರಾಜಶೇಖರ್, ಗುರುಸಿದ್ದಪ್ಪ, ಪಿಡಿಓ ವೆಂಕಟೇಶ್, ತಾಪಂ ಮಾಜಿ ಸದಸ್ಯ ಎಚ್.ಎಂ.ಮಹದೇವಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್, ಕುಮಾರ್, ಉಡಿಗಾಲ ನಂಜಪ್ಪ, ದೊರೆಸ್ವಾಮಿ, ಕೇಶವಮೂರ್ತಿ ಇದ್ದರು.

ಹರವೆ ಗ್ರಾಮದಲ್ಲಿ ಯುಗಾದಿ ಅಂಗವಾಗಿ 'ಬಂಡಿ ಓಟ'


ಕಟ್ಟಿ ಉದ್ಘೋಷಗಳನ್ನು ಕೂಗುವ ಮೂಲಕ ಒಂದು ಗಂಟೆಗಳ ಕಾಲ ಬಂಡಿ ಓಡಿಸುವ ಸಾಂಪ್ರಾದಾಯಿಕ ಉತ್ಸವ ನೆರವೇರಿತು.

ಚಾಮರಾಜನಗರ, ಮಾ.20– ತಾಲೂಕಿನ ಹರವೆ ಗ್ರಾಮದಲ್ಲಿ ಯುಗಾದಿ ಅಂಗವಾಗಿ ಪ್ರತಿವರ್ಷದಂತೆ ಈ ವರ್ಷವೂ ಸಹ ಬಂಡಿ ಓಡಿಸುವ ಉತ್ಸವ ಅಪಾರ ಜನಸ್ತೋಮದ ನಡುವೆ ಗುರುವಾರ ಸಂಜೆ ಜರುಗಿತು.

ಗ್ರಾಮದಲ್ಲಿ ಎರಡು ಬಂಡಿಗಳನ್ನು ಕಟ್ಟಿ ಓಡಿಸುವ ಸಂಪ್ರದಾಯ ತಲೆ ತಲಾಂತರದಿಂದ ನಡೆದು ಬಂದಿದೆ. ಮಧ್ಯಾಹ್ನ 3 ಗಂಟೆ ವೇಳೆಗೆ ಅಲಂಕೃತ ಎರಡು ಬಂಡಿಗಳಿಗೆ ಬಸವೇಶ್ವರ ದೇವಾಲ ಯದ ಆವರಣದಲ್ಲಿ ತೀರ್ಥಸಂಪ್ರೋಕ್ಷಣೆ ಮಾಡಿ, ತಮಟೆ ವಾದನದೊಂದಿಗೆ ಗ್ರಾಮದ ಹೊರವಲಯಕ್ಕೆ ತೆರಳಿ. ಎರಡು ಬಂಡಿಗಳನ್ನು ಜಮೀನಿನಲ್ಲಿ ಓಡಿಸಲಾಯಿತು.

10ಕ್ಕೂ ಹೆಚ್ಚು ಜೊತೆ ಎತ್ತುಗಳನ್ನು ಎರಡು ಬಂಡಿಗಳಿಗೆ

ಅಂದು ಬೆಳಗ್ಗೆ ಗ್ರಾಮದ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ಭಕ್ತಾದಿಗಳಿಗೆ ಅನ್ನಸಂತರ್ಪಣೆ ನೆರವೇರಿತು.

ಪಿಡಬ್ಲ್ಯೂಡಿ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಚುನಾವಣೆ
ಶಿವಕುಮಾರ್ ಮತ್ತು ವೈ.ಪಿ. ರಾಜೇಂದ್ರ ಪ್ರಸಾದ್ ಬಣದ 11 ಮಂದಿ ಆಯ್ಕೆ


ಅಯ್ಯನಪುರ ಶಿವಕುಮಾರ್ ಹಾಗೂ ವೈ.ಪಿ.ರಾಜೇಂದ್ರ ಪ್ರಸಾದ್ ನೇತೃತ್ವದ 11 ಮಂದಿ ಜಯಗಳಿಸಿದರು.

ಚಾಮರಾಜನಗರ: ಚಾಮರಾಜನಗರ ತಾಲೂಕು ಲೋಕೋಪಯೋಗಿ ಇಲಾಖೆಯ ಸಿವಿಲ್ ಗುತ್ತಿಗೆದಾರರ ಸಹಕಾರ ಸಂಘದ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಹಾಲಿ ಸಂಘದ ಅಧ್ಯಕ್ಷ ಅಯ್ಯನಪುರ ಶಿವಕುಮಾರ್ ಹಾಗೂ ವೈ.ಪಿ.ರಾಜೇಂದ್ರ ಪ್ರಸಾದ್ ನೇತೃತ್ವದ 11 ಮಂದಿ ಜಯಗಳಿಸುವ ಮೂಲಕ ಮತ್ತೆ ಸಂಘದ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ನಗರದ ಪಿಡಬ್ಲ್ಯೂಡಿ ಕಚೇರಿ ಆವರಣದಲ್ಲಿ ಸಂಘದ ಕಚೇರಿ ಸಭಾಂಗಣದಲ್ಲಿ 12 ಮಂದಿ ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ಮತದಾನ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ನಡೆಯಿತು. ಬಳಿಕ ನಡೆದ ಮತ ಎಣಿಕೆಯಲ್ಲಿ 11 ಮಂದಿ ಶಿವಕುಮಾರ್ ಬಣದವರು ಹೆಚ್ಚು ಮತಗಳನ್ನು ಪಡೆದು ಆಯ್ಕೆಯಾದರೆ, ಮತ್ತೊಂದು ಬಣದ ಅಬ್ದುಲ್ ಅಜೀಜ್ ಆಯ್ಕೆಯಾದರು. ಇನ್ನು ಎರಡು ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾಗಿತ್ತು.

ನೂತನ ನಿರ್ದೇಶಕರಿವರು : ಸಂಘದ ನೂತನ ನಿರ್ದೇಶಕರಾಗಿ ಅಯ್ಯನಪುರ ಶಿವಕುಮಾರ್–58, ವೈ.ಪಿ. ರಾಜೇಂದ್ರ ಪ್ರಸಾದ್–61, ಎಂ.ರವಿ–62, ಬಸಪ್ಪನ ಪಾಳ್ಯ ನಟರಾಜು–58, ಎಂ.ಶಿವಕುಮಾರ್–57, ನಲ್ಲೂರು ಮಹದೇವಸ್ವಾಮಿ ಬಿ–50, ಶಿವಬಸವಣ್ಣ–49, ಎಂ.ಸಿ. ಸುರೇಂದ್ರ–49, ಮಲೆಯೂರು ನಾಗರಾಜು–48, ಅಬ್ದುಲ್ ಅಜೀಜ್–41, ನಂಜುಂಡಸ್ವಾಮಿ–41, ಸುಬ್ಬೇಗೌಡ–45 ಮತಗಳನ್ನು ಪಡೆದು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಮಹಿಳಾ ಮೀಸಲು ಕ್ಷೇತ್ರದಿಂದ ದೇವಾಜಮ್ಮಣ್ಣಿ, ಎಸ್ಟಿ ಮೀಸಲು ಕ್ಷೇತ್ರದಿಂದ ದೊರೆಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಅಧಿಕಾರಿ ನಾಗೇಶ್ ತಿಳಿಸಿದ್ದಾರೆ. ಸಂಘದ ಸಿಇಓ ಬರ್ನಾಲ್ಡ್ ದೀಕ್ಷಿತ್ ಇದ್ದರು.

ನೂತನ ನಿರ್ದೇಶಕರನ್ನು ನಗರಸಭಾ ಮಾಜಿ ಸದಸ್ಯ ಆರ್.ಪಿ.ನಂಜುಂಡ ಸ್ವಾಮಿ, ರಾಮಸಮುದ್ರ ಯಜಮಾನ ಪಾಪಣ್ಣ, ಹಿರಿಬೇಗೂರು ಗುರುಸ್ವಾಮಿ ಸೇರಿದಂತೆ ಅನೇಕ ಮುಖಂಡರು ಅಭಿನಂದಿಸಿದರು.

ಮೈಸೂರು ಮಹಾರಾಜ ಕಾಲೇಜು ರೆಡ್ ಕ್ರಾಸ್ ಘಟಕದಿಂದ ಆಶ್ರಮ ಶಾಲೆಯಲ್ಲಿ ಅರ್ಥಪೂರ್ಣ ಕಾರ್ಯಕ್ರಮ



ಮೈಸೂರಿನ ಮಹಾರಾಜ ಕಾಲೇಜಿನ ಯೂತ್ ರೆಡ್ ಕ್ರಾಸ್ ಘಟಕದ ವತಿಯಿಂದ ಮದ್ದೂರು ಕಾಲೋನಿ ಸರ್ಕಾರಿ ಬುಡಕಟ್ಟು ವಾಲ್ಮೀಕಿ ಆಶ್ರಮ ಶಾಲೆ ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಮೈಸೂರು, ಮಾ.20– ಮೈಸೂರಿನ ಮಹಾರಾಜ ಕಾಲೇಜಿನ ಯೂತ್ ರೆಡ್ ಕ್ರಾಸ್ ಘಟಕವು ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನ ಮದ್ದೂರು ಕಾಲೋನಿ ಸರ್ಕಾರಿ ಬುಡಕಟ್ಟು ವಾಲ್ಮೀಕಿ ಆಶ್ರಮ ಶಾಲೆ ಮತ್ತು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅರ್ಥ ಪೂರ್ಣ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಘಟಕದ ವತಿಯಿಂದ ಎರಡೂ ಶಾಲೆಗಳ ಮಕ್ಕಳಿಗೆ ಜ್ಯಾಮಿಟ್ರಿ ಪೆಟ್ಟಿಗೆ ಹಾಗೂ ಪುಸ್ತಕ ವಿತರಿಸಿ, ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ಜಾಗೃತಿ ಮೂಡಿಸಲಾಯಿತು. ಇದೇ ವೇಳೆ ಗ್ರಾಮದಲ್ಲಿ ಜಾಥಾ ನಡೆಸಿ ಆರೋಗ್ಯ, ಶಿಕ್ಷಣ ಹಾಗೂ ಪರಿಸರ ಸಂರಕ್ಷಣೆಗೆ ಬಗ್ಗೆ ಅರಿವು ಮೂಡಿಸಲಾಯಿತು.

ಈ ವೇಳೆ ಘಟಕದ ಸಂಚಾಲಕಿ ಪ್ರೊ.ರೇಖಾ ಕೆ.ಜಾದವ್ ಮಾತನಾಡಿ, ಸಮಾಜದ ಕಟ್ಟಕಡೆಯಲ್ಲಿರುವ, ನಿರ್ಲಕ್ಷ್ಯಕ್ಕೆ ಗುರಿಯಾಗಿರುವವರನ್ನು ಗುರುತಿಸಿ, ಅವರನ್ನು ಮುಖ್ಯವಾಹಿನಿಗೆ ಕರೆತರ ಬೇಕಿದೆ. ಈ ನಿಟ್ಟಿನಲ್ಲಿ ಸಹಾನುಭೂತಿ ಹೊಂದಿರುವವರು ಮುಂದಾಗಬೇಕಿದೆ. ಪರಸ್ಪರ ಸಹಾಯಹಸ್ತ ಚಾಚಿದರೆ ಮಾತ್ರ ಮನುಕುಲದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ರೆಡ್ ಕ್ರಾಸ್ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಕಾರ್ಯ ಮಾಡುತ್ತಿದೆ ಎಂದರು.

ಈ ಸಂದರ್ಭದಲ್ಲಿ ಘಟಕದ ಸದಸ್ಯರಾದ ಡಾ.ಶ್ವೇತಾ ಎಂ.ಹನ್ಸ್, ಡಾ.ಬಿ.ಎಸ್.ದಿನಮಣಿ, ಡಾ.ಸೌಮ್ಯಲತ, ಸಿ.ಎಂ.ಪುನೀತ್, ದಿನೇಶ್ ರಾವ್, ಅಭಿಷೇಕ್ ಮತ್ತು ಅಧ್ಯಾಪಕರಾದ ಡಾ.ಕಲ್ಯಾಣ ಕುಮಾರಿ, ಡಾ.ರೋಹಿಣಿ, ಡಾ.ಬಿ.ಕೆ.ಸುವರ್ಣದೇವಿ, 80ಕ್ಕೂ ಹೆಚ್ಚು ವಿದ್ಯಾರ್ಥಿ ಸ್ವಯಂ ಸೇವಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಸಾಲದ ಸುಳಿಯಲ್ಲಿದ್ದರು ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕ ಹಣ ನೀಡುವ ಕಾಮಧೇನು

ಡಿಕೆಶಿ ವಿರುದ್ಧ ಐಶ್ವರ್ಯ ಅನಂತಕುಮಾರ್ ಕಿಡಿ

ಬೆಂಗಳೂರು: ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕವನ್ನು 'ಕ್ಯಾಶ್ ಕೌ' ಅಥವಾ ಹಣವನ್ನು ಕೊಡುವ ಕಾಮಧೇನು ಮಾಡಿಕೊಂಡಿದೆ. ಇದೀಗ ಪಂಚ ರಾಜ್ಯಗಳ ಚುನಾವಣೆಗೆ ರಾಜ್ಯದ ಹಣವನ್ನು ಬಳಕೆ ಮಾಡಲಾಗುತ್ತಿದೆ ಎಂದು ದಿವಂಗತ ಬಿಜೆಪಿ ನಾಯಕ ಅನಂತ ಕುಮಾರ್ ಅವರ ಪುತ್ರಿ ಐಶ್ವರ್ಯಾ ಅನಂತ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಐಶ್ವರ್ಯ ಅನಂತ್ ಕುಮಾರ್ ಅವರು ತಮ್ಮ ಅಧಿಕೃತ ಎಕ್ಸ್ (ಟ್ವಿಟರ್) ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಕಾಂಗ್ರೆಸ್ ಪಕ್ಷವು ಕರ್ನಾಟಕವನ್ನು ತನ್ನ ರಾಜಕೀಯ ಹಿತಾಸಕ್ತಿಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಮುಂಬರುವ ಅಸ್ಸಾಂ ಚುನಾವಣೆಯ ರಾಜಕೀಯ ಪ್ರಚಾರಗಳಿಗೆ ಹಣ ಒದಗಿಸಲು ಕಾಂಗ್ರೆಸ್ ಹೈಕಮಾಂಡ್ ಮತ್ತೊಮ್ಮೆ ಕರ್ನಾಟಕವನ್ನು ನಗದು ಹಸು ಆಗಿ ಬಳಸಿಕೊಳ್ಳಲು ತಂತ್ರ ಹೂಡುತ್ತಿದೆ ಎಂದು ನೇರವಾಗಿ ಆರೋಪಿಸಿದ್ದಾರೆ.

ದಿವಂಗತ ಕೇಂದ್ರ ಸಚಿವ ಅನಂತ್ ಕುಮಾರ್ ಅವರ ಪುತ್ರಿ ಐಶ್ವರ್ಯ ಅನಂತ್ ಕುಮಾರ್ ಅವರು ಕಾಂಗ್ರೆಸ್ ಹೈಕಮಾಂಡ್ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಗಂಭೀರ ಹಣಕಾಸಿನ ಆರೋಪ ಮಾಡುವ ಮೂಲಕ ರಾಜಕೀಯ ಸಂಚಲನ ಸೃಷ್ಟಿಸಿದ್ದಾರೆ.

ನಮ್ಮ ರಾಜ್ಯ ಸಾಲದ ಸುಳಿಗೆ ಸಿಲುಕಿದ್ದರೂ, ಡಿ.ಕೆ. ಶಿವಕುಮಾರ್ ಅವರೇ ಕಾಂಗ್ರೆಸ್ ಹೈಕಮಾಂಡ್‌ಗೆ ನೀವೇಕೆ ಹಣ ನೀಡುವ ಪಾತ್ರವನ್ನು ನಿರ್ವಹಿಸುತ್ತಿದ್ದೀರಿ ಎಂದು ಪ್ರಶ್ನಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಸರ್, ಕರ್ನಾಟಕಕ್ಕೆ ನಿಮ್ಮ ನಿಷ್ಠೆ ಎಲ್ಲಕ್ಕಿಂತ ಮಿಗಿಲು ಎಂದು ನೀವು ಪದೇ ಪದೇ ಹೇಳು ತ್ತಿರುತ್ತೀರಿ. ಹಾಗಿರುವಾಗ, ರಾಜ್ಯವು ಭಾರಿ ಸಾಲದ ಸುಳಿಯಲ್ಲಿ ಸಿಲುಕಿ ರುವಾಗ ಕಾಂಗ್ರೆಸ್ ಹೈಕಮಾಂಡ್‌ಗಾಗಿ ನೀವು ಈ ಪಾತ್ರವನ್ನು (ಹಣ ಒದಗಿ ಸುವ ಪಾತ್ರ) ಏಕೆ ನಿರ್ವಹಿಸುತ್ತಿದ್ದೀರಿ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. ತಮ್ಮ ಟ್ವೀಟ್‌ನಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಟ್ಯಾಗ್ ಮಾಡಿರುವ ಐಶ್ವರ್ಯ, ಅವರ ನಿಷ್ಠೆಯ ಬಗ್ಗೆ ಪ್ರಶ್ನೆ ಎತ್ತಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
ವಿಜಯನಗರ 4ನೇ ಹಂತ ಆದೀಶ್ವರ್ ಲೇಔಟ್ನಲ್ಲಿ 60 ಅಡಿ ರಸ್ತೆಗೆ 40'x60' EAST facing ಸೈಟ್.
Mob: 9886048471

ಮುಡಾ ಸೈಟು ಮಾರಾಟಕ್ಕಿದೆ
40x60
8904497670

ಬೇಕಾಗಿದ್ದಾರೆ
ಸೆಕ್ಯೂರಿಟಿ ಫೀಲ್ಡ್ ಆಫೀಸರ್, ಸೆಕ್ಯೂರಿಟಿ ಸುಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ+ಪಿಎಫ್+ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕ ನಗರ, ಸಿದ್ಧಾರ್ಥ ಬಡಾವಣೆ ಮತ್ತು ಹಿನಕಲ್.
7829393555
9886200104

ಸೈಟು ಮಾರಾಟಕ್ಕಿದೆ
30/40 ಪಶ್ಚಿಮ ದಿಕ್ಕು. ಯುಬಿ ಸಿಟಿ. ಬೋಗಾದಿ 30/40.. ಪಶ್ಚಿಮ ದಿಕ್ಕು ರಾಮಕೃಷ್ಣನಗರ. ಪೊಲೀಸ್ ಸ್ಟೇಷನ್ ಹತ್ತಿರ. ಕಮರ್ಷಿಯಲ್ ಸೈಟು. ಸಂಪರ್ಕಿಸಿ.
8050216683

WANTED
Working Partner for a Dairy Project at our farm at Chandravadi Nanjangud(Tq), Mysore(D) 40 kms from Mysore. Interested persons contact.
8123028283

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10
9739816440

COMMERCIAL PROPERTY FOR SALE
Small old House, Measuring 50x80, East facing At New Kanthraj Urs Road Near Appolo Hospital & Behind igiri café
Call: 9035460999

Darshan Matrimonial ದರ್ಶನ್ ಮ್ಯಾಟ್ರಿಮೋನಿಯಲ್
ಒಕ್ಕಲಿಗ, ಮರಾಠಿ, ಪಿಳ್ಳೈ, ಮೊದಲಿಯಾರ್ಸ್ ಹಾಗೂ ವಿಚ್ಛೇದಿತರು ಸಂಪರ್ಕಿಸಿ:
ಕೆ.ವಿ. ಆನಂತಪದ್ಮನಾಭ
ನಂ. 2304, 6ನೇ ಮುಖ್ಯ ರಸ್ತೆ, 1ನೇ ಕ್ರಾಸ್, ವಿನಾಯಕನಗರ, ಮೈಸೂರು–570 012.
9972355161, 9740797851

ಸೈಟು ಮಾರಾಟಕ್ಕಿದೆ
20/30.. ಉತ್ತರ ದಿಕ್ಕು. ಆನಂದನಗರ. 20/30..ದಕ್ಷಿಣ ದಿಕ್ಕು. ಆನಂದ ನಗರ. 20/30.. ದಕ್ಷಿಣ ದಿಕ್ಕು. BEML ಲೇಔಟ್. ಆಶ್ರಯ ಮನೆ. ಬೋಗಾದಿ. 20/30. ಪೂರ್ವ ದಿಕ್ಕು.. BEML ಲೇಔಟ್. ಆಶ್ರಯ ಮನೆ.. ಬೋಗಾದಿ.
8050216683

MUDA APPROVED LAYOUT
31x43 : S/F Site : ₹ 88 Lac
43x43 : S/W Corner : ₹1.35 CR
40x60 : N/F Site : ₹ 1.60 CR
50x61 : N/F Site : ₹ 2.02 CR
Just 4 kms from City Center Vidyaranya Puram, Mysuru.
99649 23399

ಬೇಕಾಗಿದ್ದಾರೆ
ISKCON Mysore ನಲ್ಲಿ ಖಾಲಿ ಹುದ್ದೆಗಳು ಹೌಸ್ ಕೀಪಿಂಗ್ ಸಿಬ್ಬಂದಿ (ಪುರುಷರು)–3 ಮತ್ತು ಅಕೌಂಟ್ಸ್ ಅಸಿಸ್ಟೆಂಟ್–1(ಪುರುಷ B.Com): Tally ERP ಜ್ಞಾನ ಮತ್ತು ಉತ್ತಮ ಟೈಪಿಂಗ್ ವೇಗ ಅಗತ್ಯ. ಸಂಬಳವು Mysore ನ ಇತರ ಎನ್‌ಜಿಒಗಳಿಗೆ ಸಮಾನವಾಗಿ ನೀಡಲಾಗುತ್ತದೆ. ಸಂಪರ್ಕಿಸಿ: ಗಣೇಶ್ (Supervisor) - 8496915162 | ರಕ್ಷಿತ್ - 6364554306 ಬಯೋಡೇಟಾ ಕಳುಹಿಸಿ ತಕ್ಷಣ ಸಂಪರ್ಕಿಸಿ

(ಪ್ರಮುಖ ವಾಣಿಜ್ಯ ಸ್ಥಳ ಬಾಡಿಗೆಗೆ– ಕೆ.ಆರ್.ನಗರ)
ಅಕ್ಷತಾ ಹಾಲ್ ಹಿಂಭಾಗದಲ್ಲಿ ವಾಣಿಜ್ಯ ಸ್ಥಳ ಬಾಡಿಗೆಗೆ ಲಭ್ಯ. ಗ್ರೌಂಡ್ ಫ್ಲೋರ್: ಅಂಗಡಿ–(1)=13'&20', ಅಂಗಡಿ–(2) =15'&20', ಗೋದಾಮು=15'&14' ಮೊದಲ ಮಹಡಿ: ಮೀಟಿಂಗ್ ಹಾಲ್=22x47. ಸಂಪರ್ಕಿಸಿ: ಜನತಾ ಸ್ಟುಡಿಯೋ, ಕೆ.ಆರ್.ನಗರ
9449680580
7892857207

ಹೆಲ್ತ್‌ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್‌ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್‌ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು.
9916908454

ಮೈಸೂರಿನಾದ್ಯಂತ ಕಂಪನಿಗಳಿಗೆ
ಮನೆಯಿಂದಲೇ ಕೆಲಸ ಡೇಟಾ ಎಂಟ್ರಿ ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ. 20,000 ದಿಂದ ಕೊರಿಯರ್ ಲಭ್ಯವಿದೆ.
9742133993

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654



SUNZONE SOLAR SYSTEM
VM Double Road, Kuvempunagar, Mysuru
9845175443

SITE FOR SALE
Dimension : 30x40
Facing : North
Layout : KSRTC employees Housing Board
Location : D Salundi
8310008208

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಹೆಂಗಸರು, ಗಂಡಸರು ಕೌಂಟರ್ ಕೆಲಸಕ್ಕೆ & ಕಟ್ಟಿಂಗ್ / ಗ್ರೈಂಡಿಂಗ್, ದೋಸೆ ಭಟ್ಟರು & ವಾಷಿಂಗ್‌ಗೆ ಬೇಕಾಗಿದ್ದಾರೆ.
9513027677, 8970893632

ಮಾರಾಟಕ್ಕೆ ಮನೆ
ಮೈಸೂರು ನಗರದ ವಿಜಯನಗರ 4ನೇ ಹಂತ, 3ನೇ ಫೇಸ್ ಸಮೀಪದ ಪರ್ಲ್ ಹ್ಯಾಬಿಟಾಟ್ ಲೇಔಟ್‌ನಲ್ಲಿ ಮನೆ ಮಾರಾಟಕ್ಕೆ ಲಭ್ಯ. * 30x50 ಅಡಿ ಸೈಟ್ * ಉ+2 ಮಹಡಿ ನಿವಾಸಿ ಮನೆ * ಪಶ್ಚಿಮಮುಖಿ ಸೈಟ್. * ಉತ್ತರಮುಖಿ ಮುಖ್ಯ ಬಾಗಿಲು * ಉತ್ತಮ ವಾಸಸ್ಥಳ ಹಾಗೂ ಸುಗಮ ರಸ್ತೆ ಸೌಲಭ್ಯ. ಆಸಕ್ತರು ಸಂಪರ್ಕಿಸಿ:
Mob: 99866 21579

St. Mira's Inclusive Convent, Sujjlur
Wanted experienced HM, Trs(all subjects & languages), clerk & part time Art teacher. Marketing Manager. Applicants should be proficient in English and Computer.
Contact: 9900118453
Send resume to smic.af.13@gmail.com/ kalash03@gmail.com

FOR RENT
2 BHK - 10 sq., suitable for PG / Office / House, No. 1555, H.T. Double Road, Vijayanagar 2nd Stage, Mysore. Contact:
Mob: 9663604699

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಬೇಕಾಗಿದ್ದಾರೆ. ಉತ್ತಮ ಸಂಬಳ /ESI ಕೊಡಲಾಗುವುದು. ವೈಟರ್ / Supplier, ಕ್ಲೀನಿಂಗ್ / ವಾಷಿಂಗ್, ಕೌಂಟರ್ / ಫುಡ್ ಪ್ಯಾಕಿಂಗ್.
Mob: 733 839 2631

SITE FOR SALE
30x40 site for sale near J.P. Nagar Ring Road. 30x43 site for sale Opp. University Layout. 40x60 site for sale in University Layout. Contact:
Mob: 9880344263

ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ
- Tele Marketing Excutive
- Receptionist
- Sales Manager
- Advertising Manager
- Marketing Executive

ಮೈಸೂರು ಪ್ರಾಪರ್ಟೀಸ್, ಹೂಟಗಳ್ಳಿ (ಆಸ್ತಿಗಳ ವ್ಯಾಪಾರೋದ್ಯಮ ಕಛೇರಿ)
9448958332

FOR SALE
2 & 3 BHK New Apartments @ Ramakrishna Nagar.
20x30, 30x40 2,3 & 4 BHK New Construction as Per Your Plan Near Rainbow School, Bogadi
30x50 Sites Near RT Nagar Brahmins Lyt, 50ft & 60ft Road
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
Filed Executives (Male)
ಮೈಸೂರು ಪ್ರಾಪರ್ಟೀಸ್, ಹೂಟಗಳ್ಳಿ (ಆಸ್ತಿಗಳ ವ್ಯಾಪಾರೋದ್ಯಮ ಕಛೇರಿ)
9448958332

FOR SALE
20x40, 30x40 Sites @ JP Nagar
20X30 DUPLEX 40X60 COMMERCIAL IN SRIRAMPURA
30x45 Corner Site@ Dattagalli
30x40 East Facing Site @ Dwaraka Nagar
G+3 House @ Aravind Nagar
20x30 Site & House @ Vijaya Ngr
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಮಹಿಳಾ ಕಂಪ್ಯೂಟರ್ ಆಪರೇಟರ್
ಮೈಸೂರು ಪ್ರಾಪರ್ಟೀಸ್, ಹೂಟಗಳ್ಳಿ (ಆಸ್ತಿಗಳ ಕಾಗದ ಪತ್ರಗಳ ಕಛೇರಿ)
9448958332

ಟೈಲರ್ಸ್ ಬೇಕಾಗಿದ್ದಾರೆ
ಬನ್ನಿಮಂಟಪದ ಫ್ಯಾಕ್ಟರಿಗೆ ಬೇಕಾಗಿದ್ದಾರೆ. ಸಂಬಳ : 15,000/– ಸಮಯ: ಬೆ.9ರಿಂದ ಸಂಜೆ 6 ರವರೆಗೆ
8884179981

ಡ್ರೈವರ್ ಬೇಕಾಗಿದ್ದಾರೆ
ಗೂಡ್ಸ್ ವಾಹನಕ್ಕೆ ಬೇಕಾಗಿದ್ದಾರೆ. ಸಂಬಳ 15,000 ದಿಂದ 20,000 ವಸತಿ ಉಚಿತ, ಸಂಪರ್ಕಿಸಿ:
0821-2491755

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
9686071750

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ
8861042449

GODOWN FOR RENT
Three Godowns Built up area 32000 sqft, 10600 & 7500 sq.ft., with ample parking space, available for Rent on KRS main road, Metagalli, Mysore.
Contact:
9845118555

ಯುಗಾದಿ ಹಬ್ಬದ ಶುಭಾಶಯಗಳು ಮನೆ ಕಟ್ಟಿಸುವವರ ಗಮನಕ್ಕೆ
ನಿಮ್ಮ ಕನಸಿನ ಮನೆಯನ್ನು Rs. 1900/- ಚದುರಡಿಗೆ ಉತ್ತಮ ಗುಣಮಟ್ಟವುಳ್ಳ ಸಾಮಗ್ರಿಗಳನ್ನು ಉಪಯೋಗಿಸಿ ಕಟ್ಟಿ ಕೊಡಲಾಗುವುದು. ಮುಂಗಡ ಹಣ ಪಾವತಿಸುವಂತಿಲ್ಲ. ಸಂಪರ್ಕಿಸಿ:
S.R. CONSTRUCTIONS, Dewan's Road, Mysore,
ಸಾಲದ ಸೌಲಭ್ಯ ಒದಗಿಸಿಕೊಡಲಾಗುವುದು.
6364281689

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 18000 (8 hrs, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಭೋಗ್ಯಕ್ಕೆ ಮನೆ ಬೇಕಾಗಿದೆ
ಮೈಸೂರು – ಹೆಬ್ಬಾಳು, ವಿಜಯನಗರ 1ನೇ ಹಾಗೂ 2ನೇ ಹಂತ, ಗೋಕುಲಂ, ವಿ.ವಿ.ಮೊಹಲ್ಲಾ ಮೇಟಗಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ, ಶುದ್ಧ ಸಸ್ಯಾಹಾರಿ ಕುಟುಂಬಕ್ಕೆ 30×40 independent ಮನೆ ಭೋಗ್ಯಕ್ಕೆ ಬೇಕಾಗಿದೆ. ಸಂಪರ್ಕಿಸಿ:
ಪ್ರಿಯಾ 6364795551

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ.
9448229184
7899625268

ಮಾರಾಟಕ್ಕಿದೆ
20x30, 30x40 ಸೈಟು 20x30 ಡ್ಯುಪ್ಲೆಕ್ಸ್ ಮನೆ ಟಿ.ನರಸೀಪುರ ರಸ್ತೆ,
9187593627

REQUIRED
HOUSEKEEPING VENDOR /SERVICES FOR an Apartment Complex. Contact
Contact:
9535820499
08214534352

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

FOR SALE
40x60, MUDA Auction Site @ Vijayanagar 4th Stage, 1st Phase. 100x55 E/F @ Vijayangar 4th Stage, 2nd Phase, 80 Ft Road. 65x40 House for Sale at Yadavagiri 4th Cross. 10 Acres Land near Talakad
7411363509

ಹೊಸ ಮನೆ ಮಾರಾಟಕ್ಕಿದೆ
30x40-Duplex-4 BHK ಜಿಮ್ ರೂಮ್ ಕೂಡ ಇದೆ. ವಿಳಾಸ : ಶ್ರೀರಾಂಪುರ 2ನೇ ಹಂತ, ರಿಂಗ್ ರೋಡ್, ಪ್ರೀತಿ ಲೇಔಟ್ ಹತ್ತಿರ, ಮೈಸೂರು
Site : West Face
Door : North Face
9945615736

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಹೂಟಗಳ್ಳಿ ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಹುಡುಗ ಮತ್ತು ಮಹಿಳೆಯರು ಬೇಕಾಗಿದ್ದಾರೆ (ಮೇಟಗಳ್ಳಿ ಹೆಬ್ಬಾಳು ಸುತ್ತಮುತ್ತಲಿನವರಿಗೆ ಅವಕಾಶ) ವಿದ್ಯಾರ್ಹತೆ, Diploma mech. ITI, 8th To 2nd PUC ವರೆಗೆ. ಊಟ, ವಸತಿ, ವಾಹನ ಸೌಲಭ್ಯ ESI PF ಸೌಲಭ್ಯ ಸಂಬಳ 13,500 ರಿಂದ 20,000 ಇರುತ್ತದೆ. ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ
8951869646
9902645646

ಬೇಕಾಗಿದ್ದಾರೆ
ಅಡುಗೆಯವರು, ಅಡುಗೆ ಸಹಾಯಕರು ಮತ್ತು ಮನೆಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ ಮತ್ತು ESI & PF ನೀಡಲಾಗುತ್ತದೆ.
7349278501
9606514441

ಬೇಕಾಗಿದ್ದಾರೆ
ಮೈಸೂರಿನಿಂದ 25 ಕಿ.ಮೀ. ದೂರದಲ್ಲಿರುವ ಹೆಚ್.ಡಿ.ಕೋಟೆ ತಾಲ್ಲೂಕಿನ ಕಂಚಮಳ್ಳಿ ಗ್ರಾಮದಲ್ಲಿ ತೋಟದಲ್ಲಿ ಹಸುಗಳ ಸಾಕಾಣಿಕೆ/ ಅಲ್ಲಿಯೇ ವಾಸ್ತವ್ಯವಿರಲು ಕುಟುಂಬ/ ಆಸಕ್ತಿವುಳ್ಳವರು. ದೂರವಾಣಿಯನ್ನು ಸಂಪರ್ಕಿಸುವುದು.
9164763079

ಸೈಟುಗಳು ಬೇಕಾಗಿದೆ
ಸಾತಗಳ್ಳಿ 'ಬಿ' ವಲಯ, ಶಕ್ತಿನಗರ, ವಿದ್ಯಾಶಂಕರ ಬಡಾವಣೆ, ಟೀಚರ್ ಬಡಾವಣೆ, ಜೆ.ಎಸ್‌ಎಸ್ ಬಡಾವಣೆ
9481316084
8050989120

FOR SALE
40X60
North face
Near rotary school Dattagalli, Muda approved site
9448324232
9480606154

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ, ಸಮಯ ಬೆಳಗ್ಗೆ 10 ರಿಂದ ರಾತ್ರಿ 8:30. ಸ್ಥಳ ನಜರ್‌ಬಾದ್ ಹಾಗೂ ಹೆಬ್ಬಾಳ್, ಮೈಸೂರು.
9986322444
9986311444

30X40 ಮನೆ ಮಾರಾಟಕ್ಕೆ ಇದೆ. ಸೈಟು 30X40 ಮಾರಾಟಕ್ಕೆ ಇದೆ. ಸೈಟು 30X40 ಮನೆ ಮಾರಾಟಕ್ಕೆ ಇದೆ, ದಟ್ಟಗಳ್ಳಿ
9008711654

CCTV INSTALLATION
4 Camera DVR & 500 gb hard disk only 14999/-
9880123633

40x44 N/W ಕಾರ್ನರ್ ಸೈಟು ಮಾರಾಟಕ್ಕಿದೆ. 32 ಲಕ್ಷಗಳು ರೇರಾ ಅಪ್ರೂವ್ಡ್(Opp Park) GSS ನಿರ್ವಾಣನಗರ, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

CHANGE OF NAME
I, PURIGALI NAGESHARAO RAMESH S/o Late P.R. NAGESHA RAO, Residing at #05, 2nd Main Road, Vidyaranyapuram, Mysuru-570008, Karnataka State, have Changed My Name from PURIGALI NAGESHARAO RAMESHA to PURIGALI NAGESHARAO RAMESH Vide affidavit Sworn before Notary M.V. Kamala, Mysuru
Sd/- Purigali Nagesharao Ramesh

ಲಾವಣ್ಯ ಮ್ಯಾಟ್ರಿಮೋನಿ
8th, SSLC, PUC, Degree ಮಾಡಿರುವ ಎಲ್ಲಾ ಜಾತಿಯ ವಧುಗಳು ಬೇಕಾಗಿದ್ದಾರೆ. ವಿವಾಹ ನೋಂದಣಿಗೆ ಕರೆ ಮಾಡಿ
90355-65773
91647-43059

1–ಮನೆ ಭೋಗ್ಯಕ್ಕಿದೆ
ಕಲ್ಪವೃಕ್ಷ ನಗರ ಆರ್‌ಎಸ್ ನಾಯ್ಡು ನಗರದಲ್ಲಿ 1ನೇ ಮಹಡಿಯಲ್ಲಿ ಬಾಡಿಗೆಗೆ 1–ಮನೆ, 2 ಬಿಹೆಚ್‌ಕೆ, ಉತ್ತರಕ್ಕೆ ಎದುರಾಗಿರುವ ಬಾಗಿಲು (20X30) ಮುಡಾ ಆಸ್ತಿ ರೂ.7 ಲಕ್ಷಕ್ಕೆ)
9019886759
9945735779

ಬೇಕಾಗಿದ್ದಾರೆ
ಮಹಿಳೆ / ಪುರುಷ, ಎಸ್.ಎಸ್.ಎಲ್.ಸಿ. / ಪಿ.ಯು.ಸಿ. / ಡಿಗ್ರಿ ಐ.ಟಿ.ಐ / ಫಿಟ್ಟರ್ / ಎಲೆಕ್ಟ್ರಿಷಿಯನ್ / ಗಾರ್ಡನ್ ರಿಸೆಪ್ಷನಿಸ್ಟ್ / ಕಂಪ್ಯೂಟರ್ ಆಪರೇಟರ್ಸ್ ಪ್ಲಂಬಿಂಗ್ / ಪೇಯಿಂಟರ್ / ಹೌಸ್ ಕೀಪಿಂಗ್ ಕಾರ್ಪೆಂಟರ್ಸ್ / ಕುಕ್ ಸಪ್ಲೆಯರ್ಸ್ ಸೂಪರ್‌ವೈಸರ್ / ಫ್ಯಾಬ್ರಿಕೇಷನ್ ವರ್ಕ್, ವಯೋಮಿತಿ : 22 ರಿಂದ 35 ರವರೆಗೆ, ಇ.ಎಸ್.ಐ. ಮತ್ತು ಪಿ.ಎಫ್. ಸೌಲಭ್ಯವಿರುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಶ್ವೇತ ಎಂಟರ್‌ಪ್ರೈಸಸ್ ಇನ್‌ಫೋಸಿಸ್ ಹತ್ತಿರ, ಹೆಬ್ಬಾಳ್, ಮೈಸೂರು
9686267833
9900191076

ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ಸ್ಥಳ : 1) ವಿಜಯನಗರ 2ನೇ ಹಂತ 2) ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ 3) ಹೆಬ್ಬಾಳ್, 4) ಜೆ.ಪಿ.ನಗರ
9686566261
7259526261

ಬೇಕಾಗಿದ್ದಾರೆ
ಸತತ 8 ವರ್ಷಗಳಿಂದ ನಮ್ಮ ಸಂಸ್ಥೆ ಇದ್ದು ನಮ್ಮಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡುವವರು ಸಂಪರ್ಕಿಸಿ ಹಾಗೂ ಯಾವುದೇ ವಿದ್ಯಾಭ್ಯಾಸ ಇದ್ದರು ಇಲ್ಲದಿದ್ದರೂ ಮಹಿಳೆಯರು ಹಾಗೂ ಪುರುಷರು ತಕ್ಷಣವೇ ಸಂಪರ್ಕಿಸಿ: ಅವಶ್ಯಕತೆ ಇದ್ದಲ್ಲಿ ತಿಂಗಳ ಮಧ್ಯದಲ್ಲಿ ಹಣ ಪಡೆಯುವ ಸೌಲಭ್ಯ ಇರುತ್ತದೆ
7483960098
9071042555

30x40 E/F ಸೊಸೈಟಿ ಸೈಟ್ ಮಾರಾಟಕ್ಕಿದೆ. 21 ಲಕ್ಷಗಳು ನಂಜುಂಡೇಶ್ವರ ನಗರ, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9972557534
8722353178

ತಕ್ಷಣ ಬೇಕಾಗಿದ್ದಾರೆ
ಟೀ, ಕಾಫೀ ಮಾಡಲು ಮಹಿಳೆಯರು ಹಾಗೂ ಪುರುಷರು ಆಕರ್ಷಕ ವೇತನ ಹಾಗೂ ಉಚಿತ ವಸತಿ ಊಟದ ವ್ಯವಸ್ಥೆ ಇರುತ್ತದೆ. ಆಸಕ್ತಿ ಉಳ್ಳವರು ಸಂಪರ್ಕಿಸಿ.
7892835168

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಸೈಟು ಮಾರಾಟಕ್ಕಿದೆ
40/60 ಪೂರ್ವ ದಿಕ್ಕು ದಟ್ಟಗಳ್ಳಿ ಜೋಡಿ ಬೇವಿನ ಮರದ ಹತ್ತಿರ. 40/60.. ದಕ್ಷಿಣ ದಿಕ್ಕು. ವಾಸು ಲೇಔಟ್. ಕಿಂಗ್ ಕಾಫಿ ಹೋಟೆಲ್ ಎದುರುಗಡೆ ರಸ್ತೆ.. ದಟ್ಟಗಳ್ಳಿ.. 50/80.. ಪಶ್ಚಿಮ ದಿಕ್ಕು. ದಟ್ಟಗಳ್ಳಿ..
8050216683

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಶನಿವಾರ 21 ಮಾರ್ಚ್ 2026

ನಾಗಮೋಹನ್‌ದಾಸ್ ವರದಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯ

ಮಾ.23, ತಿ.ನರಸೀಪುರದಿಂದ ಮೈಸೂರಿಗೆ ಪಾದಯಾತ್ರೆ



ಬಲಗೈ ಜಾತಿ ಒಳ ಮೀಸಲಾತಿ ಹೋರಾಟ ಸಮಿತಿಯ ಮುಖಂಡರ ಸಭೆ

ತಿ.ನರಸೀಪುರ, ಮಾ.20– ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯಲ್ಲಿ ಬಲಗೈ ಸಮುದಾಯದ ಹಿತಾಸಕ್ತಿಯನ್ನು ಕಡೆಗಣಿಸಿ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿ ಮಾ.23ರಂದು ಪರಿಶಿಷ್ಟ ಬಲಗೈ ಜಾತಿ ಒಳ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ತಿ.ನರಸೀಪುರದಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಜಿ.ಪಂ.ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆದ ಪರಿಶಿಷ್ಟ ಬಲಗೈ ಜಾತಿ ಒಳ ಮೀಸಲಾತಿ ಹೋರಾಟ ಸಮಿತಿಯ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು ನಾಗಮೋಹನ್ ದಾಸ್ ಅವರ ವರದಿ ಸಂಪೂರ್ಣವಾಗಿ ಅವೈಜ್ಞಾನಿಕ ಹಾಗೂ ದೋಷ ಪೂರಿತವಾಗಿದೆ, ಇದು ಎಡಗೈ ಸಮಾಜದ ಹಿತಾಸಕ್ತಿಗೆ ಪೂರಕವಾಗಿ ನೀಡಿದ ವರದಿಯಾಗಿದೆ. ವರದಿಯು ಬಲಗೈ ಸಮಾಜ ದವರನ್ನು ತುಳಿಯಲು ಸಿದ್ದಪಡಿಸಿರುವಂತಿದೆ ಎಂದು ಆರೋಪಿಸಿದರು.

ಈ ನಿಟ್ಟಿನಲ್ಲಿ ಸಮುದಾಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ಮಾಡುವುದು ಅನಿವಾರ್ಯವಾಗಿರುವುದರಿಂದ ಇದೇ 23 ರಂದು ತಿ.ನರಸೀಪುರ ಪಟ್ಟಣದಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಮಾಡುವ ಮೂಲಕ ಸರ್ಕಾರದ ಗಮನ ಸೆಳೆಯಲು ಸಮಿತಿ ನಿರ್ಧರಿಸಿದ್ದು, ಅಂದು ಬೆಳಗ್ಗೆ 6 ಗಂಟೆಗೆ ತಾಲೂಕು ಕಚೇರಿ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಲಾಗುತ್ತದೆ. ತಾಲೂಕಿನ ಪ್ರತಿ ಗ್ರಾಮದಿಂದಲೂ ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಾದಯಾತ್ರೆಯಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ಸಮಾಜದ ಯುವ ಮುಖಂಡ ಶಿವಕುಮಾರ್ ಬಡ್ಡು ಮಾತನಾಡಿ ಪಾದಯಾತ್ರೆಗೆ ಬಲಗೈ ಸಮಾಜದ ಬಂಧುಗಳು, ವಿದ್ಯಾರ್ಥಿಗಳು, ನೌಕರರು ಸೇರಿದಂತೆ ತಾಲೂಕಿನ ಎಲ್ಲಾ ಗ್ರಾಮದಿಂದ ಮನೆಗೊಬ್ಬರಂತೆ ಆಗಮಿಸುವ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಹಮ್ಮಿಕೊಳ್ಳಲಾಗಿರುವ ಪಾದಯಾತ್ರೆಯಲ್ಲಿ ಭಾಗವಹಿಸಬೇಕು,ಆಮೂಲಕ ಸಮಾಜಕ್ಕೆ ಆಗಿರುವ ಅನ್ಯಾಯದ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ಮಾಡಬೇಕೆಂದು ಮನವಿ ಮಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ ಮಾತನಾಡಿ ಬಲಗೈ ಸಮಾಜಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿ ಪಡಿಸುವಂತೆ ಮುಖ್ಯ ಮಂತ್ರಿಗಳ ಮೇಲೆ ಒತ್ತಡ ಹೇರಲು ಹಮ್ಮಿಕೊಳ್ಳಲಾಗಿರುವ ಹೋರಾಟಕ್ಕೆ ಬಲಗೈ ಸಮಾಜದ ಬಾಂಧವರು ನಿರೀಕ್ಷೆಗೂ ಮೀರಿದ ಬೆಂಬಲ ಸೂಚಿಸುವ ಮೂಲಕ ಮುಂದಿನ ಪೀಳಿಗೆಗಾಗುವ ಅನ್ಯಾಯವನ್ನು ತಪ್ಪಿಸಲು ಮುಂದಾಗಬೇಕು, ನ್ಯಾಯಯುತವಾಗಿ ನಮಗೆ ಸಿಗಬೇಕಾದ ಮೀಸಲಾತಿ ಹಾಗು ಅವಕಾಶವನ್ನು ಉಳಿಸಿಕೊಳ್ಳಲು ಸಂಘಟಿತ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ಅಂಬೇಡ್ಕರ್ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಎಂ.ಕೆ. ಸಿದ್ದರಾಜು, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್ ಲಿಂಗಪ್ಪಾಜಿ, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ. ಚಂದ್ರಶೇಖರ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್. ಮಹೇಶ್, ಪಿಎಸಿಸಿಎಸ್ ನಿರ್ದೇಶಕ ಸುಂದರ್, ತಾ.ಪಂ.ಮಾಜಿ ಸದಸ್ಯ ಬಸವರಾಜು, ಉಮಾಪತಿ, ನಿವೃತ್ತ ಶಿಕ್ಷಕ ವೆಂಕಟರಮಣ, ನಾಗರಾಜು, ಕೆಂಚಪ್ಪ, ಗಣೇಶ್, ನಿರಂಜನ್, ಶಿವು, ಪ್ರೇಮ್‌ಕುಮಾರ್ ಮತ್ತಿತರರಿದ್ದರು.

ಮಳೆ ಹಾನಿ ಪ್ರದೇಶಕ್ಕೆ ಶಾಸಕ ಹರೀಶ್‌ಗೌಡರು ಭೇಟಿ

ಶಾಲಾ ಕೊಠಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ, ಹಾನಿಗೊಳಗಾದವರಿಗೆ ಮನೆ



ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಹನಗೋಡು ಮಾ.20– ಆಲಿಕಲ್ಲು, ಬಿರುಗಾಳಿ ಸಹಿತ ಮಳೆಯಿಂದಾಗಿ ಹಾನಿಗೀಡಾಗಿರುವ ಹನಗೋಡು ಹೋಬಳಿಯ ದಾಸನಪುರದ ಶಾಲಾ ಕೊಠಡಿ ಹಾಗೂ ಮನೆಗಳನ್ನು ವೀಕ್ಷಿಸಿದ ಶಾಸಕ ಜಿ.ಡಿ. ಹರೀಶ್‌ಗೌಡರು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿ, ಸಂಕಷ್ಟದಲ್ಲಿರುವ ಕುಟುಂಬಗಳಿಗೆ ನೆರವಾದರು.

ಶಾಲೆಗೆ ಭೇಟಿ ನೀಡಿದ್ದ ಅವರು ಎರಡೂ ಶಾಲಾ ಕೊಠಡಿಗಳನ್ನು ವೀಕ್ಷಿಸಿ ಶಿಥಿಲಗೊಂಡಿರುವುದರಿಂದ ಇವುಗಳನ್ನು ಕೆಡವಿ ಹೊಸದಾಗಿ ನಿರ್ಮಿಸಲು ಶಾಸಕರ ನಿಧಿಯಿಂದ 25ಲಕ್ಷರೂ ಮಂಜೂರು ಮಾಡಿದ್ದಲ್ಲದೆ ಸ್ಥಳದಲ್ಲೇ ಕಾಮಗಾರಿಗೆ ಗುದ್ದಲಿ ಪೂಜೆಯನ್ನೂ ನೆರವೇರಿಸಿದರು. ಯಾವೊಬ್ಬ ಮಕ್ಕಳಿಗೂ ತೊಂದರೆಯಾಗದಂತೆ ಸಕಾಲಿಕ ಕ್ರಮವಹಿಸಿದ ಶಿಕ್ಷಕಿಯರಾದ ಸುಮಾ ಮತ್ತು ಉಮಾರನ್ನು ಅಭಿನಂದಿಸಿದರು.

22 ಹೊಸ ಮನೆ ಮಂಜೂರು: ನಂತರ ಹಾನಿಗೀಡಾದ ಎಲ್ಲಾ ಮನೆಗಳಿಗೂ ಭೇಟಿ ನೀಡಿ ಮಾಹಿತಿ ಪಡೆದು ಕುಟುಂಬದವರನ್ನು ಸಂತೈಸಿದರಲ್ಲದೆ, ದಾಸನಪುರದಲ್ಲಿ ಹೆಚ್ಚು ಹಾನಿಗಾಡಾಗಿರುವ 22 ಮನೆಗಳನ್ನು ಸ್ಥಳದಲ್ಲೇ ಮಂಜೂರು ಮಾಡಿದ್ದಲ್ಲದೆ, ಇತರೆ ಗ್ರಾಮಗಳಲ್ಲೂ ಹಾನಿಯಾಗಿದ್ದಲ್ಲಿ ಅಲ್ಲಿಗೂ ಅಧಿಕಾರಿಗಳ ವರದಿ ಆಧಾರದ ಮೇಲೆ ಅವರಿಗೂ ಮನೆ ಮಂಜೂರು ಮಾಡುವುದಾಗಿ ತಿಳಿಸಿ, ಹಾನಿಗೀಡಾದ ಮನೆಗಳ ಮೇಲ್ಛಾವಣಿ ದುರಸ್ತಿಗೊಳಿಸಲು ಅಗತ್ಯವುಳ್ಳವರಿಗೆ ಹೆಂಚು, ಮರಮುಟ್ಟು, ಕಲ್ನಾರ್‌ಶೀಟ್‌ಗಳನ್ನು ವೈಯಕ್ತಿಕವಾಗಿ ಕೊಡಿಸುವೆನೆಂದರು.

ಹಾನಿ ವರದಿಗೆ ಸೂಚನೆ: ತಾಲೂಕಿನ ಹಲವೆಡೆ ಬಿರುಗಾಳಿ ಮಳೆಗೆ ಬಾಳೆ, ತೆಂಗು, ಅಡಿಕೆ ಸೇರಿದಂತೆ ಇತರೆ ಬೆಳೆಗಳು ಹಾನಿಯಾಗಿರುವ ಬಗ್ಗೆ ಮಾಹಿತಿ ಬಂದಿದ್ದು, ಸಂಬಂದಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಇತ್ತು ಸರಕಾರಕ್ಕೆ ತಕ್ಷಣವೇ ವರದಿ ಸಲ್ಲಿಸುವಂತೆ ಹಾಗೂ ಸೂಕ್ತ ಪರಿಹಾರ ಸಿಗುವಂತೆ ಕ್ರಮವಹಿಸಬೇಕೆಂದು ತಹಸೀಲ್ದಾರ್ ಜೆ.ಮಂಜುನಾಥ್, ತಾ.ಪಂ. ಇಒ ಹೊಂಗಯ್ಯ, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ್‌ರಿಗೆ ಸೂಚಿಸಿದರು.

ಚೆಸ್ಕಾಂ ಇಂಜಿನಿಯರ್‌ಗೆ ತರಾಟೆ: ಚೆಸ್ಕಾಂ ಹನಗೋಡು ವಿದ್ಯುತ್‌ಕೇಂದ್ರದ ಜೆ.ಇ. ಸುನಿಲ್ ಕಾರ್ಯ ವೈಖರಿ ಬಗ್ಗೆ ರೈತರು ದೂರಿನ ಸುರಿಮಳೆಗೈದ ವೇಳೆ ನಿಮ್ಮ ವರ್ತನೆ ಸರಿಪಡಿಸಿಕೊಳ್ಳಬೇಕೆಂದು ಇಂಜಿನಿಯರ್‌ಗೆ ಶಾಸಕರು ತರಾಟೆ ತೆಗೆದುಕೊಂಡರಲ್ಲದೆ, ದಾಸನಪುರ ಭಾಗದ ಲೈನ್‌ಮೆನ್‌ಗಳನ್ನು ತಕ್ಷಣವೇ ಬದಲಾಯಿಸುವಂತೆ ಎಇಇಗೆ ನಿರ್ದೇಶಿಸಿದರು. ಇದೇ ವೇಳೆ ಕಿರಂಗೂರು ಗ್ರಾ.ಪಂ. ಪಿಡಿಓ ಭವ್ಯರ ವಿರುದ್ದವೂ ಕುಡಿಯುವ ನೀರು ಪೂರೈಕೆ ವಿಚಾರದಲ್ಲಿ ಸ್ಪಂದಿಸುತ್ತಿಲ್ಲವೆಂದು ಗ್ರಾಮಸ್ಥರು ಆರೋಪಿಸಿದರು.

ಶಾರ್ಟ್ ಸರ್ಕ್ಯೂಟ್‌ನಿಂದ ಬೇಕರಿ ಭಸ್ಮ



ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿಗಾಹುತಿಯಾದ ಬೇಕರಿ

ತಿ.ನರಸೀಪುರ, ಮಾ.20– ಪಟ್ಟಣದ ಲಿಂಕ್ ರಸ್ತೆಯ ಶನಿದೇವರ ಪೋಟೋ ಎದುರಿನ ಜಯಲಕ್ಷ್ಮಿ ಸ್ವೀಟ್ಸ್ ಅಂಡ್ ಪೇಸ್ಟ್ರಿ ವರ್ಲ್ಡ್ ಬೇಕರಿ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿಗಾಹುತಿಯಾಗಿದೆ.

ಗಿರೀಶ್ ಎಂಬುವರಿಗೆ ಸೇರಿದ್ದ ಈ ಬೇಕರಿಯನ್ನು ನಡೆಸಲಾಗುತ್ತಿತ್ತು. ಏಕಾಏಕಿ ಕಳೆದ ರಾತ್ರಿ ಬೆಂಕಿ ಕಾಣಿಸಿಕೊಂಡು ಬೆಂಕಿಯ ಕೆನ್ನಾಲಿಗೆ ಆವರಿಸಿದ್ದು, ರಾತ್ರಿ ಗಸ್ತಿನಲ್ಲಿದ್ದ ಪೊಲೀಸರು ಮಾಲೀಕರಿಗೆ ದೂರವಾಣಿ ಮಾಡಿ ವಿಷಯ ತಿಳಿಸಿದ್ದಾರೆ.

ಅಗ್ನಿ ಶಾಮಕದಳದ ಸಿಬ್ಬಂದಿ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಿದರಾದರೂ ಅಷ್ಟರಲ್ಲಾಗಲೇ ಬೇಕರಿ ತಿನಿಸು, ಪಾನೀಯಗಳು ಹಾಗೂ ಪೀಠೋಪಕರಣ, ಫ್ರಿಡ್ಜ್, ಓವೆನ್ ಸುಟ್ಟು ಕರಕಲಾಗಿದ್ದವು. ಅಗ್ನಿ ಶಾಮಕ ದಳ ಸರಿಯಾದ ಸಮಯಕ್ಕೆ ಆಗಮಿಸಿ ಬೆಂಕಿ ನಂದಿಸದಿದ್ದಲ್ಲಿ ಅಕ್ಕಪಕ್ಕದ ಬಟ್ಟೆ ಅಂಗಡಿ,ದಿನಸಿ ಅಂಗಡಿಗಳು ಬೆಂಕಿಗೆ ಆಹುತಿಯಾಗುತ್ತಿದ್ದವು.

ಅವಘಡದಲ್ಲಿ ಸುಮಾರು 15 ಲಕ್ಷ ರೂ.ಬೆಲೆ ಬಾಳುವ ಬೇಕರಿ ವಸ್ತುಗಳು ಸುಟ್ಟು ಭಸ್ಮವಾಗಿವೆ ಎಂದು ಬೇಕರಿ ಮಾಲೀಕ ಗಿರೀಶ್ ತಿಳಿಸಿದರು.

ಹೆಬ್ಬಳ್ಳದಯ್ಯನ ಜಾತ್ರೆ ವಿಜೃಂಭಣೆಯಿಂದ ಆಚರಣೆ



ಹೆಚ್.ಡಿ.ಕೋಟೆ: ತಾಲೂಕಿನ ಬೆಳಗನಹಳ್ಳಿ ಮತ್ತು ಹೊಸತೊರವಳ್ಳಿ ಗ್ರಾಮಗಳ ಸಮೀಪವಿರುವ ಬೀರೇಶ್ವರ ದೇವಾಲಯದಲ್ಲಿ ಹೆಬ್ಬಳ್ಳದಯ್ಯನ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಶುಕ್ರವಾರ ಬೆಳಗ್ಗಿನಿಂದಲೆ ಹೆಬ್ಬಳ್ಳದಯ್ಯನಿಗೆ ವಿವಿಧ ಹೂವುಗಳಿಂದ ಅಲಂಕರಿಸಿ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ಈ ವೇಳೆ ಜಾತ್ರೆಗೆ ಆಗಮಿಸಿದ್ದ ಭಕ್ತಾದಿಗಳು ಕೊಂಬು ಕಹಳೆಯ ನಾದಕ್ಕೆ ಹೆಜ್ಜೆ ಹಾಕಿದರು.

ಕೋಟೆ, ಬೆಳಗನಹಳ್ಳಿ, ಹೊಸತೊರವಳ್ಳಿ, ವಡ್ಡರಗುಡಿ, ಚಾಕಳ್ಳಿ, ಹೆಬ್ಬಳ್ಳ, ಚಕ್ಕೋಡನಹಳ್ಳಿ, ಕೃಷ್ಣಾಪುರ, ಸವ್ವೆ ಸೇರಿದಂತೆ ಹಲವಾರು ಗ್ರಾಮಗಳಿಂದ ಭಕ್ತರು ಜಾತ್ರೆಗೆ ಆಗಮಿಸಿ ಭಕ್ತಿ ಭಾವ ಮೆರೆದರು.

ಉಚಿತ ಸಿಇಟಿ ತರಬೇತಿ ಕಾರ್ಯಕ್ರಮ

ನಂಜನಗೂಡು: ತಾಲೂಕಿನ ತಾಂಡವಪುರ ಗ್ರಾಮದಲ್ಲಿರುವ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಪಿಯುಸಿ ವಿದ್ಯಾರ್ಥಿಗಳಿಗೆ ಮಾ.23ರಿಂದ 15 ದಿನಗಳ ಕಾಲ ಉಚಿತ ಸಿಇಟಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಎಂಐಟಿ ಕಾಲೇಜಿನ ಪ್ರಾಂಶುಪಾಲರಾದ ವೈ.ಟಿ.ಕೃಷ್ಣೇಗೌಡ ಮನವಿ ಮಾಡಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಎಂಐಟಿ ಕಾಲೇಜು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ಒದಗಿಸುವ ಸಲುವಾಗಿ ಸ್ಥಾಪನೆಯಾಗಿದೆ. ಕಳೆದ 9 ವರ್ಷಗಳಿಂದ ವೃತ್ತಿಪರ ಕೋರ್ಸ್ ಆಕಾಂಕ್ಷಿಗಳಿಗೆ ಉಚಿತ ಸಿಇಟಿ ತರಬೇತಿಯನ್ನು ಆಯೋಜಿಸುತ್ತಾ ಬಂದಿದೆ ಎಂದರು.

ಏ.1 ರಿಂದ ಸಂಸ್ಕೃತ ಸಂಭಾಷಣಾ ಶಿಬಿರ

ಮೈಸೂರು: ಸಂಸ್ಕೃತ ಭಾಷೆ ಜನ ಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ 5ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳು ಹಾಗೂ ಹಿರಿಯರಿಗೆ 'ಸಂಸ್ಕೃತ ಸಂಭಾಷಣಾ ಶಿಬಿರವನ್ನು' ಹಮ್ಮಿಕೊಳ್ಳಲಾಗಿದೆ. ಶಿಬಿರವು ಏ.1ರಿಂದ 10 ರವರೆಗೆ ಮೈಸೂರಿನ ವಾಣಿ ವಿಲಾಸ ರಸ್ತೆಯಲ್ಲಿರುವ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆಯಲ್ಲಿ ಬೆಳಗ್ಗೆ 10 ರಿಂದ ಮಧ್ಯಾಹ್ನ 12 ರವರೆಗೆ ನಡೆಯಲಿದೆ.

ನಂಜನಗೂಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಮಾ.20– ನಂಜನಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಿ.ಕಿಟ್ಟಪ್ಪ, ಉಪಾಧ್ಯಕ್ಷರಾಗಿ ಕೃಷ್ಣಪ್ಪ ಅವಿರೋಧವಾಗಿ ಆಯ್ಕೆಯಾದರು.

13 ಸದಸ್ಯರ ಬಲವನ್ನು ಹೊಂದಿರುವ ನಂಜನಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜಿ.ಕಿಟ್ಟಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಕೃಷ್ಣಪ್ಪ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು.

ನೂತನ ಅಧ್ಯಕ್ಷ ಜಿ.ಕಿಟ್ಟಪ್ಪ, ಉಪಾಧ್ಯಕ್ಷ ಕೃಷ್ಣಪ್ಪ ಮಾತನಾಡಿದರು. ಇದೇ ಸಂದರ್ಭದಲ್ಲಿ ನಿರ್ದೇಶಕರಾದ ಎನ್.ರಾಜು, ಸಂಜಯ್, ಸತೀಶ್, ಪ್ರೇಮ, ನಾಗರತ್ನ, ಆರ್.ಮಹೇಶ್, ವೆಂಕಟಸ್ವಾಮಿ, ಶ್ರೀನಿವಾಸ್, ಪುಟ್ಟಲಿಂಗ, ನಂಜುಂಡಸ್ವಾಮಿ, ಶಿವಲಿಂಗೇಗೌಡ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಟಿ.ಗೋವಿಂದ, ಪ್ರತಿನಿಧಿಗಳಾದ ಭವ್ಯ, ಮುಖಂಡರಾದ ನಂದನ್‌ಗಿರಿ, ಮಹದೇವು, ರವಿಕುಮಾರ್, ಸೇರಿದಂತೆ ರೈತರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಕಾಲ ನಿರ್ಣಯ

ಭೇಟಿ ಮಾಡಿ ಚರ್ಚೆ ನಡೆಸಬೇಕಿದೆ. ರಾಜ್ಯದ ಸಮಸ್ಯೆಗಳ ಕುರಿತು ತಿಳಿಸಿದ್ದೇವೆ. ಎಲ್ಲರೂ ಧನಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು. ಬೆಂಗಳೂರಿಗೆ ಸಮೀಪ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಚಿವ ಎಂ.ಬಿ.ಪಾಟೀಲ್ ಸಲ್ಲಿಸಿದ ಪ್ರಸ್ತಾವನೆಗೆ ಕೇಂದ್ರ ಸಚಿವರೂ ಅಭಿಪ್ರಾಯ ತಿಳಿಸಿದ್ದು, ಸಂಪುಟ ಸಭೆಯಲ್ಲಿ ಯೋಜನೆಯ ಸಾಧಕ–ಬಾಧಕ, ಭೂಸ್ವಾಧೀನ, ಹಣಕಾಸು ಮತ್ತಿತರ ವಿಷಯಗಳ ಬಗ್ಗೆ ಚರ್ಚಿಸಬೇಕಿದೆ. ಕಟ್ಟಡಗಳ ಎತ್ತರದ ಮಿತಿ ಕುರಿತು ಜಾಗತಿಕ ನಗರಗಳಲ್ಲಿ ಯಾವ ಕಾನೂನುಗಳಿವೆ ಎಂಬುದನ್ನು ಕೇಂದ್ರ ವಿಮಾನಯಾನ ಸಂಸ್ಥೆ ವರದಿ ಮಾಡಿದೆ. ಪ್ರಪಂಚದ ಇತರೆಡೆ ಇರುವ ಮಾನದಂಡಗಳ ಮಾಹಿತಿ ವರದಿ ನಂತರ ತೀರ್ಮಾನ ಮಾಡುತ್ತೇವೆ ಎಂದರು.

ಆಲಮಟ್ಟಿ ಎತ್ತರ ಹೆಚ್ಚಳ ಶೀಘ್ರ ತೀರ್ಮಾನ: ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ ನೋಟಿಫಿಕೇಷನ್‌ಗೆ ಕಾನೂನಿನ ತೊಡಕಿಲ್ಲ, ತಡೆಯಾಜ್ಞೆಯೂ ಇಲ್ಲ, ಈ ಸಂಬಂಧ ಸದ್ಯದಲ್ಲೇ ತೀರ್ಮಾನ ಕೈಗೊಳ್ಳುವುದಾಗಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಸರ್ಕಾರ ತೀರ್ಮಾನ ಕೈಗೊಳ್ಳುವ ಮೊದಲು ಸರ್ವಪಕ್ಷಗಳ ಸಭೆ ಕರೆಯುವ ಸಾಧ್ಯತೆ ಇದೆ ಎಂದರು.

ದೆಹಲಿಯಲ್ಲಿ ಎರಡು ದಿನ ವಾಸ್ತವ್ಯ ಹೂಡಿ ರಾಜ್ಯದ ಸಂಸದರ ಸಭೆ ನಡೆಸಲಾಯಿತು. ಜಾತ್ಯತೀತ ಜನತಾದಳ ಹೊರತುಪಡಿಸಿ ಬಿಜೆಪಿ, ಕಾಂಗ್ರೆಸ್, ಪಕ್ಷೇತರ ಹಾಗೂ ನಾಮನಿರ್ದೇಶಿತ ಸಂಸದರು ಸೇರಿದಂತೆ ಸಭೆಯಲ್ಲಿ 24 ಮಂದಿ ಹಾಜರಿದ್ದರು. ರಾಜ್ಯದ ಅನೇಕ ನೀರಾವರಿ ಯೋಜನೆಗಳ ಸ್ಥಿತಿಗತಿಗಳು ಕುರಿತು ವಿವರಿಸಲಾಯಿತು ಎಂದರು.

ತಂತಿಬೇಲಿ ಅಳವಡಿಕೆಗೆ ನಿರ್ಧಾರ

ಕುಕ್ಕರಹಳ್ಳಿಕೆರೆ ಜಾಗ ಮಾತ್ರವಲ್ಲದೆ ವಿಶ್ವವಿದ್ಯಾನಿಲಯದ ಆಸ್ತಿಯನ್ನು ಸಂರಕ್ಷಣೆ ಮಾಡಲಾಗುವುದು ಎಂದು ಸವಿತಾ ಸ್ಪಷ್ಟಪಡಿಸಿದರು.

ಇದೇನು ಪ್ರಹಸನ: ಈ ಮಧ್ಯೆ ಕೆರೆ ಹಾಗೂ ಅದರ ಸುತ್ತಮುತ್ತಲ ಆಸ್ತಿ ಎಲ್ಲವೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ್ದು ಎಂದ ಮೇಲೆ ಬಫರ್ ಝೋನ್ ಗುರುತಿಸಿ ಕೊಡುವಂತೆ ಅರ್ಜಿ ಸಲ್ಲಿಸುವ ಅಗತ್ಯವಾದರೂ ಏನು? ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವರ್ಗ ತನ್ನ ಆಸ್ತಿ ಸಂರಕ್ಷಣೆ ವಿಷಯದಲ್ಲಿ ವ್ಯವಸ್ಥಿತ ಹಾಗೂ ಕ್ರಮಬದ್ಧ ಹೆಜ್ಜೆ ಇರಿಸದಿದ್ದಲ್ಲಿ ಭೂಕುಳಿಕೆದಾರರಿಗೆ ಅನುಕೂಲ ಮಾಡಿ ಕೊಟ್ಟಂತೆ ಆಗಬಹುದು ಎಂಬ ಎಚ್ಚರಿಕೆಯನ್ನು ಮೈಸೂರು ವಿವಿ ಹಿತೈಷಿಗಳು ನೀಡಿದ್ದಾರೆ. ಈಗಾಗಲೇ ಮೈಸೂರು ವಿವಿಯ ಮಾನಸ ಗಂಗೋತ್ರಿ ಆವರಣದಲ್ಲಿ ಅಲ್ಲಲ್ಲಿ ಗೂಡಂಗಡಿ, ಪೆಟ್ಟಿಗೆ ಅಂಗಡಿಗಳು ತಲೆ ಎತ್ತುತ್ತಿವೆ. ಇವುಗಳ ಬಗ್ಗೆಯೂ ಕ್ರಮ ಕೈಗೊಂಡು, ಮುಂದೆ ದೊಡ್ಡ ಸಮಸ್ಯೆಯಾಗುವುದನ್ನು ತಪ್ಪಿಸಬೇಕಿದೆ.

ಇರಾನ್ ಡ್ರೋನ್ ದಾಳಿ; ಭಾರೀ ಬೆಂಕಿ

ಮೇಲೆ ದಾಳಿ ನಡೆಸಿತ್ತು. ಇದರ ಬೆನ್ನಲ್ಲೇ ಇರಾನ್ ಗಲ್ಫ್ ಅರಬ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಪ್ರತಿದಾಳಿ ನಡೆಸುತ್ತಿದೆ. ಇದರ ಪರಿಣಾಮವಾಗಿ ಜಾಗತಿಕ ಇಂಧನ ಮಾರುಕಟ್ಟೆಯಲ್ಲೂ ಅಸ್ಥಿರತೆ ಹೆಚ್ಚಾಗಿದೆ.

ಈ ಘಟನೆಯು ಮಧ್ಯಪ್ರಾಚ್ಯದ ಉದ್ವಿಗ್ನತೆಯನ್ನು ಮತ್ತಷ್ಟು ತೀವ್ರಗೊಳಿಸಿದ್ದು, ಮುಂದಿನ ದಿನಗಳಲ್ಲಿ ಇಂಧನ ಸರಬರಾಜು ಹಾಗೂ ತೈಲ ಬೆಲೆಗಳ ಮೇಲೆ ದೊಡ್ಡ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಗುಪ್ತಚರ ಸಚಿವನ ಬರ್ಬರ ಹತ್ಯೆ!: ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ ಮುಖ್ಯ ವಕ್ತಾರ ಬ್ರಿಗೇಡಿಯರ್ ಜನರಲ್ ಅಲಿ ಮೊಹಮ್ಮದ್ ನೈನಿ ಇಸ್ರೇಲ್ ನಡೆಸಿದ ಮಾರಕ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ. ಈ ದಾಳಿಯನ್ನು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿತ್ತು. ಈ ದಾಳಿಯಲ್ಲಿ ಇರಾನ್‌ಗೆ ದೊಡ್ಡ ಹೊಡೆತ ಬಿದ್ದಿದೆ. ಸಾಲು–ಸಾಲು ದಾಳಿಗಳ ಮೂಲಕ ಇರಾನ್ ಚೇತರಿಸಿಕೊಳ್ಳಲು ಅಮೆರಿಕ ಮತ್ತು ಇಸ್ರೇಲ್ ಬಿಡುತ್ತಿಲ್ಲ. IRGC ವಕ್ತಾರ ಹಾಗೂ ದೇಶದ ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಕೂಡ ದಾಳಿಯಲ್ಲಿ ಸಾವನ್ನಪ್ಪಿದ್ದಾರೆ.

ವರದಿಗಳ ಪ್ರಕಾರ, ಬ್ರಿಗೇಡಿಯರ್ ಜನರಲ್ ನೈನಿ ಅವರನ್ನು ಗುರಿಯಾಗಿಸಿಕೊಂಡು ನಡೆದ ದಾಳಿಯಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಲಾಗಿದೆ. ನೈನಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ ವಕ್ತಾರರು ಮಾತ್ರವಲ್ಲದೆ ಇರಾನ್‌ನ ಮಾನಸಿಕ ಯುದ್ಧದ ಮಾಸ್ಟರ್ ಮೈಂಡ್ ಎಂದೂ ಪರಿಗಣಿಸಲಾಗಿದೆ. ಅದೇ ಸಮಯದಲ್ಲಿ, ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಅವರ ಸಾವು ಇರಾನ್‌ನ ಆಂತರಿಕ ಭದ್ರತಾ ವ್ಯವಸ್ಥೆಯ ಬಗ್ಗೆ ಗಮನಾರ್ಹ ಪ್ರಶ್ನಾರ್ಥಕ ಚಿಹ್ನೆಯನ್ನು ಹುಟ್ಟುಹಾಕುತ್ತದೆ. ದೇಶದ ಒಳಗೆ ಮತ್ತು ಹೊರಗೆ ಬೇಹುಗಾರಿಕೆ ಜಾಲವನ್ನು ಬಲಪಡಿಸುವ ಜವಾಬ್ದಾರಿಯನ್ನು ಖತೀಬ್ ಹೊಂದಿದ್ದರು. ಮಿಲಿಟರಿ ವಕ್ತಾರ ಮತ್ತು ಗುಪ್ತಚರ ಮುಖ್ಯಸ್ಥರ ಏಕಕಾಲಿಕ ಹತ್ಯೆಯು ದಾಳಿಕೋರರಿಗೆ ಇರಾನ್‌ನ ಭದ್ರತಾ ವಲಯದ ಬಗ್ಗೆ ನಿಖರವಾದ ಮಾಹಿತಿ ಇತ್ತು ಎಂದು ಸೂಚಿಸುತ್ತದೆ ಎಂದು ತಜ್ಞರು ನಂಬುತ್ತಾರೆ.

ದಾಖಲಾತಿ ಸಲ್ಲಿಸಿ ವಾದ ಮಂಡನೆ

ಎಲ್ಲರ ದಾಖಲಾತಿಯನ್ನು ಪ್ರಾಧಿಕಾರ ಪರಿಶೀಲನೆ ನಡೆಸಲಿದೆ. ತರುವಾಯ ಮುಂದೆ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕಾದು ನೋಡಬೇಕಿದೆ.

ಅತಿಕ್ರಮಣ: ಅರಸು ರಸ್ತೆಯ ಇಕ್ಕೆಲಗಳ ಮಳಿಗೆಗಳಿಗೆ ಅಲ್ಲಲ್ಲಿ ಸುಗಮ ರೀತಿ ಮಹಡಿಗಳಿಗೇರಲು ಸ್ಟೇರ್‌ಕೇಸ್‌ಗೆ ಜಾಗ ನೀಡಲಾಗಿತ್ತು. ಆದರೆ, ಅಂತಹ ಕಡೆ ಚಿಕ್ಕದಾಗಿ ಕೆಲವು ಸ್ಟೇರ್‌ಕೇಸ್ ಮಾಡಿದ್ದರೆ, ಇನ್ನುಳಿದ ಕಡೆ ಆ ಜಾಗದಲ್ಲಿ ಅನಧಿಕೃತ ಮಳಿಗೆ ತಲೆ ಎತ್ತಿವೆ. ಅವುಗಳನ್ನು ಕಂಡೂ ಮುಡಾ ತೆರವುಗೊಳಿಸಲಾಗದೇ ನಿಸ್ಸಹಾಯಕ ವಾಗಿ ಹಾಗೇ ಬಿಟ್ಟುಕೊಂಡು ಬಂದಿದೆ. ಈಗಲೂ ಆ ಒಂದು ಪ್ರಹಸನ ಆರಂಭ ವಾಗಿದೆ. ಆದರೆ, ರಾಜಕೀಯ ಪ್ರಭಾವ, ಹಣ ಪ್ರಮುಖ ಪಾತ್ರ ವಹಿಸುವುದರಿಂದ ಬಹುಶಃ ಮುಡಾ ಅಧಿಕಾರಿಗಳು ಏನೂ ಮಾಡಲಾರರು ಎಂದೆನಿಸುತ್ತದೆ.

ದಾಖಲಾತಿ ಪರಿಶೀಲನೆ ನಂತರ ಮುಂದಿನ ಕ್ರಮ

ಹೈಕೋರ್ಟ್ ನಿರ್ದೇಶನದಂತೆ ಪಬ್ಲಿಕ್ ಪ್ರಿಮಿಸಸ್ ಆಕ್ಟ್ ನಡಿ ಅಂಗಡಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದೆವು. ಇದರಲ್ಲಿ 14 ಅಂಗಡಿಯವರು ವಿಚಾರಣೆಯಲ್ಲಿ ಭಾಗಿಯಾಗಿದ್ದರು. ಉಳಿದ ಮೂರು ಅಂಗಡಿಯವರು ಕಾಲಾವಕಾಶ ಕೋರಿದ್ದು, ಏ.2ರವರೆಗೆ ಸಮಯ ನೀಡಲಾಗಿದೆ. ಅನಧಿಕೃತ ಅಂಗಡಿಗಳೆಂದು ದಿಢೀರ್ ಖಾಲಿ ಮಾಡಿಸಲು ಸಾಧ್ಯವಿಲ್ಲ. ಹೈಕೋರ್ಟ್ ಸೂಚನೆಯಂತೆ ಅಂಗಡಿಯವರು ದಾಖಲಾತಿ ಸಲ್ಲಿಸಿ, ವಾದ ಮಂಡನೆಗೆ ಅವಕಾಶ ಕಲ್ಪಿಸಬೇಕಿದೆ. ಉಳಿದ ಮೂವರು ವಿಚಾರಣೆಯಲ್ಲಿ ಭಾಗಿಯಾದ ನಂತರ ಒಟ್ಟಾರೆ ದಾಖಲಾತಿ ಪರಿಶೀಲನೆ ನಡೆಸುತ್ತೇವೆ. ತರುವಾಯ ಕಾನೂನು ಪರಿಮಿತಿಯೊಳಗೆ ಪ್ರಾಧಿಕಾರ ಕ್ರಮ ಕೈಗೊಳ್ಳಲಿದೆ. - ಕೆ.ಜಾನ್ಸನ್, ಕಾರ್ಯದರ್ಶಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ.

ಮತ್ತೆ ದಾಳಿಯಾದರೆ ನಿಮ್ಮನ್ನ ಬಿಡಲ್ಲ!!

ಮುಂದಿನ ದಾಳಿಯಲ್ಲಿ ಆ ನಿಯಂತ್ರಣ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ದಕ್ಷಿಣ ಇರಾನ್‌ನ ಬುಶೆಹರ್ ಪ್ರಾಂತ್ಯದ ಕರಾವಳಿಯಲ್ಲಿರುವ ವಿಶ್ವದ ಅತಿದೊಡ್ಡ ಅನಿಲ ಕ್ಷೇತ್ರವಾದ ಕಡಲಾಚೆಯ ಸೌತ್ ಪಾರ್ಸ್ ಕ್ಷೇತ್ರಕ್ಕೆ ಸಂಬಂಧಿಸಿದ ನೈಸರ್ಗಿಕ ಅನಿಲ ಸೌಲಭ್ಯಗಳ ಮೇಲೆ ದಾಳಿ ನಡೆದಿರುವುದಾಗಿ ಇರಾನ್ ಈ ಹಿಂದೆ ಹೇಳಿಕೆ ನೀಡಿತ್ತು.

ಅದರ ಬೆನ್ನಲ್ಲೇ, ಇರಾನಿನ ಕ್ಷಿಪಣಿ ದಾಳಿ ಖತರ್ ನ ರಾಸ್ ಲಫಾನ್ ಅನಿಲ ಸೌಲಭ್ಯದಲ್ಲಿ ವ್ಯಾಪಕ ಹಾನಿ ಉಂಟುಮಾಡಿದ್ದು, ಈ ಘಟನೆಯನ್ನು ಗಲ್ಫ್ ರಾಷ್ಟ್ರಗಳು ತೀವ್ರವಾಗಿ ಖಂಡಿಸಿವೆ. ಈ ಬೆಳವಣಿಗೆಗಳು ಜಾಗತಿಕ ಮಟ್ಟದಲ್ಲಿ ಆತಂಕವನ್ನು ಉಂಟುಮಾಡಿದ್ದು, ತೈಲ ಮತ್ತು ಅನಿಲ ಸರಬರಾಜಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಗಲ್ಫ್ ಪ್ರದೇಶದಲ್ಲಿ ಭದ್ರತೆ ಕಠಿಣಗೊಳ್ಳುವ ಜೊತೆಗೆ, ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಗೆ ಕಾರಣವಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ.

ಭಾರತದ ಹಡಗಿನ ಕ್ಯಾಪ್ಟನ್ ಸಾವು: ಪಶ್ಚಿಮ ಏಷ್ಯಾ ಸಂಘರ್ಷದ ನಡುವೆ ಹಾರ್ಮುಜ್ ಜಲಸಂಧಿಯ ಬಳಿ ತೈಲ ಸಾಗಿಸುತ್ತಿದ್ದ ಭಾರತದ ವ್ಯಾಪಾರಿ ಹಡಗಿನ ಕ್ಯಾಪ್ಟನ್ ರಾಕೇಶ್ ರಂಜನ್ ಮೃತಪಟ್ಟಿದ್ದಾರೆ ಎಂದು ಅವರ ಕುಟುಂಬ ಶುಕ್ರವಾರ ತಿಳಿಸಿದೆ.

ಕ್ಯಾಪ್ಟನ್ ರಾಕೇಶ್ ರಂಜನ್ ಅವರ ಮೃತದೇಹವನ್ನು ತವರಿಗೆ ತರಲು ಸಹಾಯ ಮಾಡುವಂತೆ ಅವರ ಕುಟುಂಬ ಕೇಂದ್ರ ಮತ್ತು ಜಾರ್ಖಂಡ್ ಸರ್ಕಾರಕ್ಕೆ ಮನವಿ ಮಾಡಿದೆ.

ಖಾಸಗಿ ಕಂಪನಿ ಒಡೆತನದ ಎಎಸ್‌ಪಿ ಅವನ– ಆರ್‌ಪಿಎಸ್‌ಎಲ್–ಎಂಯುಎಂ–172 ಹಡಗಿನಲ್ಲಿದ್ದ ರಾಂಚಿ ಮೂಲದ ರಂಜನ್(43) ಅವರು ಮಾರ್ಚ್ 18ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ಅವರ ಕುಟುಂಬ ತಿಳಿಸಿದೆ.

ಗಲ್ಫ್‌ನಲ್ಲಿ ಆರು ಭಾರತೀಯರು ಸಾವು: ಪಶ್ಚಿಮ ಏಷ್ಯಾ ಸಂಘರ್ಷದ ಮಧ್ಯೆ ಗಲ್ಫ್ ಪ್ರದೇಶದಾದ್ಯಂತ ನಡೆದ ಪ್ರತ್ಯೇಕ ದಾಳಿಗಳಲ್ಲಿ ಆರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದಾರೆ ಮತ್ತು ಒಬ್ಬರು ಕಾಣೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಶುಕ್ರವಾರ ತಿಳಿಸಿದೆ. ಗಲ್ಫ್‌ನಲ್ಲಿ ಸಿಲುಕಿರುವ ಭಾರತೀಯರ ವಾಪಸಾತಿಗಾಗಿ ಸ್ಥಳೀಯ ಅಧಿಕಾರಿಗಳೊಂದಿಗೆ ನೆರವು ಮತ್ತು ಸಮನ್ವಯ ಸಾಧಿಸುತ್ತಿದ್ದೇವೆ ಎಂದು ಹೆಚ್ಚುವರಿ ಕಾರ್ಯದರ್ಶಿ(ಗಲ್ಫ್) ಅಸೀಮ್ ಆರ್. ಮಹಾಜನ್ ಅವರು ಹೇಳಿದ್ದಾರೆ. ಮಾರ್ಚ್ 18ರಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಒಬ್ಬ ಭಾರತೀಯ ಪ್ರಜೆ ಸಾವನ್ನಪ್ಪಿದ್ದು, ಇದರೊಂದಿಗೆ ಗಲ್ಫ್ ಪ್ರದೇಶದಲ್ಲಿ ಭಾರತೀಯ ಸಾವುನೋವುಗಳ ಸಂಖ್ಯೆ ಆರಕ್ಕೆ ಏರಿದೆ ಎಂದು ಅವರು ತಿಳಿಸಿದ್ದಾರೆ.

ಇರಾನ್‌ನಿಂದ ಸ್ವದೇಶಕ್ಕೆ ಮರಳಿದ 913 ಭಾರತೀಯರು: ಇರಾನ್‌ನಲ್ಲಿ ಸಿಲುಕಿರುವ ಹೆಚ್ಚಿನ ಭಾರತೀಯರು ನೆರೆಯ ದೇಶಗಳ ಭೂಮಾರ್ಗಗಳ ಮೂಲಕ ಸ್ವದೇಶಕ್ಕೆ ಮರಳಿದ್ದಾರೆ. ಭಾರತೀಯ ರಾಯಭಾರಿಗಳ ನೆರವಿನ ಮೂಲಕ ಸ್ಥಳಾಂತರ ಪ್ರಕ್ರಿಯೆ ಮುಂದುವರೆದಿದೆ ಎಂದು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶುಕ್ರವಾರ ತಿಳಿಸಿದೆ.

ಅಶ್ಲೀಲ ವಿಡಿಯೋಗಳು ಒರಿಜಿನಲ್!

ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಮೂಲಕ ತಯಾರಿಸಿದ್ದೆಂದು ಆರೋಪಿಸಿದ್ದರು. ಘಟನೆಯಿಂದ ಸರ್ಕಾರಕ್ಕೆ ಭಾರೀ ಮುಜುಗರ ಉಂಟು ಮಾಡಿತ್ತು, ತಕ್ಷಣವೇ ರಾಮಚಂದ್ರ ರಾವ್ ಅವರನ್ನು ಅಮಾನತು ಮಾಡಿ ತನಿಖೆಗೆ ಆದೇಶಿಸಲಾಗಿತ್ತು ವಿಡಿಯೊ ಸತ್ಯಾಸತ್ಯತೆ ತಿಳಿಯಲು ಫೋರೆನ್ಸಿಕ್ ಅಧ್ಯಯನಕ್ಕೆ ಕಳುಹಿಸಲಾಗಿತ್ತು. ವರದಿಯಲ್ಲೂ ದೃಶ್ಯಾವಳಿಗಳು ನೈಜ ಎಂಬುದಾಗಿ ತಿಳಿಸಲಾಗಿತ್ತು. ಇದರ ಆಧಾರದ ಮೇಲೆ ಸಮಿತಿ ವರದಿ ಸಲ್ಲಿಸಿದೆ. ರಾಮಚಂದ್ರ ರಾವ್ ಮೇನಲ್ಲಿ ನಿವೃತ್ತರಾಗಲಿದ್ದು ಸರ್ಕಾರ ವರದಿ ಆಧರಿಸಿ ಏನು ತೀರ್ಮಾನ ಕೈಗೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಮೂರು ವರ್ಷಗಳಲ್ಲಿ ಐವರು ವಿದ್ಯಾರ್ಥಿಗಳು ಸೇರಿ 160ಕ್ಕೂ ಹೆಚ್ಚು ಮಂದಿ ವನ್ಯಜೀವಿಗಳ ದಾಳಿಗೆ ಬಲಿ

- ಎಂಎಲ್ಸಿ ವಿವೇಕಾನಂದರಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾಹಿತಿ
- ಇದಕ್ಕೆ ಸಂತತಿ ಹೆಚ್ಚಳ, ಭೌತಿಕ ಅಭಿವೃದ್ಧಿ, ಅಪಾಯಕಾರಿ ಕಳೆ ಪ್ರಮುಖ ಕಾರಣ



ಕೆ.ವಿವೇಕಾನಂದ



ಈಶ್ವರ್ ಖಂಡ್ರೆ

ಮೈಸೂರು, ಮಾ.20– ಮೂರು ವರ್ಷಗಳಲ್ಲಿ ಐವರು ವಿದ್ಯಾರ್ಥಿಗಳು ಸೇರಿದಂತೆ 160ಕ್ಕೂ ಹೆಚ್ಚು ಜನ ವನ್ಯಜೀವಿಗಳ ದಾಳಿಯಿಂದ ಮೃತಪಟ್ಟಿದ್ದಾರೆ.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ವನ್ಯಜೀವಿ ದಾಳಿಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಮೃತಪಟ್ಟಿರುವ ಬಗ್ಗೆ ವಿಧಾನ ಪರಿಷತ್‌ನಲ್ಲಿ ಕೇಳಿದ ಪ್ರಶ್ನೆಗೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಈ ಮಾಹಿತಿ ನೀಡಿದ್ದು, ವನ್ಯಜೀವಿಗಳ ದಾಳಿಯಿಂದ 2023–24ರಲ್ಲಿ 65 ಮಂದಿ, 24–25ರಲ್ಲಿ 46 ಹಾಗೂ 25–26ರಲ್ಲಿ ಕಳೆದ ಫೆಬ್ರವರಿವರೆಗೆ 50 ಜನ ಹಾಗೂ ಐವರು ವಿದ್ಯಾರ್ಥಿಗಳು ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ.

ಪ್ರಮುಖ ಕಾರಣ: ವನ್ಯಪ್ರಾಣಿಗಳು ಕಾಡಿನಿಂದ ನಾಡಿಗೆ ಬರಲು ಹಲವು ಕಾರಣಗಳಿವೆ. ಮುಖ್ಯವಾಗಿ ಆನೆ, ಹುಲಿ, ಚಿರತೆ, ಕರಡಿ ಇನ್ನಿತರ ಕಾಡು ಪ್ರಾಣಿಗಳ ಸಂತತಿ ಹೆಚ್ಚಳವಾಗಿದೆ. ಗಣತಿ ಪ್ರಕಾರ ಹುಲಿ ಸಂಖ್ಯೆ 2014ರಲ್ಲಿ 406, 2018ರಲ್ಲಿ 524, 2022ರಲ್ಲಿ 563, ಚಿರತೆ ಸಂಖ್ಯೆ 2018ರಲ್ಲಿ 1783 ಹಾಗೂ 2022ರಲ್ಲಿ 1879ಕ್ಕೆ ಹೆಚ್ಚಳವಾಗಿದೆ. ಇನ್ನು ಆನೆಗಳ ಸಂಖ್ಯೆ 2012ರಲ್ಲಿ 6072, 2017ರಲ್ಲಿ 6049 ಹಾಗೂ 2023ರಲ್ಲಿ 6395 ಇವೆ. ಜೊತೆಗೆ ಭೌತಿಕ ಅಭಿವೃದ್ಧಿ ಚಟುವಟಿಕೆಗಳು, ಕೃಷಿಯ ಹರಡುವಿಕೆ, ಅರಣ್ಯ ಪ್ರದೇಶದ ಒತ್ತುವರಿ, ಅರಣ್ಯ ಆವಾಸ ಸ್ಥಾನಗಳ ವಿಘಟನೆ, ಅರಣ್ಯ ಪ್ರದೇಶದಲ್ಲಿ ಲಂಟಾನಾದಂತಹ ಆಕ್ರಮಣಕಾರಿ ಕಳೆ ವೇಗವಾಗಿ ಹರಡುತ್ತಿರುವುದು, ಅರಣ್ಯದಂಚಿನ ಖಾಸಗಿ ಜಮೀನುಗಳಲ್ಲಿ ವನ್ಯಪ್ರಾಣಿಗಳನ್ನು ಆಕರ್ಷಿಸುವ ಭತ್ತ, ತೆಂಗು, ಬಾಳೆ, ಹಲಸು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿರುವುದು, ಕಾಡಾನೆಗಳು ಹಿಂದಿನಿಂದಲೂ ಸಂಚರಿಸುತ್ತಿದ್ದ ದಾರಿ(ಕಾರಿಡಾರ್)ಗೆ ಅಡಚಣೆ ಉಂಟಾಗಿರುವುದು ವನ್ಯಜೀವಿ–ಮಾನವ ಸಂಘರ್ಷಕ್ಕೆ ಕಾರಣಗಳಾಗಿವೆ ಎಂದು ಹೇಳಿದ್ದಾರೆ.

ಕೈಗೊಂಡಿರುವ ಕ್ರಮಗಳು: ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ, ಆನೆ ತಡೆ ಕಂದಕ ನಿರ್ಮಾಣ, ರೈಲ್ವೆ ಹಳಿಗಳ ಬ್ಯಾರಿಕೇಡ್ ನಿರ್ಮಿಸಲಾಗುತ್ತಿದೆ. ಈವರೆಗೆ ಒಟ್ಟು 428 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ. ಹಾಸನ, ಚಿಕ್ಕಮಗಳೂರು, ಮೈಸೂರು, ಕೊಡಗು, ಚಾಮರಾಜನಗರ, ರಾಮನಗರ ಹಾಗೂ ಬೆಂಗಳೂರು ಜಿಲ್ಲೆ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಶೃಂಗೇರಿ–ಕೊಪ್ಪ ಸೇರಿದಂತೆ 10 ಆನೆ ಕಾರ್ಯಪಡೆ ರಚಿಸಲಾಗಿದೆ. ಕಾಡಾನೆ ಸೆರೆ ಕಾರ್ಯಾಚರಣೆಗೆ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ ಪಶುವೈದ್ಯಾಧಿಕಾರಿ, ಮಾವುತ ಹಾಗೂ ಇತರೆ ಸಿಬ್ಬಂದಿಯನ್ನೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿದೆ. ಮೈಸೂರು, ನಂಜನಗೂಡು, ಹೆಚ್.ಡಿ.ಕೋಟೆ, ಸರಗೂರು, ತಿ.ನರಸೀಪುರ, ಮಂಡ್ಯ, ಪಾಂಡವಪುರ, ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಕಾರ್ಯಪಡೆ ರಚಿಸಲಾಗಿದೆ. ಸಂರಕ್ಷಿತ ಪ್ರದೇಶಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನ ಕಾರ್ಯ ನಡೆಸಲಾಗಿದೆ. ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲುಕ್ರಮ ವಹಿಸಲಾಗಿದೆ. ಆನೆಗಳು ಹಾಗೂ ಇತರ ವನ್ಯಪ್ರಾಣಿಗಳು ಒಂದು ಅರಣ್ಯ ಪ್ರದೇಶದಿಂದ ಇನ್ನೊಂದು ಅರಣ್ಯ ಪ್ರದೇಶಕ್ಕೆ ಅಡೆತಡೆ ಇರದಂತೆ ಸಂಚರಿಸಲು ಅನುಕೂಲವಾಗುವಂತೆ ವನ್ಯಜೀವಿ ಕಾರಿಡಾರ್ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ತ್ವರಿತ ಕಾರ್ಯಾಚರಣೆ: ಆನೆ ಕಾರ್ಯಪಡೆ ಮತ್ತು ಚಿರತೆ ಕಾರ್ಯಪಡೆಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ. ವಿವಿಧ ಪಡೆಗಳನ್ನು ಒಟ್ಟುಗೂಡಿಸಿ ಮಾನವ ವನ್ಯಜೀವಿ ಸಂಘರ್ಷ ಉಪತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ. ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ, ಕಾಡಾನೆ ಮಾಹಿತಿ ಸಂಗ್ರಹ ಕೇಂದ್ರ, ಆನೆಗಳ ಹಿಂಡಿನಲ್ಲಿರುವ ವಯಸ್ಕ ಹೆಣ್ಣಾನೆ ಗುರುತಿಸಿ ರೇಡಿಯೋ ಕಾಲರ್ ಅಳವಡಿಸಿ, ಚಲನವಲನದ ಮೇಲೆ ನಿಗಾ ಇನ್ನಿತರ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಪರಿಶಿಷ್ಟ ಜಾತಿಗೆ ಶೇ.17, ಪರಿಶಿಷ್ಟ ಪಂಗಡಕ್ಕೆ ಶೇ.7 ಮೀಸಲಾತಿ ಮುಂದುವರೆಸಲು ಆಗ್ರಹ

ಮೈಸೂರು, ಮಾ.20(ಜಿಎ)–ನಾಗರಿಕ ಸೇವಾ ನೇಮಕಾತಿ ವೇಳೆ ಹಿಂದಿನ ಸರ್ಕಾರ ಘೋಷಿಸಿದ್ದಂತೆ ಪರಿಶಿಷ್ಟ ಜಾತಿಗೆ ಒಟ್ಟಾರೆ ಶೇ.17 ಹಾಗೂ ಪರಿಶಿಷ್ಟ ವರ್ಗಗಳಿಗೆ ಶೇ.7 ಮೀಸಲಾತಿ ಮುಂದುವರಿಸಬೇಕೆಂದರು ಬಹುಜನ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಸೋಸಲೆ ಸಿದ್ದರಾಜು ಸರ್ಕಾರಕ್ಕೆ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಗೆ ನಿಗದಿಯಾಗಿರುವ ಶೇ.17ಕ್ಕೆ ಬದಲಾಗಿ ಶೇ.15 ಮೀಸಲಾತಿ ಅಡಿ ನೇಮಕಾತಿ ಮಾಡಿದರೂ ಸಹಾ ಒಳ ಮೀಸಲಾತಿ ಅನ್ವಯ ನೇಮಕ ಮಾಡಿಕೊಳ್ಳಬೇಕು. ಸಿವಿಲ್ ನೇಮಕಾತಿಗೆ ಪ್ರಕಟಿಸಿರುವ ರೋಸ್ಟರ್ ಬಿಂದುಗಳನ್ನು ಪರಿಷ್ಕರಿಸಿ ಸಮಾನವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿಯ ಎ, ಬಿ, ಮತ್ತು ಸಿ ಪ್ರವರ್ಗಗಳಿಗೆ ಕ್ರಮವಾಗಿ 1, 2, 3ನೇ ರೋಸ್ಟರ್ ಬಿಂದುಗಳನ್ನು ನಿಗದಿ ಮಾಡಿ ಈ ಕೂಡಲೇ ಆದೇಶಿಸಬೇಕು, ಯಾವುದೇ ಸಮುದಾಯಕ್ಕೂ ಅನ್ಯಾಯವಾಗದಂತೆ ಈ ಗೊಂದಲ ಬಗೆಹರಿಸಬೇಕು, ಅತಿ ಹೆಚ್ಚು ಹಿಂದುಳಿದ ಅಲೆಮಾರಿ ಸಮುದಾಯ ಗಳನ್ನು ಕಡಿಮೆ ಹಿಂದುಳಿದ ಸಮುದಾಯ ಗಳೊಂದಿಗೆ ಜೋಡಿಸಿರುವ ಸರ್ಕಾರದ ತಪ್ಪು ನಡೆ ಖಂಡನೀಯ, ಹೀಗಾಗಿ ಅಲೆ ಮಾರಿ ಸಮುದಾಯಗಳನ್ನು ಈ ಗುಂಪಿನಿಂದ ಪ್ರತ್ಯೇಕಿಸಿ ಶೇ.1 ಪ್ರತ್ಯೇಕ ಮೀಸಲಾತಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಸರ್ಕಾರ, ನಿಗಮ ಮಂಡಳಿಗಳ ಎಲ್ಲಾ ನೇಮಕಾತಿಗಳಲ್ಲಿ ಮೊದಲು ಸಾಮಾನ್ಯ ಕೋಟಾದ ಮೆರಿಟ್ ಆಧಾರದಲ್ಲಿ ಭರ್ತಿ ಮಾಡಬೇಕು, ಮೀಸಲಾತಿ ಹೊಂದಿರುವ ಎಲ್ಲಾ ಸಮುದಾಯದ ಮೆರಿಟ್ ಪಡೆದ ಅಭ್ಯರ್ಥಿಗಳಿಗೂ ಸಹಾ ಸಾಮಾನ್ಯ ಕೋಟಾದ ಹುದ್ದೆಗಳಿಗೆ ಆಯ್ಕೆಯಾಗಲು ಅನುಕೂಲವಾಗುವಂತೆ ತುರ್ತು ಆದೇಶ ಹೊರಡಿಸ ಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸ ಬೇಕು ಎಂದು ಸಹಾ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಾಗರ್ ತಾಯೂರು, ಡಾ.ಸುಬ್ರಹ್ಮಣ್ಯಸ್ವಾಮಿ, ಮಹದೇವ ಕೋಟೆ, ಡಾ.ಶ್ರೀನಿವಾಸ್, ಪ್ರೊ. ಹರಿದಾಸ್ ಉಪಸ್ಥಿತರಿದ್ದರು.

ಮೈಸೂರು ಡಿಸಿ ಹಳೆ ಕಚೇರಿ ಕಟ್ಟಡದ ಗೋಪುರ ದುರಸ್ತಿ

ಪಾರಂಪರಿಕ ಕಟ್ಟಡಗಳ ದುರಸ್ತಿ ಮಾದರಿ ಕಾಮಗಾರಿಗೆ ಸೂಚನೆ



ಗೋಪುರ ದುರಸ್ತಿಗೆ ಸುಣ್ಣದ ಗಾರೆ ತಯಾರಿಸುತ್ತಿರುವುದು



ಗೋಪುರ ದುರಸ್ತಿ ಕಾರ್ಯ ಆರಂಭವಾಗಿರುವುದು.

ಮೈಸೂರು, ಮಾ.20(ಎಂಟಿವೈ)– ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ಗೋಪುರ ದುರಸ್ತಿ ಕಾಮಗಾರಿ 1 ಕೋಟಿ ರೂ. ವೆಚ್ಚದಲ್ಲಿ ಆರಂಭವಾಗಿದೆ.

ಸಿದ್ಧಾರ್ಥನಗರದ ನೂತನ ಜಿಲ್ಲಾ ಕಚೇರಿಗಳ ಸಂಕೀರ್ಣಕ್ಕೆ ಜಿಲ್ಲಾಧಿಕಾರಿ ಕಾರ್ಯಾಲಯ ಸ್ಥಳಾಂತರಗೊಂಡ ಹಿನ್ನೆಲೆಯಲ್ಲಿ ಪಾಳು ಬಿದ್ದ ಸ್ಥಿತಿಗೆ ತಲುಪಿದ್ದ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡ ಪುನಶ್ಚೇತನಕ್ಕೆ ಪುರಾತತ್ವ ಮತ್ತು ಪಾರಂಪರಿಕ ಇಲಾಖೆ ಮುಂದಾಗಿದ್ದು, ಮೊದಲ ಹಂತದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದೆ. ಟೆಂಡರ್ ಮೂಲಕ ಮೈಸೂರಿನ ಶರತ್‌ಕುಮಾರ್ ಎಂಬುವರು ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ಗೋಪುರದ ನವೀಕರಣ ಕಾಮಗಾರಿ ಆರಂಭಿಸಿದ್ದು, ಪಾರಂಪರಿಕ ಕಟ್ಟಡಗಳ ನಿರ್ಮಾಣಕ್ಕೆ ಬಳಸಿರುವ ಸುಣ್ಣದ ಗಾರೆಯನ್ನು ಸಿದ್ಧಪಡಿಸಿ, ಕಾಮಗಾರಿ ಆರಂಭಿಸಲಾಗಿದೆ.

ಸೂಕ್ಷ್ಮ ಕಾಮಗಾರಿ: ಈ ಕಟ್ಟಡದ ಗೋಪುರ ಸೇರಿದಂತೆ ಹಲವು ಭಾಗದಲ್ಲಿ ಗಿಡ–ಮರ ಬೆಳೆದು ಗೋಡೆಗಳು ದುರ್ಬಲವಾಗಿದ್ದವು. ಹಾಗಾಗಿ ಕಟ್ಟಡ ಶಿಥಿಲಾವಸ್ಥೆ ತಲುಪಿತ್ತು. ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ ಪುರಾತತ್ವ ಇಲಾಖೆ ಇದೀಗ ಕಟ್ಟಡವನ್ನು ಹಂತ ಹಂತವಾಗಿ ನವೀಕರಿಸಲು ಮುಂದಾಗಿದ್ದು, ಮೊದಲ ಹಂತದಲ್ಲಿ ಗೋಪುರದ ನವೀಕರಣ ಆರಂಭಿಸಿದೆ ಸೂಕ್ಷ್ಮ ಕಾಮಗಾರಿ ಇದಾಗಿದ್ದು, ಕಟ್ಟಡಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆಯಿಂದ ದುರಸ್ತಿ ಮಾಡುವಂತೆ ಸೂಚಿಸಲಾಗಿದೆ.

ಯಂತ್ರ ಸುತ್ತಿಗೆ ಬಳಕೆಗೆ ನಿರ್ಬಂಧ: ದುರಸ್ತಿ ವೇಳೆ ಯಾವುದೇ ಯಂತ್ರೋಪಕರಣ ಬಳಸದಂತೆ ಗೋಪುರದ ಗೋಡೆಗೆ ಸುತ್ತಿಗೆ ಏಟು ಹೊಡೆಯದಂತೆ ಸೂಚನೆ ನೀಡಲಾಗಿದೆ

ಗಿಡಗಳ ಬೇರು ಸಾಯಿಸಿ ತೆರವು: ಕಟ್ಟಡದ ಗೋಪುರದ ಸುತ್ತಲೂ ಅರಳಿ, ಆಲದ ಗಿಡ ಸೇರಿದಂತೆ ಇನ್ನಿತರ ಗಿಡಗಳು ಬೆಳೆದಿದ್ದವು. ಅವುಗಳ ತೆರವಿಗೆ ಯಾವುದೇ ಸಲಕರಣೆ ಬಳಸದೆ, ರಾಸಾಯನಿಕ ದ್ರಾವಣಗಳ ಸಿಂಪಡಿಸಿ, ಅವುಗಳನ್ನು ಸಾಯಿಸಿದ ಬಳಿಕ ಸೂಕ್ಷ್ಮವಾಗಿ ಬೇರು ಸಹಿತ ತೆರವು ಮಾಡಲಾಗಿದೆ. ಗೋಡೆಗಳಿಂದ ಗಿಡಗಳ ಬೇರು ಪೂರ್ಣ ಪ್ರಮಾಣದಲ್ಲಿ ತೆರವು ಮಾಡಿದ ನಂತರವಷ್ಟೇ ದುರಸ್ತಿ ಕಾರ್ಯ ಆರಂಭಿಸಲಾಗಿದೆ.

ಸುಣ್ಣದ ಗಾರೆ ತಯಾರು: ಗೋಪುರದ ದುರಸ್ತಿ ಕಾಮಗಾರಿಗೆ ಸ್ಥಳದಲ್ಲಿಯೇ ಸುಣ್ಣದ ಗಾರೆ ತಯಾರಿಸಲಾಗುತ್ತಿದೆ. ಕಟ್ಟಡದ ಕೆಳಗೆ ಸುಣ್ಣದ ಗಾರೆ ತಯಾರಿಸುವ ಯಂತ್ರವನ್ನಿಟ್ಟು ಮಿಕ್ಸಿಂಗ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಎರಡು ಡ್ರಮ್‌ಗಳಲ್ಲಿ ಸುಣ್ಣವನ್ನು ನೆನೆಹಾಕಿ, ನಂತರ ನಿಯಮಾನುಸಾರ ಸಾಮರ್ಥ್ಯಕ್ಕೆ ಅನುಗುಣವಾಗಿ ಸುಣ್ಣದೊಂದಿಗೆ ಬೆಲ್ಲ, ಅಂಟುವಾಳಕಾಯಿ, ತೊಗರಿ ಬೇಳೆ, ಬಿಲ್ವಪತ್ರೆಕಾಯಿ ಸೇರಿದಂತೆ ಇನ್ನಿತರ ಪದಾರ್ಥವನ್ನು ಮಿಶ್ರಣ ಮಾಡಿ ಯಂತ್ರದಲ್ಲಿ ರುಬ್ಬಿಸಿದ ಬಳಿಕ ಪರಿಶೀಲಿಸಲಾಗುತ್ತದೆ. ಅದರ ಗುಣಮಟ್ಟವನ್ನು ಪರಿಶೀಲಿಸಿದ ನಂತರ ದುರಸ್ತಿ ಕಾಮಗಾರಿಗೆ ಬಳಸಲಾಗುತ್ತಿದೆ.

ಮೊದಲ ಹಂತದಲ್ಲಿ ಗೋಪುರ ನವೀಕರಣ ಕಾಮಗಾರಿ

ಒಂದು ಕೋಟಿ ವೆಚ್ಚದಲ್ಲಿ ಕಟ್ಟಡದ ಗೋಪುರದ ನವೀಕರಣ ಕಾಮಗಾರಿ ಆರಂಭಿಸಲಾಗಿದೆ. ಪಾರಂಪರಿಕ ಕಟ್ಟಡವಾಗಿರುವುದರಿಂದ ಸೂಕ್ಷ್ಮವಾಗಿ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ. ಗೋಪುರ ನವೀಕರಣ ಕಾಮಗಾರಿ ಆರು ತಿಂಗಳಲ್ಲಿ ಪೂರ್ಣಗೊಳಿಸಲಾಗುತ್ತಿದ್ದು, ಮುಖ್ಯ ಕಟ್ಟಡದ ನವೀಕರಣ ಹಾಗೂ ದುರಸ್ಥಿಗೆ ಕ್ರಿಯಾಯೋಜನೆ ರೂಪಿಸಲಾಗುತ್ತಿದೆ.

– ಡಿ.ಹೆಚ್.ಅಂಬರೀಶ್, ಎಇಇ, ಪುರಾತತ್ವ ಇಲಾಖೆ

6 ತಿಂಗಳೊಳಗೆ ಕಾಮಗಾರಿ ಪೂರ್ಣ

ಜಿಲ್ಲಾಧಿಕಾರಿ ಕಚೇರಿ ಗೋಪುರದ ದುರಸ್ತಿ ಕಾಮಗಾರಿ ಪಾರಂಪರಿಕ ನಿಯಮಾನುಸಾರ ಆರಂಭಿಸಲಾಗಿದೆ. ಇದು ಸೂಕ್ಷ್ಮ ಕಾಮಗಾರಿಯಾಗಿದ್ದು, ಎಚ್ಚರಿಕೆಯಿಂದ ಕೆಲಸ ನಡೆಸಲಾಗುತ್ತಿದೆ. ಗೋಪುರ ದುರಸ್ತಿಗೆ ಕಾಲಾವಧಿ ನಿರ್ಮಾಣದಲ್ಲೂ ಕಟ್ಟೆಚ್ಚರ ವಹಿಸಲಾಗಿದೆ. ಹೆಚ್ಚು ಭಾರ ಕಟ್ಟಡದ ಮೇಲ್ಚಾವಣಿ ಮೇಲೆ ಬೀಳದಂತೆ ನೋಡಿಕೊಳ್ಳಲಾಗಿದೆ. ಮುಂದಿನ ಆರು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ. ಅದಕ್ಕಾಗಿ ಬೇಕಾದ ಸುಣ್ಣ, ಬೆಲ್ಲ, ಅಂಟುವಾಳಕಾಯಿ, ಬಿಲ್ವಪತ್ರೆ ಕಾಯಿ. ಬೇಳೆ ಸೇರಿದಂತೆ ನಾನಾ ಪದಾರ್ಥಗಳನ್ನು ತಂದು ಸುಣ್ಣದ ಗಾರೆ ನಿರ್ಮಿಸಿ, ಗೋಪುರದ ನವೀಕರಣ ಕಾಮಗಾರಿ ನಡೆಸಲಾಗುತ್ತಿದೆ.

- ಶರತ್ ಕುಮಾರ್, ಗುತ್ತಿಗೆದಾರ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸ್ತಾದ್ ಭಗತ್ ಸಿಂಗ್(ತೆ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯೂತ್ (ತ) + ಉಸ್ತಾದ್ ಭಗತ್ ಸಿಂಗ್ (ತೆ)	2+2 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಆಕಾಶ್ (ಕ)	4 ಪ್ರದರ್ಶನಗಳು

ಜೋಯಾಲುಕ್ಕಾಸ್ ಆಭರಣಗಳ ಮಜೂರಿ ಮೇಲೆ ಫ್ಲಾಟ್ 40% ರಿಯಾಯಿತಿ

ವಿಶೇಷ ಮುಂಗಡ ಚಿನ್ನ ಕಾಯ್ದಿರಿಸುವಿಕೆಯ ಕೊಡುಗೆ

Joyalukkas

ಮೈಸೂರು, ಮಾ. 20– ಜನಪ್ರಿಯ ಜುವೆಲ್ಲರಿ ಜೋಯಾಲುಕ್ಕಾಸ್ ಗ್ರಾಹಕರಿಗೆ ವಿಶೇಷ ಸೀಮಿತ ಅವಧಿಯ ಕೊಡುಗೆಯನ್ನು ಘೋಷಿಸಿದ್ದು, ಈ ಗರಿಷ್ಠ ಖರೀದಿ ಋತುವಿನಲ್ಲಿ ಆಭರಣ ಖರೀದಿಗಳ ಮೇಲೆ ಅಸಾಧಾರಣ ಮೌಲ್ಯವನ್ನು ತರುತ್ತದೆ. ಈ ಕೊಡುಗೆ 2026ರ ಮಾರ್ಚ್ 18 ರಿಂದ ಮಾರ್ಚ್ 22ರ ವರೆಗೆ ಜೋಯಾಲುಕ್ಕಾಸ್ ಮಳಿಗೆಗಳಲ್ಲಿ ಲಭವಿರುತ್ತದೆ.

ಈ ಅಭಿಯಾನದ ಅಂಗವಾಗಿ, ಗ್ರಾಹಕರು ಎಲ್ಲಾ ಆಭರಣ ಸಂಗ್ರಹಗಳ ವ್ಯಾಪಕ ಶ್ರೇಣಿಯ ಮೇಲೆ ಫ್ಲಾಟ್ 40% ರಿಯಾಯಿತಿಯನ್ನು ಆನಂದಿಸಬಹುದು. ಕಾಲಾತೀತ ಸಾಂಪ್ರದಾಯಿಕ ವಿನ್ಯಾಸಗಳಿಂದ ಸಮಕಾಲೀನ ಸೃಷ್ಟಿಗಳವರೆಗೆ, ಈ ಕೊಡುಗೆಯು ಗ್ರಾಹಕರಿಗೆ ಹೆಚ್ಚುವರಿ ಮೌಲ್ಯದೊಂದಿಗೆ ಆಭರಣಗಳಲ್ಲಿ ಹೂಡಿಕೆ ಮಾಡಲು ಅತ್ಯುತ್ತಮ ಅವಕಾಶವನ್ನು ಒದಗಿಸುತ್ತದೆ.

ಇದಲ್ಲದೆ, ಜೋಯಾಲುಕ್ಕಾಸ್ ತಮ್ಮ ಮುಂಬರುವ ಖರೀದಿಗಳನ್ನು ಯೋಜಿಸುತ್ತಿರುವ ಗ್ರಾಹಕರಿಗೆ ಮಾರ್ಚ್ 18 ರಿಂದ ಏಪ್ರಿಲ್ 18 ರವರೆಗೆ ಮಾತ್ರ ವಿಶೇಷ ಮುಂಗಡ ಕಾಯ್ದಿರಿಸುವಿಕೆಯ ಕೊಡುಗೆಯನ್ನು ಪರಿಚಯಿಸುತ್ತಿದೆ. ಗ್ರಾಹಕರು ಕೇವಲ 10% ಮುಂಗಡವಾಗಿ ಪಾವತಿಸಬಹುದು ಮತ್ತು ಪ್ರಸ್ತುತ ಚಿನ್ನದ ದರವನ್ನು ಸುಭದ್ರಗೊಳಿಸಿ ಮೇ 2, 2026 ರವರೆಗೆ ಪಡೆಯಬಹುದು. ಇದು ಚಿನ್ನದ ಬೆಲೆಯಲ್ಲಿನ ಸಂಭಾವ್ಯ ಏರಿಳಿತಗಳ ವಿರುದ್ಧ ಹೆಚ್ಚಿನ ನಿಯಂತ್ರಣ ಮತ್ತು ರಕ್ಷಣೆಯನ್ನು ನೀಡುತ್ತದೆ.

ಅಭಿಯಾನದ ಕುರಿತು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡ ಸಿಎಂಡಿ ಜೋಯಾಲುಕ್ಕಾಸ್, ಇದು ಆಭರಣ ಖರೀದಿಗೆ ಸಮರ್ಪಕವಾದ ಮತ್ತು ಮಹತ್ವದ ಅವಧಿಯಾಗಿದೆ. ಏಕೆಂದರೆ ಅನೇಕ ಗ್ರಾಹಕರು ಮದುವೆ, ವಿಶೇಷ ಸಂದರ್ಭ ಮತ್ತು ದೀರ್ಘಾವಧಿಯ ಹೂಡಿಕೆಗಳಿಗಾಗಿ ಮುಂಚಿತವಾಗಿ ಯೋಜಿಸುತ್ತಾರೆ. ಜೋಯಾಲುಕ್ಕಾಸ್‌ನಲ್ಲಿ, ನಾವು ಅಸಾಧಾರಣ ಆಭರಣಗಳನ್ನು ಮಾತ್ರವಲ್ಲದೆ ಅರ್ಥಪೂರ್ಣ ಮೌಲ್ಯವನ್ನೂ ನೀಡಲು ಬದ್ಧರಾಗಿದ್ದೇವೆ. ಈ ಕೊಡುಗೆಗಳನ್ನು ನಮ್ಮ ಗ್ರಾಹಕರಿಗೆ ಸರಿಯಾದ ಸಮಯದಲ್ಲಿ ತಮ್ಮ ಖರೀದಿಗಳನ್ನು ಮಾಡಲು ವಿಶ್ವಾಸವನ್ನು ನೀಡಲು ವಿನ್ಯಾಸಗೊಳಿಸಲಾಗಿದೆ. ನಾವಿನ್ಯತೆ ಮತ್ತು ಭರವಸೆ ಎರಡರಲ್ಲೂ ತನ್ನ ಅಪ್ರತಿಮ ವಿನ್ಯಾಸ, ವಿಶ್ವಾಸಾರ್ಹ ಗುಣಮಟ್ಟ ಮತ್ತು ಅಸಾಧಾರಣ ಸೇವೆಯೊಂದಿಗೆ, ಜೋಯಾಲುಕ್ಕಾಸ್ ಪ್ರತಿ ಹಬ್ಬದ ಆಚರಣೆಯನ್ನು, ತನ್ನ ಗ್ರಾಹಕರಿಗೆ ಇನ್ನಷ್ಟು ಸ್ಮರಣೀಯವಾಗಿಸುತ್ತದೆ.

ನಜರ್‌ಬಾದ್, ಲಷ್ಕರ್ ಠಾಣೆಗೆ ನೂತನ ಡಿಸಿಪಿ ಡಾ.ಹರ್ಷ ಪ್ರಿಯಂವದ ಭೇಟಿ

ಕಾರ್ಯಚಟುವಟಿಕೆಗಳ ಪರಿಶೀಲನೆ



ಮೈಸೂರಿನ ನಜರ್‌ಬಾದ್ ಮತ್ತು ಲಷ್ಕರ್ ಪೊಲೀಸ್ ಠಾಣೆಗೆ ಭೇಟಿ ನೀಡಿದ ನೂತನ ಡಿಸಿಪಿ ಡಾ.ಹರ್ಷ ಪ್ರಿಯಂವದ, ಪರಿಶೀಲನೆ ನಡೆಸಿದರು.


ಮೈಸೂರು, ಮಾ.20(ಎಂಕೆ)– ಮೈಸೂರಿನ ನಜರ್‌ಬಾದ್ ಮತ್ತು ಲಷ್ಕರ್ ಪೊಲೀಸ್ ಠಾಣೆಗೆ ಭೇಟಿ ನೀಡಿದ ನೂತನ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಡಾ.ಹರ್ಷ ಪ್ರಿಯಂವದ, ಪರಿಶೀಲನೆ ನಡೆಸಿದರು.

ಯುಗಾದಿ ಹಬ್ಬದ ದಿನದಂದು ಈ ಎರಡು ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿದ ಅವರು, ಅಲ್ಲಿನ ಕಾರ್ಯಚಟುವಟಿಕೆ, ದಾಖಲೆಗಳ ನಿರ್ವಹಣೆ, ಪ್ರಕರಣಗಳ ತನಿಖೆ ಕುರಿತು ಮಾಹಿತಿ ಪಡೆದರು. ಅಲ್ಲದೆ ದೈನಂದಿನ ಕಾರ್ಯವೈಖರಿ ಕುರಿತು ಠಾಣಾಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ಹಾಗೂ ಕೆಲ ಸಲಹೆ–ಸೂಚನೆಗಳನ್ನು ನೀಡಿದರು.

ನಜರ್‌ಬಾದ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಹಾಗೂ ಲಷ್ಕರ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಲೋಲಾಕ್ಷಿ ನೇತೃತ್ವದಲ್ಲಿ ನೂತನ ಉಪ ಪೊಲೀಸ್ ಆಯುಕ್ತರ ಸ್ವಾಗತಿಸಿ, ಈ ವೇಳೆ ಅಭಿನಂದಿಸಲಾಯಿತು. ಈ ಎರಡು ಠಾಣೆಗಳ ಪಿಎಸ್‌ಐ, ಎಎಸ್‌ಐ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಯುಗಾದಿ ವಿಶೇಷ ಪೂಜೆ

ಹೊಸವರ್ಷದ ಕ್ಯಾಲೆಂಡರ್ ಬಿಡುಗಡೆ, ಪ್ರಸಾದ ವಿನಿಯೋಗ



ನೂತನ ದಿನಚರಿ(ಕ್ಯಾಲೆಂಡರ್)ಯನ್ನು ದೇವಾಲಯದ ಸಂಸ್ಥಾಪಕರಾದ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಮೈಸೂರು, ಮಾ.20(ಜಿಎ)–ಯುಗಾದಿ ಹಬ್ಬದ ಅಂಗವಾಗಿ ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗನರಸಿಂಹ ಸ್ವಾಮಿ ದೇವಸ್ಥಾದಲ್ಲಿ ಶ್ರೀ ಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಿ, 'ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

ಪ್ರತಿ ವರ್ಷದಂತೆ ನೂತನ ದಿನಚರಿ (ಕ್ಯಾಲೆಂಡರ್)ಯನ್ನು ದೇವಾಲಯದ ಸಂಸ್ಥಾಪಕರಾದ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಬಿಡುಗಡೆಗೊಳಿಸಿದರು. ಈ ವೇಳೆ ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಬಿ.ಕುಮಾರ್ ದಂಪತಿ, ರಘುಲಾಲ್ ಕಂಪನಿಯ ಮುಖ್ಯಸ್ಥರಾದ ರಾಘವನ್, ಮೈಸೂರಿನ ಪ್ರತಿಷ್ಠಿತ ಅಸ್ಕರ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಸೂರ್ಯ ನಾರಾಯಣ ರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಂತರ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್. ಶ್ರೀನಿವಾಸ್ ಮಾತನಾಡಿ, ವರ್ಷದ ಮೊದಲ ದಿನವೇ ಯುಗಾದಿ ಎಂಬುದು ಹಿಂದೂ ಧರ್ಮದ ಪ್ರತೀತಿಯಾಗಿದೆ. ಬೇವು– ಬೆಲ್ಲದ ಸಮಾಗಮದ ಈ ದಿನದಂದು ಆ ಭಗವಂತನು ಎಲ್ಲರಿಗೂ ಸರ್ವಮಂಗಳವನ್ನುಂಟು ಮಾಡಲಿ ಎಂದು ಹಾರೈಸಿದರು.

ಯೋಗನರಸಿಂಹ ಸ್ವಾಮಿ ದೇವಾಲಯದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ನೂತನ ದಿನಚರಿ (ಕ್ಯಾಲೆಂಡರ್)ಯನ್ನು ದೇಗುಲದ ಸಂಸ್ಥಾಪಕರಾದ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಅವರ ಅಮೃತ ಹಸ್ತದಿಂದ ಬಿಡುಗಡೆ ಮಾಡಲಾಗಿದೆ. ಈ ಯುಗಾದಿಯಿಂದ ಮುಂದಿನ ಸಾಲಿನ ಯುಗಾದಿವರೆಗಿನ ಧಾರ್ಮಿಕ ಪರಂಪರೆಯುಳ್ಳ, ದೇವಾಲಯದ ಎಲ್ಲ ಉತ್ಸವಗಳು ಸೇರಿದಂತೆ ಇನ್ನಿತರ ಅಗತ್ಯ ಮಾಹಿತಿಗಳು ಈ ದಿನಚರಿಯಲ್ಲಿ ಇರುವುದು ವಿಶೇಷ ಎಂದರು.

ಈ ಕಾರ್ಯಕ್ಕೆ ಎಲ್ಲಾ ರೀತಿಯ ಸಹಕಾರ ನೀಡುತ್ತಾ ಬಂದಿರುವ ನಗರದ ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರಾದ ಕೆ.ಬಿ.ಕುಮಾರ್ ಅವರ ಸೇವಾ ಕಾರ್ಯಗಳು ಹೀಗೆ ಮುಂದುವರೆಯಲಿ, ಶ್ರೀ ಸ್ವಾಮಿಯ ಆಶೀರ್ವಾದ ಸದಾ ಅವರ ಮೇಲಿರಲಿ ಹಾಗೂ ನಾಡಿನ ಎಲ್ಲಾ ಜನರಿಗೂ ಒಳಿತಾಗಲಿ ಎಂದು ಶುಭಕೋರಿದರು.

ಬೇವು–ಬೆಲ್ಲದ ಬಾಂಧವ್ಯ



ಯುಗಾದಿ ಹಬ್ಬ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಹಿಂದೂ ಬಾಂಧವರು ಮುಸಲ್ಮಾನ್ ಬಾಂಧವರಿಗೆ ಬೇವು–ಬೆಲ್ಲ ನೀಡಿ ಎರಡು ಸಮುದಾಯದವರು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಈ ವೇಳೆ ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಜಿ ರಾಘವೇಂದ್ರ, ತೀರ್ಥ ಕುಮಾರ್, ಎಸ್ ಎನ್ ರಾಜೇಶ್, ನಾಸಿರ್ ಪಾಷ, ಮೋಹಿಬೆ ಶರೀಫ್, ಮುನಾವರ್ ಪಾಷಾ, ಅನ್ಸರ್ ಪಾಷಾ, ಸನ ಹುಲಾ, ನವೀನ್ ಕೆಂಪಿ, ರವಿ ನಂದನ್, ಬಾಲರಾಜು, ಅನಂತರಾಜು ಮತ್ತಿತರರು ಉಪಸ್ಥಿತರಿದ್ದರು.

ಮೇ 10 ರಂದು ರಾಜ್ಯಮಟ್ಟದ ಯೋಗಾಸನ ಸ್ಪರ್ಧೆ

ಮೈಸೂರು, ಮಾ. 20– ಮೈಸೂರಿನ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಮೊದಲ ಬಾರಿಗೆ 2026ನೇ ಸಾಲಿನ ಶ್ರೀ ಮಹರ್ಷಿ ವಾಲ್ಮೀಕಿ ಯೋಗ ರತ್ನ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ ಮೇ 10ರಂದು ಆಯೋಜಿಸಲಾಗಿದೆ ಎಂದು ಫೌಂಡೇಷನ್ ಗೌರವಾಧ್ಯಕ್ಷ ಮಹೇಶ್ ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ ಗೆದ್ದವರಿಗೆ ಆಕರ್ಷಕ ಟ್ರೋಫಿ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ವಿಶೇಷ ವಿಭಾಗಗಳಲ್ಲಿ ವಿಜೇತರಿಗೆ ಬಹುಮಾನಗಳನ್ನು ನೀಡಲಾಗುತ್ತದೆ. ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೆ ಪ್ರಮಾಣ ಪತ್ರ ಹಾಗೂ ಮೆಡಲ್ ನೀಡಲಾಗುತ್ತದೆ.ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9448980010 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಏ.26 ಮೈಸೂರಲ್ಲಿ ಉಚಿತ ಸಾಮೂಹಿಕ ವಿವಾಹ

ಮೈಸೂರು, ಮಾ.20(ಜಿಎ)–ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ಏ.26ರಂದು ಲಷ್ಕರ್ ಮೊಹಲ್ಲಾದ ಗೀತಾ ಮಂದಿರದಲ್ಲಿ ಉಚಿತ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪರಿಷತ್ ಸಂಸ್ಥಾಪಕ ಡಾ.ಕಸ್ತೂರಿ ಚಂದ್ರ ಈ ವಿಷಯ ತಿಳಿಸಿ, ಪ್ರಯೋಜನ ಪಡೆಯಲಿಚ್ಛಿಸುವವರು ಏ.15ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಈಗಾಗಲೇ ನಾಲ್ಕು ಜೋಡಿಗಳ ಆಯ್ಕೆ ನಡೆದಿದೆ. ಇತರರು ನೋಂದಣಿ ಮಾಡಿಕೊಂಡಲ್ಲಿ ಅವಕಾಶವಿದೆ. ವಧುವಿಗೆ ಚಿನ್ನದ ಮಾಂಗಲ್ಯ, ಸೀರೆ, ಕುಪ್ಪಸ, ಕಾಲುಂಗುರ, ವರನಿಗೆ ಪಂಚೆ, ವಲ್ಲಿ, ಶರ್ಟ್ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 88676 88676 ನ್ನು ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಾಧ್ಯಕ್ಷರಾದ ಮೌಲ್ಯ, ರೂಪಾ, ಅಮಿನಾ ಬೇಗಂ, ತೇಜಸ್ ಪೃಥ್ವಿರಾಜ್, ಶಿವರಾಜು ಉಪಸ್ಥಿತರಿದ್ದರು.

ವಿಶ್ವ ಗುಬ್ಬಚ್ಚಿ ದಿನಾಚರಣೆ

ಅಳಿವಿನಂಚಿನಲ್ಲಿರುವ ನೆಚ್ಚಿನ ಗುಬ್ಬಚ್ಚಿ ಪಕ್ಷಿ ಸಂಕುಲ ಸಂರಕ್ಷಣೆ ಆಗಲೇಬೇಕು

●ಪಕ್ಷಿ ಪ್ರೇಮಿಗಳ ಪ್ರತಿಪಾದನೆ ●ಪೀಪಲ್ಸ್ ಫಾರ್ ಅನಿಮಲ್ಸ್‌ನಲ್ಲಿ ಕಾರ್ಯಕ್ರಮ; ಗುಬ್ಬಚ್ಚಿ ಗೂಡು, ನೀರಿನ ಬಟ್ಟಲು ವಿತರಣೆ



ಮೈಸೂರಿನ ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯಲ್ಲಿ ಜೈನ್ ಜೀವ್ ದಯಾ ಚಾರಿಟಿ ಸಂಸ್ಥೆ ಆಯೋಜಿಸಿದ್ದ ವಿಶ್ವ ಗುಬ್ಬಚ್ಚಿ ದಿನಾಚರಣೆ ಕಾರ್ಯಕ್ರಮದಲ್ಲಿ ಮಣ್ಣಿನಿಂದ ಮಾಡಿದ ಗುಬ್ಬಚ್ಚಿ ಗೂಡು ಹಾಗೂ ಆಹಾರ ಮತ್ತು ನೀರು ಪೂರೈಸುವ ಬಟ್ಟಲನ್ನು ವಿತರಿಸಲಾಯಿತು.

ಮೈಸೂರು,ಮಾ.20(ಎಂಟಿವೈ)– ವಿಶ್ವ ಗುಬ್ಬಚ್ಚಿ ದಿನದ ಅಂಗವಾಗಿ ಅಳಿವಿನಂಚಿನಲ್ಲಿರುವ ಗುಬ್ಬಚ್ಚಿ ಸಂತತಿ ಸಂರಕ್ಷಣೆ ಜಾಗೃತಿ ದೃಷ್ಟಿಯಿಂದ ಶುಕ್ರವಾರ ಮೈಸೂರಿನ ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆ ಆವರಣದಲ್ಲಿ ಗುಬ್ಬಚ್ಚಿ ಗೂಡು ಹಾಗೂ ಗುಬ್ಬಚ್ಚಿಗೆ ನೀರುಣಿಸುವ ಮಣ್ಣಿನ ಬಟ್ಟಲು ವಿತರಿಸಲಾಯಿತು.

ಮೈಸೂರಿನ ಬೋಗಾದಿಯಲ್ಲಿರುವ ಪೀಪಲ್ಸ್ ಫಾರ್ ಅನಿಮಲ್ಸ್(ಪಿಎಫ್‌ಎ) ಆವರಣದಲ್ಲಿ ಜೈನ್ ಜೀವ್ ದಯಾ ಚಾರಿಟಿ ಆಯೋಜಿಸಿದ್ದ ವಿಶ್ವ ಗುಬ್ಬಚ್ಚಿ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನೂರಾರು ಪಕ್ಷಿ ಪ್ರಿಯರಿಗೆ ಮಣ್ಣಿನಿಂದ ಮಾಡಿರುವ ಗುಬ್ಬಚ್ಚಿ ಗೂಡು, ಪಕ್ಷಿಗಳಿಗೆ ಆಹಾರ ನೀಡಲು ಸ್ಟ್ಯಾಂಡ್ ಮಾದರಿಯ ಕಂಟೇನರ್, ಪಕ್ಷಿಗಳಿಗೆ ನೀರು ಕುಡಿಯಲು ಮಣ್ಣು ಹಾಗೂ ಸೀಮೆಂಟ್‌ನಿಂದ ತಯಾರಿಸಿರುವ ಬಟ್ಟಲನ್ನು ವಿತರಿಸಲಾಯಿತು.

ಸೀನಿಯರ್ ಪ್ರಾಣಿಕ್ ಹೀಲಿಂಗ್ ಟ್ರೈನರ್ ಬಿ.ವೈಭವ್ ಮಾತನಾಡಿ, ನಮ್ಮ ಬಾಲ್ಯದ ದಿನಗಳಲ್ಲಿ ಗುಬ್ಬಚ್ಚಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ನೋಡುವ ಅವಕಾಶ ನಮಗೆ ಸಿಕ್ಕಿತ್ತು. ಆದರೆ, ಇಂದಿನ ಮಕ್ಕಳಿಗೆ ಗುಬ್ಬಚ್ಚಿ ನೋಡುವುದೇ ಅಪರೂಪ. ಈ ಹಿನ್ನೆಲೆಯಲ್ಲಿ ಗುಬ್ಬಚ್ಚಿಗಳ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ. ಈ ಹಿಂದೆ ಮನೆಯ ಮೇಲ್ಛಾವಣಿಯಲ್ಲಿ ಗುಬ್ಬಚ್ಚಿಗಳು ಗೂಡು ಮಾಡಿಕೊಂಡು ಸಂತಾನಾಭಿವೃದ್ಧಿ ಮಾಡುತ್ತಿದ್ದವು. ಆದರೆ, ಈಗ ಅವಕಾಶ ಇಲ್ಲದಂತಾಗಿದೆ. ಇದರಿಂದ ಗುಬ್ಬಚ್ಚಿಗಳನ್ನು ಆಕರ್ಷಿಸಲು ಕೃತಕ ಗೂಡುಗಳನ್ನು ಮನೆ ಬಳಿ ಕಟ್ಟಿ, ಅವುಗಳಿಗೆ ಬೇಕಾದ ಆಹಾರ ಪೂರೈಸಿದರೆ ಮುಂದಿನ ದಿನಗಳಲ್ಲಿ ಮಕ್ಕಳಿಗೆ ಗುಬ್ಬಚ್ಚಿ ಸಂತತಿ ಸಂರಕ್ಷಿಸಿ ಕೊಡುಗೆ ನೀಡಲು ಸಾಧ್ಯ ಎಂದರು.

ಖಿನ್ನತೆಗೆ ಒಳಗಾದ ಅನೇಕರು ಚಿಕಿತ್ಸೆಗೆಂದು ಬಂದಾಗ ಮನೆಯಲ್ಲಿ ಸಾಕು ಪ್ರಾಣಿಗಳು ಸಾಕಿರುವ ಮಾಹಿತಿ ಕೇಳುತ್ತೇನೆ. ಯಾರ ಮನೆಯಲ್ಲಿ ಸಾಕು ಪ್ರಾಣಿಗಳಿಲ್ಲವೋ ಆ ಮನೆಗಳಲ್ಲಿ ಖಿನ್ನತೆಗೆ ಒಳಗಾಗಿರುವವರನ್ನು ಕಾಣಬಹುದು. ಸಾಕು ಪ್ರಾಣಿಗಳು ಮನೆಯಲ್ಲಿರುವವರೊಂದಿಗೆ ಅನ್ಯೋನ್ಯವಾಗಿರುವುದರಿಂದ ಆ ಮನೆಯಲ್ಲಿ ನಗು, ಸಂತೋಷದ ವಾತಾವರಣ ನಿರ್ಮಾಣವಾಗುತ್ತದೆ. ಖಿನ್ನತೆಯೆಂಬ ಮನೋರೋಗ ದೂರವಾಗುತ್ತದೆ. ಈ ಹಿನ್ನೆಲೆಯಲ್ಲಿ ಜನ ಸಾಕು ಪ್ರಾಣಿಗಳನ್ನು ಸಾಕಿ, ಅವುಗಳೊಂದಿಗೆ ಒಡನಾಟ ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಜೈನ್ ಜೀವ್ ದಯಾ ಚಾರಿಟಿ ವತಿಯಿಂದ ಕೋಕಿಲ ರಮೇಶ್ ಜೈನ್ ಮಾತನಾಡಿ, ಜೈನ್ ಜೀಬ್ ದಯಾ ಚಾರಿಟಿ ಸಂಸ್ಥೆಯು ಕಳೆದ ನಾಲ್ಕು ವರ್ಷಗಳಿಂದ ಗುಬ್ಬಚ್ಚಿ ದಿನಾಚರಣೆ ಆಚರಿಸುತ್ತಾ ಬಂದಿದ್ದು, ಆಸಕ್ತಿಗೆ ಗುಬ್ಬಚ್ಚಿ ಗೂಡುಗಳನ್ನು ವಿತರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆಸಕ್ತರು ತೆಗೆದುಕೊಂಡು ಹೋದ ಗೂಡುಗಳಿಗೆ ಗುಬ್ಬಚ್ಚಿಗಳು ಸೇರುತ್ತಿರುವುದು ಸಂತೋಷ ತಂದಿದೆ ಎಂದರು.

ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಸವಿತಾ ನಾಗಭೂಷಣ್ ಮಾತನಾಡಿ, ಗುಬ್ಬಚ್ಚಿಗಳನ್ನು ಉಳಿಸಲು ಎಲ್ಲರೂ ಪಣ ತೊಡಬೇಕು. ನಗರ ಪ್ರದೇಶದಿಂದ ಕಾಣೆಯಾಗುತ್ತಿರುವ ಪಕ್ಷಿಗಳನ್ನು ಮತ್ತೆ ನಗರ ಪ್ರದೇಶದಲ್ಲಿ ನೆಲೆಸುವಂತೆ ಅವುಗಳಿಗೆ ಪೂರಕವಾದ ವಾತಾವರಣ ಸೃಷ್ಟಿಸಬೇಕಾಗಿದೆ ಎಂದು ತಿಳಿಸಿದರು.

ಯುಗಾದಿ ಜೀವನ ಸಂದೇಶ ಸಾರುವ ಮಹತ್ವದ ಹಬ್ಬ

●ಶಾಸಕ ಶ್ರೀವತ್ಸ ಬಣ್ಣನೆ ●ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವಕ್ಕೆ ಚಾಲನೆ



ಯುಗಾದಿ ಸಂಗೀತೋತ್ಸವಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಮೈಸೂರು, ಮಾ.20(ಎಂಕೆ)– ಜೀವನದಲ್ಲಿ ಕಷ್ಟ–ಸುಖಗಳನ್ನು ಸಮನಾಗಿ ಸರಿದೂಗಿಸಿಕೊಂಡು ಮುನ್ನಡೆಸುವುದೇ ಯುಗಾದಿ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಮೈಸೂರು ಅರಮನೆ ಆವರಣದಲ್ಲಿ ಅರಮನೆ ಮಂಡಳಿ ವತಿಯಿಂದ ಆಯೋಜಿಸಿರುವ ಮೂರು ದಿನದ ಯುಗಾದಿ ಸಂಗೀತೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬದುಕಿನಲ್ಲಿ ದುಷ್ಟ ಶಕ್ತಿಗಳನ್ನು ಸೋಲಿಸಿ, ದೈವಿಕ ಶಕ್ತಿಯನ್ನು ಪಡೆದು ಕುಟುಂಬವನ್ನು ಮುನ್ನಡೆಸಿಕೊಂಡು ಹೋಗಬೇಕು ಎಂದು ಹೇಳಿದರು.

ಹಿಂದೂ ಧರ್ಮ ಧಾರ್ಮಿಕ ಹಬ್ಬಗಳಲ್ಲಿ ಅತ್ಯಂತ ಪ್ರಮುಖ ಹಬ್ಬ. ನಮ್ಮೆಲ್ಲರ ಮನೆ ಮನಗಳಲ್ಲಿ ಸಂಭ್ರಮವನ್ನು ತರಲಿ. ನಮ್ಮ ಬದುಕನ್ನು ಇನ್ನಷ್ಟು ಗಟ್ಟಿಗೊಳಿಸಿ, ಕಷ್ಟ–ಸುಖಗಳನ್ನು ಸರಿದೂಗಿಸಿಕೊಂಡು ಮುನ್ನಡೆಸುವುದೇ ಯುಗಾದಿ ಹಬ್ಬದ ಸಂದೇಶವಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, ಯುಗಾದಿ ಹಬ್ಬವನ್ನು ರೈತ ಬಾಂಧವರು ಅದ್ದೂರಿಯಾಗಿ ಆಚರಣೆ ಮಾಡುತ್ತಾರೆ. ಬೇವು– ಬೆಲ್ಲದಂತೆ ನಮ್ಮ ಜೀವನದಲ್ಲೂ ಕಷ್ಟ–ಸುಖವನ್ನು ಸಮನಾಗಿ ಸ್ವೀಕರಿಸಿದರೆ ಯುಗಾದಿ ಹಬ್ಬ ಪರಿಪೂರ್ಣ ಅರ್ಥ ನೀಡುತ್ತದೆ ಮನುಷ್ಯನ ಜೀವನದಲ್ಲಿ ಒಳ್ಳೆಯ ದಿನಗಳಂತೆ ಕೆಟ್ಟ ದಿನಗಳೂ ಬರುತ್ತವೆ. ಹಾಗೆಯೇ ಅನೇಕ ಸಂದರ್ಭಗಳಲ್ಲಿ ಅನಿರೀಕ್ಷಿತ ಘಟನೆಗಳು ಎದುರಾಗುತ್ತವೆ. ಆದರೆ, ಆ ಕಷ್ಟಗಳನ್ನು ಎದುರಿಸಿ ಮುನ್ನಡೆದರೆ ಮುಂದೆ ಒಳ್ಳೆಯ, ಸುಖದ ದಿನಗಳು ಬಂದೇ ಬರುತ್ತವೆ ಎಂದರು.

ಯುಗಾದಿ ಹಬ್ಬದ ಸಂದರ್ಭದಲ್ಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾಗಿದ್ದು, ವಿದ್ಯಾರ್ಥಿಗಳು ಕಷ್ಟಪಟ್ಟು ಅಭ್ಯಾಸ ಮಾಡಿದರೆ, ಮುಂದಿನ ಭವಿಷ್ಯ ಬೆಲ್ಲದಂತೆ ಸಿಹಿಯಾಗಿರುತ್ತದೆ ಎಂದು ಹೇಳಿದರು.

ನಂತರ ವಿದ್ವಾನ್ ಎಂ.ಟಿ.ರವಿಕುಮಾರ್ ಮತ್ತು ತಂಡದ 'ಸ್ಯಾಕ್ಸೋಫೋನ್ ವಾದನ', ಡಾ.ಶ್ರೀಧರ ಮೂರ್ತಿ ಅವರಿಂದ 'ಪಂಚಾಂಗ ದರ್ಶನ', ವಿದ್ವಾನ್ ಎಸ್.ರಘುನಂದನ್ ಮತ್ತು ತಂಡದಿಂದ 'ಕರ್ನಾಟಕ ಶಾಸ್ತ್ರೀಯ ಸಂಗೀತ', ಶ್ರೀಮತಿ ಆರ್.ಚಂದನ ಮತ್ತು ತಂಡದಿಂದ 'ಕಾಯೌ ಶ್ರೀ ಗೌರಿ ಕರುಣಾಲಹರಿ ಗೀತೆ' ಹಾಗೂ ಶ್ರೀಮತಿ ರಶ್ಮಿ ಚಿಕ್ಕಮಗಳೂರು ಮತ್ತು ಹಿನ್ನಲೆ ಗಾಯಕ ಅಜಯ್ ವಾರಿಯರ್ ಮತ್ತು ತಂಡದಿಂದ 'ಗೀತ ಉತ್ಸವ' ಕಲಾಭಿಮಾನಿಗಳ ಕಣ್ಮನ ಸೆಳೆಯಿತು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಮತ್ತಿತರರು ಉಪಸ್ಥಿತರಿದ್ದರು.


ಟಿ.ಎ.ಪಿ.ಸಿ.ಎಂ.ಎಸ್ ಸೊಸೈಟಿ ನಿರ್ದೇಶಕರು ಹಾಗೂ ಜೆಡಿಎಸ್ ಯುವಮುಖಂಡರಾದ
ಶ್ರೀ ಕೆ.ಚಂದ್ರಶೇಖರ್ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
Happy Birthday
ಶ್ರೀ ಉಮೇಶ್
ಕಾರ್ಯದರ್ಶಿ, ಮೈಸೂರು ನಗರ ಬಿಜೆಪಿ ಯುವಮೋರ್ಚಾ
UK FINANCE
VISMAYA
8050302424